ದುಡಿಯುವ ಜನರ ಪ್ರಾಣ ಮಿತ್ರ


ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 38 | ಸೆಪ್ಟೆಂಬರ್ 16–22, 2019 | ಪುಟ 16 | ರೂ. 10



ಐಎಎಸ್ ಅಧಿಕಾರಿಗಳ ರಾಜಿನಾಮೆ ಮತ್ತು ನೈತಿಕತೆಯ ಪ್ರಶ್ನೆಗಳು



100 ದಿನಗಳು

ಒಂದು ವಿಷಮಯ ಸರ್ಕಾರದ ನೂರು ದಿನಗಳು



21ನೇ ಶತಮಾನ ಚೀರಾಟದ ಶತಮಾನವಾಗಿದೆ

– ನಾಡೋಜ ಬರಗೂರು ರಾಮಚಂದ್ರಪ್ಪ



ಕಲ್ಲಿದ್ದಲು ವಲಯದಲ್ಲಿ ನೇರ ಹೂಡಿಕೆ!

ಅಸ್ಸಾಂ ಎನ್‌ಆರ್‌ಸಿ: ಎಲ್ಲರಿಗೂ ನ್ಯಾಯ ಒದಗಿಸಬೇಕು
ಬಂಧನ ಶಿಬಿರ ವ್ಯವಸ್ಥೆಯನ್ನು ರದ್ದು ಮಾಡಬೇಕು–ಎಡಪಕ್ಷಗಳ ಆಗ್ರಹ

ಅಸ್ಸಾಂನಲ್ಲಿ 'ರಾಷ್ಟ್ರೀಯ ನಾಗರಿಕರ ದಾಖಲೆ'(ಎನ್‌ಆರ್‌ಸಿ) ಅಂತಿಮ ಪಟ್ಟಿ ನಾಗರಿಕತ್ವಕ್ಕೆ ಅರ್ಜಿ ಹಾಕಿರುವವರಲ್ಲಿ 19.06 ಲಕ್ಷ ಮಂದಿಯನ್ನು ಕೈಬಿಟ್ಟಿದೆ. ಇವರಲ್ಲಿ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿ ಭಾರತದ ನಾಗರಿಕರಿದ್ದಾರೆ ಎಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

ಆದ್ದರಿಂದ ಇಂತಹವರ ಮನವಿಗಳ ವಿಚಾರಣೆ ನಡೆಸಿ ನಿರ್ಧರಿಸಲು ಒಂದು ನ್ಯಾಯಯುತ ಪ್ರಕ್ರಿಯೆ ಇರುವಂತೆ ಮಾಡುವುದು ಅಗತ್ಯವಾಗಿದೆ. ಈಗ ಹೇಳಿರುವ ವಿಧಾನವೆಂದರೆ, ಹೀಗೆ ಕೈಬಿಡಲಾದವರು 120 ದಿನಗಳೊಳಗೆ ನಿರ್ಧಾರಿತ ವಿದೇಶೀಯರ ನ್ಯಾಯಮಂಡಳಿಗಳಿಗೆ ಅರ್ಜಿ ಸಲ್ಲಿಸಬೇಕು. ಈ ನ್ಯಾಯಮಂಡಳಿ ಒಂದು ನ್ಯಾಯಾಂಗ ಸಂಸ್ಥೆ ಅಲ್ಲ. ಅದು ಹೆಚ್ಚಾಗಿ ಕಾರ್ಯಾಂಗದ ರೀತಿಯಲ್ಲೇ ಕೆಲಸ ಮಾಡುವಂತದ್ದು. ಈಗಿರುವ ನಿಯಮಗಳ ಪ್ರಕಾರ, ಅದು ಒಂದು ಅರ್ಜಿ ಸ್ವೀಕಾರಯೋಗ್ಯವೇ ಎಂದು ಪರಿಶೀಲಿಸಿದ ಮೇಲೆಯೇ ಅದನ್ನು ವಿಚಾರಣೆಗೆ ಎತ್ತಿಕೊಳ್ಳಲು ನಿರ್ಧರಿಸುತ್ತದೆ. ಆದರೆ ಇಂತಹ ಪೂರ್ವ ಪರಿಶೀಲನೆ ಅನಗತ್ಯ. ಒಂದು ನ್ಯಾಯಯುತ ಪ್ರಕ್ರಿಯೆಗಾಗಿ, ಮತ್ತು ಕೈಬಿಡಲಾದವರ ಹಕ್ಕುಗಳ ರಕ್ಷಣೆಗಾಗಿ ಈ ಅರ್ಜಿಗಳು ಒಂದು ನ್ಯಾಯಾಂಗ ಪ್ರಕ್ರಿಯೆಯ ಮೂಲಕವೇ ಇತ್ಯರ್ಥಗೊಳ್ಳಬೇಕು. ಆದ್ದರಿಂದ ಅರ್ಜಿಗಳ ವಿಚಾರಣೆಗೆ ನ್ಯಾಯಮಂಡಳಿಗಳಲ್ಲದೆ ಒಂದು ನ್ಯಾಯಾಂಗ ವ್ಯವಸ್ಥೆಯನ್ನು ರಚಿಸಬೇಕು ಎಂದು ಐದು ಎಡಪಕ್ಷಗಳು– ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್)ಲಿಬರೇಷನ್, ಅಖಿಲ ಭಾರತ ಫಾರ್ವರ್ಡ್ ಬ್ಲಾಕ್ ಮತ್ತು ಆರ್‌ಎಸ್‌ಪಿ – ಆಗ್ರಹಿಸಿವೆ.

ನ್ಯಾಯಮಂಡಳಿಗಳು ವಿದೇಶೀಯರೆಂದು ಘೋಷಿಸುವ ಜನಗಳನ್ನು ಸ್ಥಾನಬದ್ಧತಾ ಶಿಬಿರಗಳಿಗೆ ಕಳಿಸಲಾಗುವುದು. ಈ ಶಿಬಿರಗಳಲ್ಲಿ ಬಂಧಿತರಾದವರಿಗೆ ಪ್ರಾಥಮಿಕ ಮಾನವ ಹಕ್ಕುಗಳೂ ಇರುವುದಿಲ್ಲ. ಜನಗಳನ್ನು ಇಂತಹ ಶಿಬಿರಗಳಲ್ಲಿ ಅನಿರ್ದಿಷ್ಟ ಕಾಲ ಸ್ಥಾನಬದ್ಧತೆಯಲ್ಲಿ ಇಡುವುದು ಕಾನೂನುಬಾಹಿರ ಮತ್ತು ಅಸಂವೈಧಾನಿಕ ಕ್ರಮವಾಗುತ್ತದೆ. ಈ ಬಂಧನ ಶಿಬಿರ ವ್ಯವಸ್ಥೆಯನ್ನು ರದ್ದು ಮಾಡಬೇಕು ಎಂದೂ ಎಡಪಕ್ಷಗಳು ಆಗ್ರಹಿಸಿವೆ.

ಅಸ್ಸಾಂನ ಬಿಜೆಪಿ ಎನ್‌ಆರ್‌ಸಿ ಪಟ್ಟಿಯ ಮರು ಪರೀಕ್ಷಣೆ ನಡೆಸಬೇಕು ಅಥವ ಹೊಸದೊಂದು ಎನ್‌ಆರ್‌ಸಿಯನ್ನೇ ನಡೆಸಬೇಕು ಎಂದು ಆಗ್ರಹಿಸುತ್ತಿದೆ. ಇದನ್ನು ಮಾಡಬಾರದು, ಏಕೆಂದರೆ ಇದು ಅದರ ಕೋಮುವಾದಿ ಮತ್ತು ವಿಭಜನಕಾರೀ ಅಜೆಂಡಾವನ್ನು ಮುಂದೊತ್ತಲಿಕ್ಕಾಗಿ ಮಾತ್ರ. ಕೋಮು ಸೌಹಾರ್ದವನ್ನು ಕಾಯ್ದುಕೊಳ್ಳಬೇಕು, ಎನ್‌ಆರ್‌ಸಿಯಿಂದ ಹೊರಗಿಟ್ಟಿರುವವರನ್ನು ಯಾವುದೇ ರೀತಿಯಲ್ಲಿ ಗುರಿಮಾಡಲು ಬಿಡಬಾರದು ಎಂದು ಅಸ್ಸಾಂನ ಜನತೆಯನ್ನು ಎಡಪಕ್ಷಗಳು ವಿನಂತಿಸಿಕೊಂಡಿವೆ.

ಬಿಜೆಪಿ ಸರಕಾರ ಈ ಎನ್‌ಆರ್‌ಸಿ ಪ್ರಕ್ರಿಯೆಯನ್ನು ಇಡೀ ದೇಶಕ್ಕೆ ವಿಸ್ತರಿಸುವ ಬಗ್ಗೆ ಮಾತಾಡುತ್ತಿದೆ. ಇದು ಸಂಪೂರ್ಣವಾಗಿ ಅನಗತ್ಯ, ಕೆಲವು ಜನವಿಭಾಗಗಳ ಮೇಲೆ ಗುರಿಯಿಡುವುದು ಮತ್ತು ಧ್ರುವೀಕರಣವನ್ನು ಸೃಷ್ಟಿಸುವುದೇ ಇದರ ಉದ್ದೇಶ. ಭಾರತದ ಇತರೆಡೆಗಳಿಗೆ ಎನ್‌ಆರ್‌ಸಿ ಪ್ರಕ್ರಿಯೆಯನ್ನು ಯಾವುದೇ ಸ್ವರೂಪದಲ್ಲಿ ವಿಸ್ತರಿಸುವುದನ್ನು ತಾವು ವಿರೋಧಿಸುವುದಾಗಿ ಎಡಪಕ್ಷಗಳು ಹೇಳಿವೆ.

ಮದ್ರಾಸ್ ಹೈಕೋರ್ಟ್ ಮುಖ್ಯ ನ್ಯಾಯಾಧೀಶರ ವರ್ಗಾವಣೆ
ಒಟ್ಟು ಮಹಿಳೆಯರಿಗೇ ಮಾಡಿರುವ ಅವಮಾನ–ಬೃಂದಾ ಕಾರಟ್



ಮದ್ರಾಸ್ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ವಿಜಯಾ ತಹಿಲ್ರಮಣಿಯವರ ವರ್ಗಾವಣೆ ಮತ್ತು ತದನಂತರ ಅವರ ರಾಜೀನಾಮೆಯ ಸುದ್ದಿ ಅತ್ಯಂತ ಆಘಾತಕಾರಿ ಮತ್ತು ಆತಂಕಕಾರಿ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಹೇಳಿದ್ದಾರೆ. ನ್ಯಾಯಾಧೀಶರುಗಳ ನೇಮಕ ಮಾಡುವ ಸುಪ್ರಿಂ ಕೋರ್ಟಿನ ಐದು ಹಿರಿಯ ನ್ಯಾಯಾಧೀಶರ ಕೊಲೇಜಿಯಂ ಅವರನ್ನು ಆಗಸ್ಟ್ 28ರಂದು ಮೇಘಾಲಯ ಹೈಕೋರ್ಟಿಗೆ ವರ್ಗಾವಣೆ ಮಾಡಿತ್ತು. ಇದನ್ನು ಮರುಪರಿಶೀಲಿಸಬೇಕು ಎಂದು ನ್ಯಾಯಮೂರ್ತಿ ವಿಜಯಾ ತಹಿಲ್ರಮಣಿ ಕೊಲೇಜಿಯಂಗೆ ಮನವಿ ಮಾಡಿಕೊಂಡರು. ಆದರೆ ಇದು ನ್ಯಾಯಾಂಗದ ಅಗತ್ಯಗಳಿಗೆ ಅನುಗುಣವಾಗಿ ಸಾಮಾನ್ಯವಾಗಿ ನಡೆಯುವ ವರ್ಗಾವಣೆ ಎನ್ನುತ್ತ ಅವರ ಕೋರಿಕೆಯನ್ನು ತಿರಸ್ಕರಿಸಲಾಯಿತು. ಈ ಹಿನ್ನೆಲೆಯಲ್ಲಿ ಅವರು ಮುಖ್ಯ ನ್ಯಾಯಾಧೀಶರ ಹುದ್ದೆಗೆ ರಾಜೀನಾಮೆ ನೀಡಿರುವುದಾಗಿ ವರದಿಯಾಗಿದೆ.

75 ನ್ಯಾಯಾಧೀಶರುಗಳಿರುವ ಒಂದು ದೊಡ್ಡ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದ ಅವರನ್ನು ಕೇವಲ ಮೂವರು ನ್ಯಾಯಾಧೀಶರಿರುವ ದೇಶದ ಅತಿ ಸಣ್ಣ ಹೈಕೋರ್ಟಿಗೆ ವರ್ಗ ಮಾಡಿರುವುದನ್ನು 'ಸಾಮಾನ್ಯ' ಎಂದು ಹೇಳಲು ಸಾಧ್ಯವಿಲ್ಲ. ಇದು ಅವರಿಗೆ ಮಾಡಿರುವ ಅವಮಾನ ಮತ್ತು ವಿಧಿಸಿರುವ ಹಿಂಬಡ್ತಿ ಯೆಂದೇ ಹೇಳಬಹುದು ಎಂದು ಬೃಂದಾ ಕಾರಟ್ ಟಿಪ್ಪಣಿ ಮಾಡಿದ್ದಾರೆ. ಅವರಿಗೆ ಒಂದು ವರ್ಷದ ಹಿಂದೆಯಷ್ಟೇ ಮದ್ರಾಸ್ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ಬಡ್ತಿ ನೀಡಲಾಗಿತ್ತು. ಅದಕ್ಕೆ ಮೊದಲು ಅವರು ಸ್ವಲ್ಪ ಕಾಲ ದೇಶದ ಇನ್ನೊಂದು ದೊಡ್ಡ ಹೈಕೋರ್ಟ್ ಆಗಿರುವ ಮುಂಬೈ ಹೈಕೋರ್ಟಿನ ಹಂಗಾಮಿ ಮುಖ್ಯ ನ್ಯಾಯಾಧೀಶರಾಗಿಯೂ ಕಾರ್ಯನಿರ್ವಹಿಸಿದ್ದರು.

ಉನ್ನತ ಮಟ್ಟದಲ್ಲಿ ಮಹಿಳಾ ನ್ಯಾಯಾಧೀಶರ ಸಂಖ್ಯೆಯೇ ಕಡಿಮೆ. ಅಲ್ಲದೆ ಅವರು ನ್ಯಾಯಾಧೀಶರಾಗಿ ನಿಷ್ಕಳಂಕ ದಾಖಲೆ ಹೊಂದಿರುವವರು ಮತ್ತು ದೇಶದ ಹೈಕೋರ್ಟ್ ನ್ಯಾಯಾಧೀಶರುಗಳಲ್ಲಿ ಅತ್ಯಂತ ಹಿರಿಯರಲ್ಲಿ ಒಬ್ಬರು. ಆದ್ದರಿಂದ ಅವರೊಂದಿಗೆ ಇಂತಹ ನಡವಳಿಕೆ ಅವರಿಗೆ ಮಾತ್ರವಲ್ಲ, ಒಟ್ಟು ಮಹಿಳೆಯರಿಗೇ ಮಾಡಿರುವ ಅವಮಾನ ಎಂದು ಬೃಂದಾ ಕಾರಟ್ ಖೇದ ವ್ಯಕ್ತ ಪಡಿಸಿದ್ದಾರೆ.

ಈ ಇಡೀ ಪ್ರಕರಣ ನ್ಯಾಯಾಂಗದಲ್ಲಿನ ನೇಮಕಗಳು ಮತ್ತು ವರ್ಗಾವಣೆಗಳ ವ್ಯವಸ್ಥೆಯಲ್ಲಿ ಇರುವ ಅಪಾರದರ್ಶಕ ವ್ಯವಸ್ಥೆ ಎಷ್ಟು ಅತೃಪ್ತಿಕರವಾಗಿದೆ ಎಂಬುದನ್ನು ಮತ್ತೊಮ್ಮೆ ಎತ್ತಿ ತೋರಿದೆ ಎಂದು ಬೃಂದಾ ಕಾರಟ್ ಹೇಳಿದ್ದಾರೆ.

ವರ್ಗಾವಣೆಯನ್ನು ಹಿಂತೆಗೆದುಕೊಳ್ಳಬೇಕು–ಎಐಡಿಡಬ್ಲ್ಯುಎ
ಸಾಮರ್ಥ್ಯವನ್ನು, ಸಮಗ್ರತೆಯನ್ನು ಸಾಬೀತುಪಡಿಸಿರುವ ಹಿರಿಯ ಮಹಿಳಾ ನ್ಯಾಯಾಧೀಶರ ವರ್ಗಾವಣೆಗಳು ಗಂಭೀರ ಪ್ರಶ್ನೆಗಳನ್ನು ಎತ್ತುತ್ತವೆ

ಸುಪ್ರಿಂ ಕೋರ್ಟಿನ ಕೊಲೆಜಿಯಂ ಮದ್ರಾಸ್ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ವಿಜಯಾ ತಹಿಲ್ರಮಣಿಯವರನ್ನು ಮೇಘಾಲಯ ಹೈಕೋರ್ಟಿಗೆ ವರ್ಗಮಾಡಿರುವುದು ನ್ಯಾಯಾಂಗ ಮತ್ತು ಭಾರತದ ಸಂವಿಧಾನವನ್ನು ಬಹುವಾಗಿ ಗೌರವಿಸುವವರನ್ನು ಸಹಜವಾಗಿಯೇ ಗಾಬರಿಗೊಳಿಸಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಹೇಳಿದೆ. ಮುಖ್ಯ ನ್ಯಾಯಾಧೀಶರು ತಮ್ಮ ವರ್ಗಾವಣೆಯ ಬಗ್ಗೆ ಮರುಪರಿಶೀಲನೆ ಮಾಡಬೇಕು ಎಂದು ಕೋರಿಕೊಂಡ ನಂತರವೂ ಕೊಲೆಜಿಯಂ ತನ್ನ ನಿರ್ಧಾರಕ್ಕೆ ಅಂಟಿಕೊಂಡಿರುವುದು ದುರದೃಷ್ಟಕರ ಎಂದು ಅದು ಖೇದ ವ್ಯಕ್ತಪಡಿಸಿದೆ.

ಸಮಸ್ಯೆ ಇರುವುದು ವರ್ಗಾವಣೆಯಲ್ಲಿ ಅಲ್ಲ, ಏಕೆಂದರೆ ಒಂದು ಕೋರ್ಟಿನಿಂದ ಇನ್ನೊಂದು ಕೋರ್ಟಿಗೆ ನ್ಯಾಯಾಧೀಶರುಗಳ ವರ್ಗಾವಣೆಗೆ ಅವಕಾಶ ಖಂಡಿತಾ ಇದೆ. ಆದರೆ ಇಲ್ಲಿ, ದೇಶದ ಅತ್ಯಂತ ಹಿರಿಯ ಮುಖ್ಯ ನ್ಯಾಯಾಧೀಶರನ್ನು ಮದ್ರಾಸಿನಲ್ಲಿರುವ ದೇಶದ ನಾಲ್ಕನೆ ಅತಿ ದೊಡ್ಡ ಹೈಕೋರ್ಟಿನಿಂದ ಮೇಘಾಲಯದಲ್ಲಿರುವ ಅತಿ ಚಿಕ್ಕ ಹೈಕೋರ್ಟಿಗೆ ವರ್ಗ ಮಾಡಲಾಗಿದೆ. ಮೇಘಾಲಯ ಹೈಕೋರ್ಟಿನಲ್ಲಿ ಇರುವುದು ಒಟ್ಟು ಮೂವರು ನ್ಯಾಯಾಧೀಶರು. ಅದರ ಮುಂದಿರುವ ಕೇಸುಗಳ ಸಂಖ್ಯೆ 1086 ಆಗಿದ್ದರೆ ನ್ಯಾಯಮೂರ್ತಿ ವಿಜಯಾ ತಹಿಲ್ರಮಣಿಯವರು ಮುಖ್ಯ ನ್ಯಾಯಾಧೀಶರಾಗಿದ್ದ ಮದ್ರಾಸ್ ಹೈಕೋರ್ಟಿನ ಮುಂದೆ 4,02,855 ಕೇಶುಗಳಿದ್ದು, 75 ನ್ಯಾಯಾಧೀಶರುಗಳಿದ್ದಾರೆ. ಇಂತಹ ಒಬ್ಬ ಹಿರಿಯ ನ್ಯಾಯಾಧೀಶರನ್ನು ಕೆಳಗಿನ ಮಟ್ಟಕ್ಕೆ ಇಳಿಸುವ ನಡೆಗೆ ಕೊಲೆಜಿಯಂ ಯಾವುದೇ ತರ್ಕವನ್ನು ಕೊಟ್ಟಿಲ್ಲ. ಇದಕ್ಕೆ ಸಂಬಂಧಪಟ್ಟಂತೆ, ಇವರಿಗಿಂತ ಬಹಳ ಕಿರಿಯರಾದ ಮೇಘಾಲಯದ ಮುಖ್ಯ ನ್ಯಾಯಾಧೀಶರನ್ನು ಮದ್ರಾಸ್ ಹೈಕೋರ್ಟಿಗೆ ಬಡ್ತಿ ನೀಡಿರುವುದು ಕೂಡ ಅಷ್ಟೇ ಸ್ವೇಚ್ಛಾಚಾರಿ ಮತ್ತು ವಿವರಣೆಯಿಲ್ಲದ ನಡೆಯಾಗಿದೆ ಎಂದು ಎಐಡಿಡಬ್ಲ್ಯುಎ ಟಿಪ್ಪಣಿ ಮಾಡಿದೆ.

ಇಡೀ ದೇಶದಲ್ಲಿ ಇರುವುದು ಕೇವಲ ಇಬ್ಬರೇ ಮಹಿಳಾ ಮುಖ್ಯ ನ್ಯಾಯಾಧೀಶರುಗಳು ಎಂಬ ಸಂಗತಿಯತ್ತ ಎಐಡಿಡಬ್ಲ್ಯುಎ ಗಮನ ಸೆಳೆದಿದೆ. ನ್ಯಾಯಮೂರ್ತಿ ಗೀತಾ ಮಿತ್ತಲ್ ಇದುವರೆಗೆ ದಿಲ್ಲಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದರು. ಅಲ್ಲಿ ಅವರು ಮಕ್ಕಳ ಮೇಲಿನ ಹಿಂಸಾಚಾರಗಳ ಕೇಸುಗಳ ವಿಷಯದಲ್ಲಿ ಬಹಳ ಮಹತ್ವದ ಪಾತ್ರ ವಹಿಸಿದವರು, ಹಲವು ಚಾರಿತ್ರಿಕ ತೀರ್ಪುಗಳನ್ನು ಕೊಟ್ಟಿದ್ದಾರೆ. ಹಲವು ಸುಧಾರಣಾ ಕ್ರಮಗಳನ್ನು ಅಂಗೀಕರಿಸಿದ್ದಲ್ಲದೆ, ಅವರ ಅಧಿಕಾರಾವಧಿಯಲ್ಲಿ ಅಪ್ರಾಪ್ತ ವಯಸ್ಕರ ಕೇಸುಗಳ ವಿಚಾರಣೆಯ ಕೋರ್ಟುಗಳಲ್ಲಿ ವಿಚಾರಣೆ ನಡೆಸುವ ವಿಧಾನಗಳನ್ನು ಸರಳಗೊಳಿಸಲಾಗಿದೆ. ಈಗ ಅವರನ್ನು ಜಮ್ಮು ಮತ್ತು ಕಾಶ್ಮೀರದ ಮುಖ್ಯ ನ್ಯಾಯಾಧೀಶರಾಗಿ ನೇಮಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿ ವಿಜಯಾ ತಹಿಲ್ರಮಣಿಯವರು ಈ ಮೊದಲು ಮುಂಬೈ ಹೈಕೋರ್ಟಿನ ಮುಖ್ಯಸ್ಥರಾಗಿದ್ದರು. ಅಲ್ಲಿ ಅವರು 2002 ಗುಜರಾತ್ ಹಿಂಸಾಚಾರದ ಸಮಯದಲ್ಲಿ ನಡೆದ ಬಿಲ್ಕಿಸ್ ಬಾನೊ ಸಾಮೂಹಿಕ ಅತ್ಯಾಚಾರದ ಕೇಸಿನಲ್ಲಿ ಕೆಳಗಿನ ಕೋರ್ಟಿನ ತೀರ್ಪನ್ನು ಬದಲಿಸಿ ಆಪಾದಿತರಿಗೆ ಶಿಕ್ಷೆಯಾಗುವಂತಹ ತೀರ್ಪನ್ನು ಕೊಟ್ಟಿದ್ದರು. ಇವೆರಡರ ನಡುವೆ ನೇರ ಸಂಬಂಧ ಇಲ್ಲವಾದರೂ, ತಮ್ಮ ಸಾಮರ್ಥ್ಯವನ್ನು ಮತ್ತು ಸಮಗ್ರತೆಯನ್ನು ಸಾಬೀತು ಪಡಿಸಿರುವ ಹಿರಿಯ ಮಹಿಳಾ ನ್ಯಾಯಾಧೀಶರ ಈ ಎರಡು ವರ್ಗಾವಣೆಗಳು ಮಹಿಳೆಯರನ್ನು ಈ ರೀತಿ ಮನಬಂದಂತೆ ಅವರಿಗೆ ಸಲ್ಲಬೇಕಾದ ಹಿರಿಮೆಯಿಂದ ದೂರ ಸರಿಸಲಾಗುತ್ತಿದೆಯೇ ಎಂಬ ಪ್ರಶ್ನೆಗಳನ್ನು ಎತ್ತುತ್ತವೆ.

ಇದಲ್ಲದೆ, ಈ ವಿವಾದ ನ್ಯಾಯಾಧೀಶರುಗಳ ಕೊಲೆಜಿಯಂ ಅಂಗೀಕರಿಸಿರುವ ನೇಮಕ ಮತ್ತು ವರ್ಗಾವಣೆಯ ಧೋರಣೆಯಲ್ಲಿ ಪಾರದರ್ಶಕತೆ ಮತ್ತು ಜವಾಬುದಾರಿಕೆಯ ಕೊರತೆ ಗಮನಾರ್ಹ ಪ್ರಮಾಣದಲ್ಲಿ ಇದೆ ಎಂಬುದರತ್ತ ಬೊಟ್ಟು ಮಡುತ್ತದೆ ಎಂದಿರುವ ಎಐಡಿಡಬ್ಲ್ಯುಎ ಇದು ಈ ಇಡೀ ಪ್ರಕ್ರಿಯೆಯನ್ನು ಕಲುಷಿತಗೊಳಿಸಿದೆ ಎಂದು ಅಭಿಪ್ರಾಯ ಪಟ್ಟಿದೆ. ನ್ಯಾಯಾಂಗ ವ್ಯವಸ್ಥೆಯಲ್ಲಿ ವಿಶ್ವಾಸವನ್ನು ಮತ್ತೆ ಮೂಡಿಸಲು ಹೆಚ್ಚಿನ ಮಟ್ಟದ ಪಾರದರ್ಶಕತೆ ಮತ್ತು ಜವಾಬುದಾರಿಕೆಯ ಅಗತ್ಯವಿದೆ. ಆಗ ಮಾತ್ರವೇ ಇಂತಹ ತರವಲ್ಲದ ವಿವಾದಗಳು ಏಳದಂತೆ ತಪ್ಪಿಸಲು ಸಾಧ್ಯ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಈ ಪ್ರಸಕ್ತ ಸನ್ನಿವೇಶದಲ್ಲಿ ನ್ಯಾಯಮೂರ್ತಿ ವಿಜಯಾ ತಹಿಲ್ರಮಣಿಯವರನ್ನು ಮದ್ರಾಸಿನಿಂದ ಮೇಘಾಲಯ ಹೈಕೋರ್ಟಿಗೆ ಮಾಡಿರುವ ವರ್ಗಾವಣೆಯನ್ನು ಹಿಂತೆಗೆದುಕೊಳ್ಳಬೇಕು. ಅವರನ್ನು ಮದ್ರಾಸ್ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ಮುಂದುವರೆಸುವುದು ಹೈಕೋರ್ಟಿನ ಒಬ್ಬ ಹಿರಿಯ ನ್ಯಾಯಾಧೀಶರ ಹುದ್ದೆಗೆ ಹಿರಿಮೆ, ಗೌರವ ಮತ್ತು ಸಮಗ್ರತೆಯನ್ನು ಮತ್ತೆ ನೆಲೆಗೊಳಿಸುವ ಒಂದು ಕ್ರಮವಾಗುತ್ತದೆ ಎಂದು ಎಐಡಿಡಬ್ಲ್ಯುಎ ಅಭಿಪ್ರಾಯ ವ್ಯಕ್ತಪಡಿಸಿದೆ.

ನ್ಯಾಯಾಲಯಗಳು ಅನ್ಯಾಯದ ಕೃತ್ಯಗಳನ್ನು ಸರಿಪಡಿಸುವ ಕೆಲಸ ಮಾಡುತ್ತವೆ, ಅವು ಎಲ್ಲರಿಗೂ ನ್ಯಾಯವನ್ನು ದೊರಕಿಸಿ ಕೊಡುತ್ತವೆ ಎಂಬ ಜನಗಳ ವಿಶ್ವಾಸದ ಆಲಯಗಳು. ಇಂತಹ ನ್ಯಾಯಾಲಯದ ಮುಖ್ಯಸ್ಥರೇ ನ್ಯಾಯವಂಚಿತರಾದಾಗ, ಮುಖ್ಯ ನ್ಯಾಯಮೂರ್ತಿ ವಿಜಯಾ ತಹಿಲ್ರಮಣಿಯವರು ಶಾಂತವಾಗಿ ತಮ್ಮ ಹಿರಿಮೆಯ ಹುದ್ದೆಗೆ ರಾಜೀನಾಮೆ ನೀಡಿ ಧೈರ್ಯ ಮತ್ತು ಸ್ವಾತಂತ್ರ್ಯವನ್ನು ಪ್ರದರ್ಶಿಸಿದ್ದಾರೆ ಎನ್ನುತ್ತ ಎಐಡಿಉಡಬ್ಲ್ಯುಎ ಅವರ ಸಾಹಸ ಮತ್ತು ಸಮಗ್ರತೆಗೆ ಅಭಿವಂದನೆ ಸಲ್ಲಿಸಿದೆ.

ಇನ್ನಷ್ಟು ವಿಳಂಬ ಮಾಡದೆ ಪರಿಸ್ಥಿತಿಯನ್ನು ಸರಿಪಡಿಸಬೇಕು ಎಂದು ಎಐಡಿಡಬ್ಲ್ಯುಎ ನ್ಯಾಯಾಂಗಕ್ಕೆ ಕರೆ ನೀಡಿದೆ.

ಸಂಪಾದಕೀಯ

ಹೃದಯಹೀನ ಬಿಜೆಪಿಗಳು

ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿರುವ ಸರ್ಕಾರಗಳಿಗೆ ಸಂಕಷ್ಟದಲ್ಲಿರುವವರನ್ನು ಸಂತೈಸುವ ಹೃದಯವಂತಿಕೆ ಇಲ್ಲ ಸುಮಾರು 15 ವರ್ಷಗಳ ಬಳಿಕ ರಾಜ್ಯದ ಉತ್ತರ ಕರ್ನಾಟಕ, ಮಲೆನಾಡು, ಕೊಡಗು, ಕರಾವಳಿ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಭಾರಿ ಪ್ರವಾಹ ತಲೆದೋರಿ ಜನ ಅಪಾರ ನಷ್ಟವನ್ನು ಅನುಭವಿಸಿದ್ದಾರೆ. ಸಾವಿರಾರು ಮನೆಗಳು ಮತ್ತು ಅವುಗಳಲ್ಲಿ ಇದ್ದುದೆಲ್ಲವೂ ಕೊಚ್ಚಿಕೊಂಡು ಹೋಗಿದೆ. ಅದೆಷ್ಟೋ ಸಾವಿರ ಮನೆಗಳು ನೀರಲ್ಲಿ ನಿಂತಿದ್ದು ನಿರಾಶ್ರಿತರಾದವರು ಗಂಜಿ ಕೇಂದ್ರಗಳಲ್ಲಿ ಗಂಜಿಗೂ ಗತಿ ಇಲ್ಲದೆ ಪರದಾಡುತ್ತಿದ್ದಾರೆ. ಆರಂಭದಲ್ಲಿ ಹೃದಯವಂತರಿಂದ ಸಾಕಷ್ಟು ನೆರವು ವಸ್ತು ಮತ್ತು ಹಣದ ರೂಪದಲ್ಲಿ ಹರಿದು ಬಂತು. ಆದರೆ ಅವರಾದರೂ ಅದೆಷ್ಟು ದಿನ ನೆರವು ನೀಡ್ಯಾರು? ಸರ್ಕಾರಗಳಿಂದ ಆಗದ ಕೆಲಸ ಜನಸಾಮಾನ್ಯರಿಂದ ಸಾಧ್ಯವೇ?

ಬಾರಿ ಎದೆ ಮತ್ತು ಎದೆಗಾರಿಕೆ ಹೊಂದಿರುವ ಪ್ರಧಾನಿ ಮೋದಿಯವರು ಚಂದ್ರಯಾನ ವೀಕ್ಷಿಸಲು ಸರ್ಕಾರಿ ಖರ್ಚಿನಲ್ಲಿ ದೆಹಲಿಯಿಂದ ಬೆಂಗಳೂರಿಗೆ ಹಾರಿದರು. ಆದರೆ ದಾರಿಯಲ್ಲಿ ಅವರಿಗೆ ಅಪ್ಪಿತಪ್ಪಿಯೂ ಕರ್ನಾಟಕದ ಪ್ರವಾಹ ಪೀಡಿತರು ಕಾಣಲೇ ಇಲ್ಲ. ಆದ್ದರಿಂದ ಅವರು ನೆರೆ ಸಂತ್ರಸ್ಥ ಬಗ್ಗೆ ಮಾತನಾಡಲಿಲ್ಲ. ಸಾಂತ್ವಾನ ಹೇಳಲಿಲ್ಲ.

ಮೋದಿ ಪ್ರಪಂಚವೇ ಬೇರೆ. ಅವರ ಗೊತ್ತುಗುರಿಗಳೇ ಬೇರೆ. ಬೀದಿಗೆ ಬಿದ್ದವರನ್ನು ಎತ್ತಿ ಆಸರೆ ನೀಡುವುದು ಅವರ ಹಿಂದುತ್ವದಲ್ಲಿಲ್ಲ. "ದಯವೇ ಧರ್ಮದ ಮೂಲವಯ್ಯ" ಎಂಬ ಬಸವಣ್ಣನವರ ಮಾತು ಮೋದಿ ಮಹಾನು ಭಾವನ ಕಿವಿಯೊಳಗೆ ಎಂದೂ ನುಸುಳುವುದಿಲ್ಲ. ರಕ್ತಪಾತ, ಸಾವು ನೋವು ಅವರ ಕಲ್ಲು ಹೃದಯವನ್ನು ಕರಗಿಸುವುದಿಲ್ಲ. ಜನಾಂಗಿಯ ಹಂತಕ ಹಿಟ್ಲರ್ ಮೋದಿಗೆ ಆದರ್ಶ. ಹೀಗಿರುವಾಗ ನೀರಿನಲ್ಲಿ ಕೊಚ್ಚಿಕೊಂಡು ಹೋಗಿ ಸಾವನ್ನಪ್ಪಿದ್ದ, ನಾಪತ್ತೆಯಾದ ಮುದುಕರು, ಮಹಿಳೆಯರು ಮಕ್ಕಳ ಬಗ್ಗೆ ಅವರಲ್ಲಿ ಮರುಕಕ್ಕೆಲ್ಲಿದೆ ಜಾಗ ? ಆದ್ದರಿಂದಲೇ ಗಡಿಯಲ್ಲಿ ವ್ಯವಸ್ಥಿತವಾಗಿ ಯುದ್ದೋನ್ಮಾದವನ್ನು ಸೃಷ್ಟಿಸಲಾಗುತ್ತಿದೆ. ಅದನ್ನೇ ದೇಶ ಪ್ರೇಮ ಎಂದು ಬಿಂಬಿಸಲಾಗುತ್ತದೆ. ನಮ್ಮ ಯೋಧರು ಸಾವನ್ನಪ್ಪಿದರೆ ಮೋದಿಗಿಲ್ಲ ಚಿಂತೆ. ಅಮಾಯಕರು ಪ್ರಾಣ ಕಳೆದುಕೊಂಡರೆ ಪ್ರಧಾನಿ ದುಃಖ ಪಡಬೇಕಾಗಿಲ್ಲ. ಯೋಧರ ತ್ಯಾಗದ ಲಾಭವನ್ನು ತನ್ನದಾಗಿಸಿಕೊಳ್ಳುತ್ತಾನೆ.

ಯಡಿಯೂರಪ್ಪ ಬಾಯಿ ಮುಚ್ಚಿಕೊಂಡಿದ್ದಾರೆ ತನ್ನ ಪಕ್ಷದ ಯಜಮಾನರನ್ನು ಕೇಳುವ ಧೈರ್ಯ ಅಗತ್ಯ ನೆರವನ್ನು ತುರ್ತಾಗಿ ತರುವ ಆಲೋಚನೆ ಅವರಿಗೆ ಹೊಳೆಯುತ್ತಿಲ್ಲ. ಸಂತ್ರಸ್ತರಿಗೆ ಶಾಶ್ವತ ಪರಿಹಾರ ಒದಗಿಸುವುದಕ್ಕಿಂತ ಅಂತ ತನ್ನ ಅಧಿಕಾರವನ್ನು ಶಾಶ್ವತಗೊಳಿಸುವುದು ಹೇಗೆ ಎಂಬುವುದೇ ಯಡಿಯೂರಪ್ಪ ಮತ್ತು ಗ್ಯಾಂಗಿನ ಚಿಂತೆ. ಇಂತಹ ಹೃದಯಹೀನ ಸರ್ಕಾರಗಳ ವಿರುದ್ಧ ಒಂದು ಪಕ್ಷಾತೀತವಾದ, ಜಾತ್ಯತೀತವಾದ ಬೃಹತ್ ಆಂದೋಲನವನ್ನು ಹುಟ್ಟು ಹಾಕಿ ಯಶಸ್ವಿಗೊಳಿಸುವುದು ತುರ್ತಾಗಿ ಆಗಬೇಕಿದೆ.

ಸಂವಿಧಾನದ 370ನೇ ವಿಧಿ ರದ್ದತಿ ವಿರೋಧಿಸಿ ಮಂಗಳೂರಿನಲ್ಲಿ ಸಿಪಿಐ ಮತ್ತು ಸಿಪಿಐ(ಎಂ) ಜಂಟಿ ಪ್ರತಿಭಟನೆ:



11 ಸೆಪ್ಟೆಂಬರ್ 2019 ದ.ಕ. ಜಿಲ್ಲಾಧಿಕಾರಿಗಳ ಕಚೇರಿಯೆದುರು ಸಿಪಿಐ(ಎಂ), ಸಿಪಿಐ ಪಕ್ಷಗಳ ಜಂಟಿ ನೇತೃತ್ವದಲ್ಲಿ ಸಂವಿಧಾನದ 370ನೇ ವಿಧಿ ರದ್ದುಪಡಿಸಿದ ಕೇಂದ್ರ ಸರಕಾರದ ಕ್ರಮವನ್ನು ವಿರೋಧಿಸಿ ನಡೆದ ಪ್ರತಿಭಟನೆ ನಡೆಯಿತು.

ಕಾಶ್ಮೀರದ ಅಭಿವೃದ್ದಿಗಾಗಿ ಸಂವಿಧಾನದ 370ನೇ ವಿಧಿಯನ್ನು ರದ್ದುಪಡಿಸಿದ್ದೇವೆ, ಭಯೋತ್ಪಾದನೆ ನಿಲ್ಲಿಸಲಿಕ್ಕಾಗಿಯೂ ಈ ರದ್ದತಿ ನಡೆದಿದೆ ಎಂದು ಕೇಂದ್ರ ಸರಕಾರ ಹೇಳುತ್ತಿದೆ.ಆದರೆ ನಿಜವಾಗಿ ಭಾರತದಲ್ಲಿ ಹಿಂದೂ ಮುಸ್ಲಿಮರ ಮಧ್ಯೆ ದ್ವೇಷ ಭಾವನೆ ಹುಟ್ಟಿಸಲು ಅಲ್ಲದೆ ಕಾಶ್ಮೀರದಿಂದ ಮುಸ್ಲಿಮರನ್ನು ಹೊರಗಟ್ಟುವ ಯೋಜನೆಯ ಭಾಗವಾಗಿ 370ನೇ ವಿಧಿ ರದ್ದುಪಡಿಸಲಾಗುತ್ತಿದೆ ಎಂದು ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿಯವರು ಹೇಳಿದರು. ಮುಂದುವರೆಸಿ ಸಂವಿಧಾನದ 370ನೇ ವಿಧಿ ಯಾಕೆ ಬಂದಿದೆ ಎಂಬ ಇತಿಹಾಸ, ಅದನ್ನು ರದ್ದುಗೊಳಿಸಿದ ಬಿಜೆಪಿ ಸರಕಾರದ ಬೆಂಬಲಿಗರಿಗೆ ಗೊತ್ತಿಲ್ಲ. ದೇಶ ವಿಭಜನೆ ಸಂಧರ್ಭದಲ್ಲಿ ಜಮ್ಮುಕಾಶ್ಮೀರದ ರಾಜ ಹರಿಸಿಂಗ್ ಭಾರತ ಪಾಕಿಸ್ತಾನ ಎರಡೂ ದೇಶಕ್ಕೂ ಸೇರಿಕೊಳ್ಳದೆ ಸ್ವತಂತ್ರವಾಗಿರಲು ಬಯಸಿದಾಗ ಅಲ್ಲಿನ ಜನತೆ ಶೇಕ್ ಅಬ್ದುಲ್ಲಾ ಮತ್ತು ನ್ಯಾಷನಲ್ ಕಾನ್ಫರೆನ್ಸ್ ನೇತೃತ್ವದಲ್ಲಿ ರಾಜಸತ್ತೆ ಹಾಗೂ ಬ್ರಿಟಿಷ್ ವಸಾಹತುಶಾಹಿ ಎರಡನ್ನೂ ವಿರೋಧಿಸಿತ್ತು. ದೇಶ ಸ್ವಾತಂತ್ರ್ಯ ಕಂಡ ಬೆನ್ನಿಗೆ ಕಾಶ್ಮೀರದ ಮೇಲೆ ಪಾಕಿಸ್ತಾನದ ಕಡೆಯಿಂದ ಸೈನ್ಯ ನುಗ್ಗಿ ಬಂದಾಗ ರಾಜ ಹರಿಸಿಂಗ್ ಅಂದಿನ ದೇಶದ ಪ್ರಧಾನಿ ಜವಾಹರಲಾಲ್ ನೆಹರೂ, ಗೃಹಮಂತ್ರಿ ವಲ್ಲಭ ಬಾಯಿ ಪಟೇಲ್ ಮತ್ತು ಶೇಕ್ ಅಬ್ದುಲ್ಲಾ ನಡುವೆ ನಡೆಸಿದ ಒಪ್ಪಂದದಂತೆ ಭಾರತಕ್ಕೆ ಸೇರಿಕೊಳ್ಳಲು ಕಾಶ್ಮೀರ ರಾಜ ಸಿದ್ದನಾದರು.ಆಗ ಮಾಡಿಕೊಂಡ ಒಪ್ಪಂದದಂತೆ ಮುಂದೆ ಸಂವಿಧಾನದಲ್ಲಿ 370 ನೇ ವಿಧಿಯನ್ನು ಕಲ್ಪಿಸಲಾಯಿತು. ಆದರೆ ಇಂದಿನ ನರೇಂದ್ರ ಮೋದಿ ನೇತೃತ್ವದ ಸರಕಾರವು ಅಲ್ಲಿನ ಜನತೆಯನ್ನು ತಿರಸ್ಕರಿಸಿ ಅವರನ್ನು ಅವಮಾನಿಸಿ ಅವರಿಗೆ ವಾಗ್ದಾನದಂತೆ ನೀಡಿದ ಸ್ವಾಯತ್ತೆ ಹಕ್ಕನ್ನು ಕಿತ್ತುಕೊಂಡಿರುವುದು ಸಂವಿಧಾನ ವಿರೋಧಿಯಾದದ್ದು, ಮಾತ್ರವಲ್ಲದೆ ಪ್ರಜಾಪ್ರಭುತ್ವ ತತ್ವಕ್ಕೂ ವಿರುದ್ದವಾಗಿದೆ ಎಂದು ಟೀಕಿಸಿದರು.

ಸಿಪಿಐ ದ.ಕ.ಜಿಲ್ಲಾ ಕಾರ್ಯದರ್ಶಿ ವಿ.ಕುಕ್ಯಾನ್ ರವರು ಮಾತನಾಡುತ್ತಾ, ಕಾಶ್ಮೀರದ ರಾಜನೊಂದಿಗೆ ನಡೆದ ಒಪ್ಪಂದದಂತೆ 370ನೇ ವಿಧಿ ಸಂವಿಧಾನದಲ್ಲಿ ಬಂದಿದ್ದು, ಅದರ ಆಧಾರದಲ್ಲೇ ಜಮ್ಮು ಕಾಶ್ಮೀರದಲ್ಲಿ ವಿಧಾನಸಭೆ ಹಾಗೂ ಲೋಕಸಭಾ ಚುನಾವಣೆಗಳು ಇಲ್ಲಿಯವರೆಗೂ ನಡೆಯುತ್ತಾ ಬಂದಿದ್ದವು.ಕೊನೆಗೆ ಬಿಜೆಪಿ ಮತ್ತು ಪಿಡಿಪಿ ಪಕ್ಷಗಳೇ ಮೈತ್ರಿಕೂಟ ಮಾಡಿಕೊಂಡು ಜಮ್ಮುಕಾಶ್ಮೀರದಲ್ಲಿ ರಾಜ್ಯಾಡಳಿತ ನಡೆಸುತ್ತಿತ್ತು. ಈಗಿನ ಕೇಂದ್ರ ಸರ್ಕಾರ ಕಾಶ್ಮೀರದ ಜನತೆಯ ಜೊತೆಗೆ ಚರ್ಚೆ ನಡೆಸದೆ ಏಕಾಏಕಿ 370ನೇ ವಿಧಿ ರದ್ದುಪಡಿಸಿದೆ. ಜನರನ್ನು ಭೀತಿಗೊಳಿಸುವ ರೀತಿಯಲ್ಲಿ ಜನಜೀವನವನ್ನೇ ನಿಶ್ಚಲಗೊಳಿಸಿದೆ ಎಂದು ಹೇಳಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುನಿಲ್ ಕುಮಾರ್ ಬಜಾಲ್ ರವರು ಮಾತನಾಡುತ್ತಾ, ಇವತ್ತು ದೇಶಪ್ರೇಮದ ಬಗ್ಗೆ ಉದ್ದುದ್ದ ಮಾತನಾಡುವ ಬಿಜೆಪಿ ಸಂಘಪರಿವಾರದವರಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಇತಿಹಾಸವಿದೆಯೇ...? ಸಂವಿಧಾನದ ಆಶಯವನ್ನು ಮಣ್ಣುಪಾಲು ಮಾಡುವವರು, ಜಾತ್ಯಾತೀತ ತತ್ವಕ್ಕೆ ಕೊಡಲಿ ಪೆಟ್ಟು ಕೊಡುವವರು, ಪ್ರಜಾಪ್ರಭುತ್ವದ ಅಡಿಗಲ್ಲನ್ನೇ ಅಲುಗಾಡಿಸುವವರು ದೇಶಪ್ರೇಮ ಹಾಗೂ ದೇಶದ್ರೋಹಕ್ಕೆ ವ್ಯಾಖ್ಯಾನ ನೀಡುತ್ತಿರುವುದು ತೀರಾ ಹಾಸ್ಯಾಸ್ಪದವಾಗಿದೆ ಎಂದು ವ್ಯಂಗ್ಯವಾಡಿದರು.

ಸಿಪಿಐ ಮುಖಂಡರಾದ ಎಚ್ ವಿ. ರಾವ್, ಸೀತಾರಾಮ ಬೇರಿಂಜ, ಕರುಣಾಕರ್, ಪ್ರಭಾಕರ ರಾವ್, ಭಾರತಿ ಶಂಭೂರು, ಸಿಪಿಐ(ಎಂ) ಜಿಲ್ಲಾ ನಾಯಕರಾದ ಜೆ. ಬಾಲಕೃಷ್ಣ ಶೆಟ್ಟಿ, ಕೃಷ್ಣಪ್ಪ ಸಾಲ್ಯಾನ್, ವಾಸುದೇವ ಉಚ್ಚಿಲ್, ಜಯಂತಿ ಶೆಟ್ಟಿ, ದಯಾನಂದ ಶೆಟ್ಟಿ,ಮನೋಜ್ ವಾಮಂಜೂರು, ಬಶೀರ್ ಪಂಜಿಮೊಗರು, ದಿನೇಶ್ ಶೆಟ್ಟಿ ಮುಂತಾದವರು ಉಪಸ್ಥಿತರಿದ್ದರು. ●

ವರದಿ: ವಾ.ಉ.

ದ.ಕ.ಜಿಲ್ಲಾಧಿಕಾರಿ ಸಸಿಕಾಂತ ಸೆಂಥಿಲ್ ರಾಜಿನಾಮೆಗೆ ಕಾರಣವಾದ ಕೇಂದ್ರ ಸರ್ಕಾರವನ್ನು ಟೀಕಿಸಿ ಸಿಪಿಐ, ಸಿಪಿಐ(ಎಂ), ಜನತಾದಳ (ಎಸ್) ಜಂಟಿ ಪ್ರತಿಭಟನೆ:



ಜನಪರ ಕಾಳಜಿಯ ಪ್ರಾಮಾಣಿಕ ಜಿಲ್ಲಾಧಿಕಾರಿ ಸಸಿಕಾಂತ ಸೆಂಥಿಲ್‌ರವರು ಕೇಂದ್ರ ಸರಕಾರದ ಪ್ರಜಾಪ್ರಭುತ್ವ ವಿರೋಧಿ ಸರಕಾರದಡಿ ತಾನು ಸರ್ಕಾರೀ ಸೇವೆ ಮಾಡುವುದಿಲ್ಲ ಎಂಬುದನ್ನು ತಿಳಿಸಿ, ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಅವರ ದಕ್ಷ ಪ್ರಾಮಾಣಿಕ ಸೇವೆಯನ್ನು ಗುರುತಿಸಿರುವ ಜಿಲ್ಲೆಯ ನಾಗರಿಕರು ಸಿಪಿಐ(ಎಂ) ಮತ್ತು ಜನತಾದಳ(ಎಸ್) ನೇತೃತ್ವದಲ್ಲಿ ಸಪ್ಟೆಂಬರ್ 7 ರಂದು ಮಂಗಳೂರಿನಲ್ಲಿ ಪ್ರತಿಭಟನಾ ಸಭೆ ನಡೆಸಿ ಕೇಂದ್ರದ ಅಪ್ರಜಾಸತ್ತಾತ್ಮಕ ದಮನಕಾರಿ ನೀತಿಯನ್ನು ಟೀಕಿಸಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿ, ದೇಶದ ಸಂವಿಧಾನದ ಮೇಲೆ ತೀವ್ರ ದಾಳಿ ನಡೆಯುತ್ತಿರುವಾಗ ಅಧಿಕಾರಿಗಳು ನಿಷ್ಠೆಯಿಂದ ಕೆಲಸ ಮಾಡಲು ಸಾಧ್ಯವಿಲ್ಲದ ವಾತಾವರಣ ದೇಶದಲ್ಲಿದೆ ಎಂದು ಕೇಂದ್ರ ಸರಕಾರದ ಮೇಲೆ ವಾಗ್ದಾಳಿ ನಡೆಸಿದರು.

ರಾಜ್ಯದ ಮಾಜಿ ಸಚಿವ ಹಾಗೂ ಜೆಡಿಎಸ್ ಮುಖಂಡ ಅಮರನಾಥ ಶೆಟ್ಟಿ, ಸಿಪಿಐ(ಎಂ) ಮುಖಂಡರಾದ ವಿ.ಕುಕ್ಯಾನ್, ಸೀತಾರಾಮ ಬೇರಿಂಜೆ, ಸಿಪಿಐ(ಎಂ) ಮುಖಂಡರಾದ ಸುನಿಲ್ ಕುಮಾರ್ ಬಜಾಲ್, ಜೆಡಿಎಸ್ ಮುಖಂಡ ಎಂ.ಬಿ.ಸದಾಶಿವ, ಡಿವೈಎಫ್‌ಐ ರಾಜ್ಯ ಅಧ್ಯಕ್ಷ ಮುನೀರ್ ಕಾಟಿಪಳ್ಳ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದರು.

ಮೂರೂ ಪಕ್ಷಗಳ ಸಾಕಷ್ಟು ಬೆಂಬಲಿಗರು ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಅವ್ಯವಸ್ಥೆ ಸರಿಪಡಿಸಲು ಆಗ್ರಹಿಸಿ ದ.ಕ.ಜಿಲ್ಲಾ ಕಟ್ಟಡ ಕಾರ್ಮಿಕರ ಪ್ರತಿಭಟನೆ:

ಸೌಲಭ್ಯ ನೀಡುವಲ್ಲಿ ವಿಳಂಬ ನೀತಿ, ನಿವೃತ್ತಿ ವೇತನದಲ್ಲಿ ಇರುವ ಗೊಂದಲ, ತೇರ್ಗಡೆಯಾದ ವಿದ್ಯಾರ್ತಿಗಳಿಗೆ ವಿದ್ಯಾರ್ಥಿ ವೇತನ ನೀಡದಿರುವುದು ಸೇರಿದಂತೆ ಕಾರ್ಮಿಕ ಇಲಾಖೆಯ ಅವ್ಯವಸ್ಥೆಗಳನ್ನು ಸರಿಪಡಿಸಲು ಒತ್ತಾಯಿಸಿ ಸಿಐಟಿಯು ಸಂಯೋಜಿತ ದ.ಕ.ಜಿಲ್ಲಾ ಕಟ್ಟಡ ಕಾರ್ಮಿಕರ ಸಂಘಟನೆ ನೇತೃತ್ವದಲ್ಲಿ ಸಪ್ಟೆಂಬರ್ 9 ರಂದು ಮಂಗಳೂರಿನ ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು.

ಸಿಐಟಿಯು ರಾಜ್ಯ ಘಟಕದ ಉಪಾಧ್ಯಕ್ಷ ವಸಂತ ಆಚಾರಿ ಮಾತನಾಡಿ, ಕಾರ್ಮಿಕ ಕಾನೂನುಗಳನ್ನು ಇನ್ನಿಲ್ಲವಾಗಿಸಲು ಹೊರಟ ಕೇಂದ್ರ ಸರಕಾರ, ನಿರ್ದಿಷ್ಟವಾಗಿ ಕಟ್ಟಡ ಕಾರ್ಮಿಕರ 2 ಕಾನೂನುಗಳನ್ನು ರದ್ದುಗೊಳಿಸಿದೆ ಎಂದು ಟೀಕಿಸಿದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿ, ರಾಜ್ಯದಲ್ಲಿ ಆನ್‌ಲೈನ್ ಯೋಜನೆ ತರಾತುರಿಯಲ್ಲಿ ಜ್ಯಾರಿಯಾಗಿದ್ದು, ಕಾರ್ಮಿಕ ಇಲಾಖೆಯಲ್ಲಿ ಸರಿಯಾದ ಸಿದ್ಧತೆಗಳಿಲ್ಲದಿರುವುದರಿಂದ ನೋಂದಣಿ, ನವೀಕರಣ ಹಾಗೂ ವಿವಿಧ ಸೌಲಭ್ಯಗಳ ಬೇಡಿಕೆ ಅರ್ಜಿಯನ್ನು ಸ್ವೀಕರಿಸುತ್ತಿಲ್ಲ ಎಂದು ಟೀಕಿಸಿದರು.

ಸಿಡಬ್ಲ್ಯೂಎಫ್‌ಐ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು, ಜಿಲ್ಲಾ ಮುಖಂಡರಾದ ಕೆ.ಪಿ.ಜೋನಿ, ಜಯಂತ ನಾಯಕ್, ರವಿಚಂದ್ರ ಕೊಂಚಾಡಿ, ರಮಣಿ ಮೂಡಬಿದ್ರಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಬಳಿಕ ಕಾರ್ಮಿಕ ಅಧಿಕಾರಿಗಳನ್ನು ಭೇಟಿ ಮಾಡಿದ ಪದಾಧಿಕಾರಿಗಳು ಮನವಿ ಅರ್ಪಿಸಿ ಚರ್ಚಿಸಿದರು.



ಸಿಐಟಿಯು ಜಿಲ್ಲಾ ನಾಯಕರಾದ ರಾಧಾ ಮೂಡಬಿದರೆ, ನೋಣಯ್ಯ ಗೌಡ, ಗಿರಿಜಾ ಮೂಡಬಿದರೆ, ಜನಾರ್ಧನ ಕುತ್ತಾರ್, ರಾಮಣ್ಣ ವಿಟ್ಲ, ಚಂದ್ರಹಾಸ್ ಪಿಲಾರ್, ರೋಹಿದಾಸ್ ತೊಕ್ಕೊಟು, ಜಯಾನಂದ ಮಾರೂರು, ಬಿಜು ಆಗಸ್ಟಿನ್, ನಾಗರಾಜ ಸುಳ್ಯ, ದಯಾನಂದ ಶೆಟ್ಟಿಗಾರ್, ಲೋಕೇಶ್ ಎಂ, ಅಶೋಕ್ ಸಾಲ್ಯಾನ್ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.


ಮೋದಿ ಸರಕಾರದ ಆರ್ಥಿಕ ನೀತಿಗಳು ಯುವಜನರಿಗೆ ಮಾರಕ

ಮಂಗಳೂರು : ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರದ ತಪ್ಪು ಆರ್ಥಿಕ ನೀತಿಗಳಿಂದಾಗಿ ದೇಶದ ಮೇಲೆ ಹೇರಲಾಗಿರುವ ಅಘೋಷಿತ ಆರ್ಥಿಕ ತುರ್ತು ಪರಿಸ್ಥಿತಿಯ ಮೊದಲ ಬಲಿಪಶುಗಳು ಯುವಜನರಾಗಿದ್ದರೆ ಎಂದು ಡಿವೈಎಫ್‌ಐ ಜಿಲ್ಲಾಧ್ಯಕ್ಷ ಬಿ ಕೆ ಇಂತಿಯಾಜ್ ಹೇಳಿದ್ದಾರೆ ಅವರು ಇಂದು ಡಿವೈಎಫ್‌ಐ ದ.ಕ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಜರಗಿದ "ಉದ್ಯೋಗ ಸೃಷ್ಟಿಸಿ ನಿರುದ್ಯೋಗದಿಂದ ರಕ್ಷಿಸಿ ಉದ್ಯೋಗದಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಲು ಆಗ್ರಹಿಸಿ, ಜಿಲ್ಲೆಯ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿಗೊಳಿಸಲು ಮತ್ತು ಜಿಲ್ಲೆಯ ಬೃಹತ್ ಕೈಗಾರಿಕೆಗಳಲ್ಲಿ ಸ್ಥಳೀಯ ಯುವಜನರಿಗೆ ಉದ್ಯೋಗ ಅವಕಾಶ ನೀಡಲು ಒತ್ತಾಯಿಸಿ ನಡೆದ ಪ್ರತಿಭಟನಾ ಧರಣಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ವರ್ಷಕ್ಕೆ 2 ಕೋಟಿ ಉದ್ಯೋಗದ ಭರವಸೆಯೊಂದಿಗೆ ಈ ಹಿಂದಿನ ಚುನಾವಣೆಯಲ್ಲಿ ಮೊತ್ತಮೊದಲು ಅಧಿಕಾರಕ್ಕೆ ಬಂದ ಬಿಜೆಪಿ ಎರಡನೇ ಅವಧಿಯಲ್ಲಿ ಕೂಡ ಕೇಂದ್ರದಲ್ಲಿ ಅಧಿಕಾರವನ್ನು ವಹಿಸಿಕೊಂಡಿದೆ ಆದರೆ ಉದ್ಯೋಗಗಳು ಸೃಷ್ಟಿಯಾಗಲಿಲ್ಲ ಬದಲಾಗಿ ನರೇಂದ್ರ ಮೋದಿ ಸರಕಾರದ ಆರ್ಥಿಕ ನೀತಿಗಳ ವೈಫಲ್ಯಗಳಿಂದ ಮೊತ್ತಮೊದಲು ಯುವಜನತೆ ಬಲಿಯಾಗುತ್ತಿದೆ. ಕೇಂದ್ರದ ಆರ್ಥಿಕ ನೀತಿಗಳಿಂದಾಗಿ ಉದ್ಯಮಿಗಳು ಉದ್ಯಮ ಕ್ಷೇತ್ರವನ್ನು ಮುಚ್ಚುವ ಸ್ಥಿತಿಯನ್ನು ತಲುಪಿದ್ದು ಇದರಿಂದ ಉದ್ಯೋಗಗಳು ಸೃಷ್ಟಿಯಾಗುವ ಬದಲು 7 ಲಕ್ಷಕ್ಕೂ ಮಿಕ್ಕಿದ ಉದ್ಯೋಗಗಳು ಕಳೆದ ಕೆಲವೇ ತಿಂಗಳಲ್ಲಿ ನಷ್ಟಗೊಂಡು ದಿನೇ ದೀನೇ ಇದರ ಸಂಖ್ಯೆ ಹೆಚ್ಚುತ್ತಲೇ ಇದ್ದು ದೇಶವು ಗಂಭೀರ ಸ್ಥಿತಿಯನ್ನು ತಲುಪಿದೆ. ಇನ್ನುಳಿದಂತೆ ದ.ಕ ಜಿಲ್ಲೆಯ ನಿರುದ್ಯೋಗದ ಸ್ಥಿತಿಯು ಹೇಳತೀರದಾಗಿದೆ. ಇಲ್ಲಿನ ಮಂಗಳೂರು ನಗರಪಾಲಿಕೆಯಲ್ಲಿ 540 ಹುದ್ದೆಗಳು,ಮೆಸ್ಕಾಂ ಮಂಗಳೂರು ವೃತ್ತದಲ್ಲಿ 2690, ಪಿಡಬ್ಲ್ಯೂಡಿ ಕಚೇರಿಯಲ್ಲಿ 39 ಹುದ್ದೆಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ 84 ಹುದ್ದೆಗಳು, ವೆನ್ಲಾಕ್ ಜಿಲ್ಲಾಸ್ಪತ್ರೆಯಲ್ಲಿ351, ಹುದ್ದೆಗಳು, ಶಿಕ್ಷಣ ಇಲಾಖೆಯಲ್ಲಿ 274 ಶಿಕ್ಷಕೇತರ ಹುದ್ದೆಗಳು,ಕಾರ್ಮಿಕ ಇಲಾಖೆಯಲ್ಲಿ 17 ಹುದ್ದೆಗಳು ಜಿಲ್ಲೆಯ ವಿವಿಧ ಎಪಿಎಂಸಿ ಗಳಲ್ಲಿ 97 ಹುದ್ದೆಗಳು ಕರ್ನಾಟಕ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ 384, ಜಿಲ್ಲೆಯ ವಿವಿಧ ಪಂಚಾಯತ್ ಕಾರ್ಯದರ್ಶಿ ಮತ್ತು ಪಿಡಿಓ ಹುದ್ದೆಗಳು ಒಟ್ಟು 126, ಕಂದಾಯ ಇಲಾಖೆಯಲ್ಲಿ 1000ಕ್ಕೂ ಮಿಕ್ಕ ಖಾಲಿ ಹುದ್ದೆಗಳು ಸೇರಿ ಹೀಗೆ ಜಿಲ್ಲೆಯ ವಿವಿಧ ಸರಕಾರಿ ಇಲಾಖೆಗಳಲ್ಲಿ 13 ಸಾವಿರಕ್ಕೂ ಮಿಕ್ಕಿ ಹುದ್ದೆಗಳು ಖಾಲಿ ಇದ್ದು ಸರಕಾರ ಇದನ್ನು ಭರ್ತಿಗೊಳಿಸುತ್ತಿಲ್ಲ ಇದನ್ನು ಕೂಡಲೇ ಭರ್ತಿಗೊಳಿಸಬೇಕೆಂದು ಆಗ್ರಹಿಸಿದರು.

ನಗರ ಪೊಲೀಸ್ ಕಮಿಷನರೇಟ್ ಗೆ ಪೊಲೀಸ್ ಕಾನ್ಸ್ಟೇಬಲ್ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ಪಶ್ಚಿಮ ವಲಯ ಐಜಿಪಿ ವ್ಯಾಪ್ತಿಯ ಯುವ ಅಭ್ಯರ್ಥಿಗಳನ್ನು ಮಾತ್ರ ಪರಿಗಣಿಸಬೇಕೆಂದು ಸಲಹೆ ನೀಡಿದರು. ಎಂ.ಆರ್.ಪಿ.ಎಲ್, ಎಸ್‌ಇಝೆಡ್, ಓ.ಎನ್.ಜಿ.ಸಿ ಗಳಲ್ಲಿ, ರೈಲ್ವೆ ಮತ್ತು ಬ್ಯಾಂಕುಗಳಲ್ಲಿ ಸ್ಥಳೀಯರಿಗೆ ಉದ್ಯೋಗ ಕಲ್ಪಿಸಬೇಕೆಂದು ಬಿ.ಕೆ ಇಂತಿಯಾಜ್ ಒತ್ತಾಯಿಸಿದರು.

ಮಾಜಿ ಜಿಲ್ಲಾಧ್ಯಕ್ಷರಾದ ದಯಾನಂದ್ ಶೆಟ್ಟಿ ಮಾತನಾಡುತ್ತಾ ಜಿಲ್ಲೆಯಲ್ಲಿ MRPL, MSEZ ಕೈಗಾರಿಕೆಗಳು ಜಿಲ್ಲೆಯ ನೆಲವನ್ನೆ ಬಳಸಿಕೊಂಡು ಇಲ್ಲಿನ ಪರಿಸರವನ್ನು ಕಲುಷಿತಗೊಳಿಸಿ ಇಲ್ಲಿದ್ದರೂ ಕೂಡ ಕೈಗಾರಿಕೆಗಳಲ್ಲಿ ದಕ್ಷಿಣಕನ್ನಡದ ಯುವಜನರಿಗೆ ಕೆಲಸಗಳಿಲ್ಲ ಇಲ್ಲಿನ ರೈಲ್ವೆ ವ್ಯವಸ್ಥೆಯಲ್ಲಿಯೂ ಕೂಡ ಸ್ಥಳೀಯರಿಗೆ ಅವಕಾಶಗಳಿಲ್ಲ ಹಾಗಾಗಿ ಇಲ್ಲಿನ ಸ್ಥಳೀಯರಿಗೆ ಸ್ಥಳೀಯ ಕೈಗಾರಿಕೆಗಳಲ್ಲಿ ಅವಕಾಶ ನೀಡಬೇಕು ಎಂದರು.

ಧರಣಿಯನ್ನು ಉದ್ದೇಶಿಸಿ ಡಿವೈಎಫ್‌ಐ ಜಿಲ್ಲಾ ಖಜಾಂಚಿ ಮನೋಜ್ ವಾಮಂಜೂರು, ಜಿಲ್ಲಾ ಮುಖಂಡರಾದ ಅಶ್ರಫ್ ಕೆ. ಸಿ ರೋಡ್, ಶ್ರೀನಾಥ್ ಕುಲಾಲ್ ಮಾತನಾಡಿದರು. ಜಿಲ್ಲಾ ಉಪಾಧ್ಯಕ್ಷ ನವೀನ್ ಕೊಂಚಾಡಿ ಸ್ವಾಗತಿಸಿದರು, ಜಿಲ್ಲಾ ಸಹ ಕಾರ್ಯದರ್ಶಿ ಸಾಧಿಕ್ ಕಣ್ಣೂರು ವಂದಿಸಿದರು. ಜಿಲ್ಲಾ ಮುಖಂಡರಾದ ನಿತಿನ್ ಕುತ್ತಾರ್, ರಝಕ್ ಮೊಂಟೆಪದವು, ಸುನಿಲ್ ತೇವುಲ, ರಫೀಕ್ ಹರೇಕಳ, ನೌಶಾದ್ ಬೆಂಗರೆ, ಪ್ರಶಾಂತ್ ಎಂ.ಬಿ, ಅಶ್ರಫ್ ಹರೇಕಳ ಟ, ದಿನೇಶ್ ಬೊಂಡಂತಿಲ, ರಿಯಾಜ್ ಮೂಡುಬಿದ್ರಿ ಉಪಸ್ಥಿತರಿದ್ದರು.



ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಪದಾಧಿಕಾರಿಗಳ ಸಭೆ. ಅಖಿಲ ಭಾರತ ಅಧ್ಯಕ್ಷರಾದ ಕಾಮ್ರೇಡ್ ಟಿ. ಅರಸು ರವರು ಮಾತನಾಡುತ್ತಿರುವುದು. 13-09-2019, ಬೆಂಗಳೂರು







ಸಿಐಟಿಯು ಉಡುಪಿ ಜಿಲ್ಲಾ ಸಮ್ಮೇಳನ

ಜಾಗತಿಕ ಹಣಕಾಸು ಬಂಡವಾಳವು ತನ್ನ ರಾಜಕೀಯ ಶಕ್ತಿಯಿಂದ ಭಾರತದ ಸಾರ್ವಜನಿಕ ರಂಗವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ದೇಶದ ರಾಜಕೀಯ ಶಕ್ತಿಗಳನ್ನು ಖರೀದಿಸಿದೆ. ಆಳುವ ವರ್ಗಗಳು ವಿದೇಶೀ ಹಣಕಾಸು, ರಾಜಕೀಯ ಒತ್ತಡಗಳಿಗೆ ಸ್ವಯಂಪ್ರೇರಣೆಯಿಂದ ಬಲಿಯಾಗಿ ನಮ್ಮ ಉತ್ಪಾದನಾ ವ್ಯವಸ್ಥೆಗೆ ದಕ್ಕೆ ತರುತ್ತಿದೆ ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ನುಡಿದರು.



ಕೆ. ಶಂಕರ



ಸುರೇಶ ಕಲ್ಲಾಗರ್

ಕುಂದಾಪುರದಲ್ಲಿ ನಡೆದ ಸಿಐಟಿಯು ಉಡುಪಿ ಜಿಲ್ಲಾ 6ನೇ ಸಮ್ಮೇಳನ ಅಂಗವಾಗಿ ಸಪ್ಟೆಂಬರ್ 9 ರಂದು ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಮೀನಾಕ್ಷಿ ಸುಂದರಂ ಮಾತನಾಡುತ್ತಿದ್ದರು.

ದೇಶದಾದ್ಯಂತ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಸೂಲಿಯಿಂದ ದೇಶದ ಅಭಿವೃದ್ಧಿ ಮಾಡಲಾಗುವುದು ಎಂದು ಪ್ರಚಾರ ಮಾಡಿದ ಕೇಂದ್ರ ಸರಕಾರ, ಇದೀಗ ಶೇ.65ರಷ್ಟು ಮಾತ್ರ ತೆರಿಗೆ ವಸೂಲಾಗಿದೆ ಎಂದು ಹೇಳುತ್ತಿದ್ದಾರೆ. ತೆರಿಗೆ ವಂಚಿಸಿದವರು ಕೋಟ್ಯಧಿಪತಿಗಳೇ ಹೊರತು ಕಾರ್ಮಿಕರಲ್ಲ ಎಂದು ಮೀನಾಕ್ಷಿ ಸುಂದರಂ ಸರಕಾರದ ವಂಚನೆಯನ್ನು ಟೀಕಿಸಿದರು.

ಸ್ವಾಗತ ಸಮಿತಿಯ ಅಧ್ಯಕ್ಷ ಎಚ್. ನರಸಿಂಹ, ಕಾರ್ಯದರ್ಶಿ ಸುರೇಶ್ ಕಲ್ಲಾಗರ್, ಕೋಶಾಧಿಕಾರಿ ವೆಂಕಟೇಶ ಕೋಣಿ, ಹಿರಿಯ ಮುಖಂಡರಾದ ಕೆ.ಶಂಕರ, ಬಾಲಕೃಷ್ಣ ಶೆಟ್ಟಿ, ಶಶಿಧರ ಗೊಲ್ಲ, ಯು. ದಾಸ ಭಂಡಾರಿ, ವಿ. ನರಸಿಂಹ ಮೊದಲಾದವರು ವೇದಿಕೆಯಲ್ಲಿದ್ದರು. ಗಣೇಶ ಗಂಗೊಳ್ಳಿ ಮತ್ತು ಬಳಗದವರಿಂದ ಸುಶ್ರಾವ್ಯ ಸುಗಮ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ನೂತನ ಜಿಲ್ಲಾ ಸಮಿತಿ :

ಸಿಐಟಿಯು ಉಡುಪಿ ಜಿಲ್ಲಾ ನೂತನ ಸಮಿತಿಗೆ 15 ಮಂದಿ ಪದಾಧಿಕಾರಿಗಳನ್ನೊಳಗೊಂಡ 42 ಮಂದಿ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು. **ಅಧ್ಯಕ್ಷರು:** ಕೆ.ಶಂಕರ, **ಉಪಾಧ್ಯಕ್ಷರು:** ಪಿ. ವಿಶ್ವನಾಥ ರೈ, ಬಾಲಕೃಷ್ಣ ಶೆಟ್ಟಿ, ಮಹಾಬಲ ವಡೇರ ಹೋಬಳಿ, ಬಲ್ಕೀಸ್. **ಪ್ರಧಾನ ಕಾರ್ಯದರ್ಶಿ:** ಸುರೇಶ ಕಲ್ಲಾಗರ **ಕಾರ್ಯದರ್ಶಿಗಳು:** ಎಚ್. ನರಸಿಂಹ, ಗಣೇಶ ತೊಂಡೆಮಕ್ಕಿ, ಶೇಖರ ಬಂಗೇರ, ಸುನಂದ, ಉಮೇಶ ಕುಂದರ್, ಭಾರತಿ, ಸಂತೋಷ ಹೆಮ್ಮಾಡಿ, ಕವಿರಾಜ್.ಎಸ್. **ಕೋಶಾಧಿಕಾರಿ:** ಶಶಿಧರ ಗೊಲ್ಲ ಆಯ್ಕೆಯಾಗಿದ್ದಾರೆ.

ಜಿಲ್ಲಾ ಸಮ್ಮೇಳನದ ನಿರ್ಣಯಗಳು:

ಮರಳು ಲಭ್ಯತೆಗಾಗಿ ಜಿಲ್ಲಾಧಿಕಾರಿ ಕಚೇರಿ ಮುಂದೆ ಧರಣಿ, ಹಂಚು ಉದ್ಯಮ ಮತ್ತು ಕಾರ್ಮಿಕರನ್ನು ರಕ್ಷಿಸಲು ಒತ್ತಾಯ, ಬೀಡಿ ಕಾರ್ಮಿಕರಿಗೆ ಬಾಕಿ ಇರುವ ಕನಿಷ್ಟ ಕೂಲಿ ಮತ್ತು ತುಟ್ಟಿಭತ್ತೆ ಪಡೆಯಲು ಚಳುವಳಿ, ಗುತ್ತಿಗೆ ಕಾರ್ಮಿಕರ ಸಮಸ್ಯೆ ಪರಿಹರಿಸಲು ಹಾಗೂ ಖಾಯಂಗೊಳಿಸಲು ಒತ್ತಾಯ, 1999 ಕಟ್ಟಡ ಕಾರ್ಮಿಕರ ಕಾನೂನು ಹಾಗೂ ಸೆಸ್ ರದ್ಧತಿ ವಿರೋಧಿಸಿ ನಿರ್ಣಯಗಳನ್ನು ಕೈಗೊಳ್ಳಲಾಯಿತು.

ಸಮ್ಮೇಳನದ ಕಲಾಪಗಳು

ಎರಡು ದಿನಗಳ ಉಡುಪಿ ಜಿಲ್ಲಾ ಸಮ್ಮೇಳನ ಕುಂದಾಪುರದ ಕಾರ್ಮಿಕ ಭವನದಲ್ಲಿ ನಡೆಯಿತು. ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಡಾ. ಕೆ. ಪ್ರಕಾಶ್ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು. ಕೇಂದ್ರ ಸರಕಾರದ ತಪ್ಪು ಆರ್ಥಿಕ ನೀತಿಗಳಿಂದ ಉದ್ಯೋಗ ನಷ್ಟವಾಗುತ್ತಿದೆ. ಕಳೆದ 45 ವರ್ಷಗಳಲ್ಲಿ ಕಾಣದಷ್ಟು ನಿರುದ್ಯೋಗ ಸಮಸ್ಯೆ ಹೆಚ್ಚಳವಾಗಿದೆ. ಕೇಂದ್ರದ ನೋಟು ರದ್ಧತಿ, ಜಿಎಸ್‌ಟಿ, ಕಾರ್ಮಿಕ ವಿರೋಧಿ ಕಾಯಿದೆಗಳ ಪರಿಣಾಮವಾಗಿ ಜಗತ್ತಿನ ಆರ್ಥಿಕತೆಯಲ್ಲಿ 5ನೇ ಸ್ಥಾನದಲ್ಲಿದ್ದ ಭಾರತ 7ನೇ ಸ್ಥಾನಕ್ಕೆ ಕುಸಿದಿದೆ ಎಂದು ಡಾ.ಕೆ.ಪ್ರಕಾಶ್ ಟೀಕಿಸಿದರು.

ಸಮ್ಮೇಳನ ಧ್ವಜಾರೋಹಣವನ್ನು ಸಿಐಟಿಯು ಉಡುಪಿ ಜಿಲ್ಲಾ ಸಮಿತಿ ಅಧ್ಯಕ್ಷ ಪಿ.ವಿಶ್ವನಾಥ ರೈ ನೆರವೇರಿಸಿದರು. ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಪಿ.ವಿಶ್ವನಾಥ ರೈ ವಹಿಸಿದ್ದರು. ಜಿಲ್ಲೆಯ ಸಿಐಟಿಯು ಹಿರಿಯ ಮುಖಂಡರಾದ ಯು. ದಾಸ್ ಭಂಡಾರಿ, ವಿ.ನರಸಿಂಹ, ವೆಂಕಟೇಶ ಕೋಣಿ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು. ●





ಕನಕಗಿರಿ ಗ್ರಾಮೀಣ ಪ್ರದೇಶಗಳಿಗೆ ಸಮರ್ಪಕವಾಗಿ ಬಸ್ ಸೌಲಭ್ಯ ಕಲ್ಪಿಸಲು ಎಸ್‌ಎಫ್‌ಐ ಆಗ್ರಹ



ಕನಕಗಿರಿ ಸುತ್ತಲಿನ ಗ್ರಾಮೀಣ ಪ್ರದೇಶಗಳಾದ ಅಡವಿಭಾವಿ ತಾಂಡ, ಬಂಕಾಪುರ, ಸೋಮುಸಾಗರ, ಹನುಮನಾಳ ಸೇರಿದಂತೆ ವಿವಿಧ ಗ್ರಾಮಗಳಿಗೆ ಬಸ್ ಸೌಲಭ್ಯ ಕಲ್ಪಿಸಲು ಒತ್ತಾಯಿಸಿ ಇಂದು ಕನಕಗಿರಿ ಬಸ್ ನಿಲ್ದಾಣದ ಸಂಚಾರ ನಿಯಂತ್ರಕರ ಮೂಲಕ ಮನವಿ ಸಲ್ಲಿಸಿ ಆಗ್ರಹಿಸಲಾಯಿತ್ತು.

ಕನಕಗಿರಿ ತಾಲ್ಲೂಕಾಗಿ ಒಂದು ವರ್ಷ ಕಳೆದು ಮತ್ತು ಸ್ವಾತಂತ್ರ್ಯ ಬಂದು 73 ವರ್ಷಗಳಾದರು ಇಂದಿಗೂ ಈ ಭಾಗದಲ್ಲಿ ಅನೇಕ ಗ್ರಾಮಗಳಿಗೆ ಬಸ್ ಸೌಲಭ್ಯ ಕಲ್ಪಿಸುವಲ್ಲಿ ಸರ್ಕಾರ ಮತ್ತು ಜನಪ್ರತಿನಿಧಿಗಳು ವಿಫಲವಾಗಿದ್ದಾರೆ. ಈ ಕುರಿತು ಎಸ್‌ಎಫ್‌ಐ ಸಂಘಟನೆಯು ಅನೇಕ ಬಾರಿ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಲಾಗಿದೆ ಆದರೂ ಅಧಿಕಾರಿ ವರ್ಗ ಸಮಸ್ಯೆಗಳನ್ನು ಬಗೆಹರಿಸಲು ಸಂಪೂರ್ಣವಾಗಿ ನಿರ್ಲಕ್ಷ್ಯ ತೋರಿದ್ದಾರೆ

ಆದ್ದರಿಂದ ಈ ಕೂಡಲೇ ಅಡವಿಬಾವಿ, ತಾಂಡ, ಹನುಮನಾಳ, ಬಂಕಾಪುರ ಗ್ರಾಮಗಳಿಗೆ ಸರ್ಮಪಕ ಬಸ್ ಸೌಲಭ್ಯ ಕಲ್ಪಿಸಲು ಅಧಿಕಾರಿಗಳು ಮುಂದಾಗಬೇಂಕದು ಎಸ್‌ಎಫ್‌ಐ ಆಗ್ರಹಿಸುತ್ತದೆ.

ಕನಕಗಿರಿ, ಗಂಗಾವತಿ, ಕೊಪ್ಪಳಕ್ಕೆ ಉನ್ನತ ಶಿಕ್ಷಣ ಕಲಿಯಲು ನೂರಾರು ವಿದ್ಯಾರ್ಥಿಗಳು ದಿನನಿತ್ಯ ವಿದ್ಯಾಭ್ಯಾಸ ಮಾಡಲು ನಗರ ಪ್ರದೇಶಗಳಿಗೆ ಬರುತ್ತಿದ್ದು ನಿಗದಿತ ಸಮಯಕ್ಕೆ ಸರಿಯಾಗಿ ಬಸ್ ಸೌಲಭ್ಯ ಇರದ ಕಾರಣ ಅಡವಿಬಾವಿ ತಾಂಡದ ವಿದ್ಯಾರ್ಥಿಗಳು ಸುಮಾರು 11 ಕಿ.ಲೋ ಮೀಟರ ಕಾಲ್ನಡಿಗೆ ಮೂಲಕ ದಿನನಿತ್ಯ ಶಾಲೆಗೆ ಬರುತ್ತಾರೆ. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಬಸ್‌ಗಳನ್ನು ಇನ್ನೂ 3–4 ದಿನಗಳ ಒಳಗೆ ಬಿಡಬೇಕು ಹಾಗೂ ಈ ಮೇಲಿನ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬೇಕು ಇಲ್ಲದಿದ್ದರೆ ಜನಪ್ರತಿನಿಧಿಗಳ ಮನೆ ಮುಂದೆ ಮತ್ತು ಗಂಗಾವತಿ ಡೀಪೋ ಕಛೇರಿ ಮುಂದೆ ಅನಿರ್ದಿಷ್ಟ ಧರಣಿ ಮಾಡಲಾಗುವುದು ಎಂದು ಎಚ್ಚರಿಸಲಾಯಿತ್ತು. ಈ ಸಂದರ್ಭದಲ್ಲಿ ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ಅಮರೇಶ ಕಡಗದ, ಕನಕಗಿರಿ ಮುಖಂಡರಾದ ನೀಲಕಂಠ ಬಡಿಗೇರ, ಶಿವು ಈಚನಾಳ, ಹನುಮೇಶ, ಶಿವು ಹೋಮ್ಮಿನಾಳ, ಮಾರುತಿ ಪಾಟೀಲ್, ಹನುಮೇಶ, ಮಂಜುನಾಥ ಹಟ್ಟಿ, ಮಲ್ಲಯ್ಯ, ಹುಸೇನ್ ಬಾಷ್, ಬಸವರಾಜ, ವಿನೋದ, ಮಹ್ಮದ ಇತರರು ಇದ್ದರು. ●



ಪ್ರೊ. ಟಿ.ಆರ್. ಚಂದ್ರಶೇಖರ

ಕುಟುಂಬದ ಗಾತ್ರ ಮತ್ತು ದೇಶಭಕ್ತಿ

ಪ್ರಧಾನಮಂತ್ರಿ ಅವರು ಕುಟುಂಬದ ಗಾತ್ರ ಮತ್ತು ದೇಶಭಕ್ತಿಗಳ ನಡುವೆ ವಿಲೋಮ ಸಂಬಂಧದ ಬಗ್ಗೆ ಮಾತನಾಡಿದ್ದಾರೆ. ಈ ಸೂತ್ರದ ಪ್ರಕಾರ ಸಣ್ಣ ಗಾತ್ರದ ಕುಟುಂಬವು ದೇಶಭಕ್ತಿಯ ಸಂಗತಿಯಾದರೆ ದೊಡ್ಡ ಗಾತ್ರದ ಕುಟುಂಬವು ಅನೇಕ ಸಮಸ್ಯೆಗಳ ಕೂಪವಾಗಿರುತ್ತದೆ. ಹರಿಯಾಣ, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಕುಟುಂಬದ ಸರಾಸರಿ ಗಾತ್ರ (ಕುಟುಂಬದ ಸದಸ್ಯರ ಸಂಖ್ಯೆ) 2011ರಲ್ಲಿ 5.5 ಕ್ಕಿಂತ ಅಧಿಕವಾಗಿದ್ದರೆ ದಕ್ಷಿಣ ಭಾರತದ ರಾಜ್ಯಗಳಲ್ಲಿ ಇದು 4.5 ಕ್ಕಿಂತ ಅಧಿಕವಾಗಿದೆ. ಪ್ರಧಾನಮಂತ್ರಿ ಅವರ ಮಾನದಂಡವನ್ನು ಇಲ್ಲಿ ಅನ್ವಯಿಸಿದರೆ ದಕ್ಷಿಣ ಭಾರತದ ರಾಜ್ಯಗಳಲ್ಲಿನ ಜನರು ಹೆಚ್ಚು ದೇಶಭಕ್ತರೆಂದು ಮತ್ತು ಉತ್ತರ ಭಾರತದ ರಾಜ್ಯಗಳಲ್ಲಿನ ಜನರ ದೇಶಭಕ್ತಿ ಕಡಿಮೆಯೆಂದು ಹೇಳಲು ಬರುತ್ತದೆಯೇ? ಇವೆರಡರ ನಡುವಿನ ಸಂಬಂಧದ ಬಗ್ಗೆ ಪ್ರಧಾನಮಂತ್ರಿ ಅವರು ರೂಪಿಸಿರುವ ಮಾನದಂಡವನ್ನು ಮರುಪರಿಶೀಲಿಸುವ ಅಗತ್ಯವಿದೆ.

ಅನೇಕ ವರ್ಷಗಳ ನಂತರ ಜನಸಂಖ್ಯೆಯ ತೀವ್ರ ಬೆಳವಣಿಗೆ ಸಮಸ್ಯೆಯ ಬಗೆಗಿನ ಚರ್ಚೆಯು ಮತ್ತೊಮ್ಮೆ ಮುಂಚೂಣಿಗೆ ಬಂದಿದೆ. ಇದೊಂದು ಸ್ವಾಗತಾರ್ಹ ಸಂಗತಿ. ನಮ್ಮ ಪ್ರಧಾನಮಂತ್ರಿ ಅವರು ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯಂದು ದೇಶವನ್ನುದ್ದೇಶಿಸಿ ಮಾತನಾಡುತ್ತಾ 'ಯಾರು ಕುಟುಂಬ ಗಾತ್ರವನ್ನು ಸಣ್ಣದಾಗಿಟ್ಟುಕೊಂಡಿರುತ್ತಾರೋ ಅವರು ಒಂದು ವಿಧದ 'ದೇಶಭಕ್ತಿ'ಯನ್ನು ಪಾಲಿಸುತ್ತಿದ್ದಾರೆ' ಎಂಬ ಅರ್ಥದ ಮಾತುಗಳನ್ನಾಡಿದ್ದಾರೆ. ಇದು ನಿಜಕ್ಕೂ ಜನಸಂಖ್ಯೆಯ ನಿಯಂತ್ರಣಕ್ಕೆ ಸಂಬಂಧಿಸಿದ ದೇಶದ ಗಮನ ಸೆಳೆಯುವ ಮಾತುಗಳಾಗಿವೆ. ನಿಜ, ಕುಟುಂಬಗಳು ದೊಡ್ಡ ಗಾತ್ರದವಾಗಿದ್ದರೆ, ಕುಟುಂಬದಲ್ಲಿ ಮಕ್ಕಳ ಸಂಖ್ಯೆ ಅಧಿಕವಾಗಿದ್ದರೆ ಅದು ಸಮಾಜ, ಪರಿಸರ ಮತ್ತು ಕುಟುಂಬದ ಮೇಲೆ ಅನೇಕ ದುಷ್ಪರಿಣಾಮ ಉಂಟು ಮಾಡುತ್ತದೆ. ಸುಸ್ಥಿರಗತಿ ಅಭಿವೃದ್ಧಿ ದೃಷ್ಟಿಯಿಂದ ಮತ್ತು ಆರ್ಥಿಕ ಭದ್ರತೆಯ ದೃಷ್ಟಿಯಿಂದ ಜನಸಂಖ್ಯೆಯ ಬೆಳವಣಿಗೆಯನ್ನು ತಹಬಂದಿಯಲ್ಲಿಟ್ಟುಕೊಳ್ಳುವುದು ಅತ್ಯಂತ ಅಗತ್ಯ. ಆದರೆ ಇದನ್ನು ಧಾರ್ಮಿಕ ನೆಲೆಯಿಂದ ನೋಡುವುದು ಮತ್ತು ಅದರ ಆಧಾರದಲ್ಲಿ ಕ್ರಮ ತೆಗೆದುಕೊಳ್ಳುವುದು ಸಮಸ್ಯೆಯ ನಿವಾರಣೆಗೆ ಹೆಚ್ಚು ಉಪಯುಕ್ತವಾಗುವುದಿಲ್ಲ. ಈ ಪ್ರಣಾಳಿಕೆಯ ಒಂದು ಸಮಸ್ಯೆಯನ್ನು ಇಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ.

ಸಮಾಜದಲ್ಲಿ ಹಿಂದೂಗಳ ಜನಸಂಖ್ಯೆಯ ಬೆಳವಣಿಗೆಯು ಕೆಳಮಟ್ಟದಲ್ಲಿದ್ದರೆ ಮುಸ್ಲಿಮರ ಜನಸಂಖ್ಯೆಯ ಬೆಳವಣಿಗೆಯು ಅಧಿಕವಾಗಿದೆ. ಆದ್ದರಿಂದ ಎರಡು ಮಕ್ಕಳ ಕುಟುಂಬ ನೀತಿಯನ್ನು ಕಡ್ಡಾಯ ಮಾಡಬೇಕೆಂಬ ಒತ್ತಾಯ ಕೆಲವು ವರ್ಗಗಳಿಂದ ಕೇಳಿಬರುತ್ತಿದೆ. ನಿಜ, ಮುಸ್ಲಿಮರ ಜನಸಂಖ್ಯೆಯ ಬೆಳವಣಿಗೆ ಗತಿಯು ಹಿಂದೂಗಳ ಜನಸಂಖ್ಯೆಯ ಬೆಳವಣಿಗೆ ಗತಿಗಿಂತ ಅಧಿಕವಾಗಿದೆ. ಆದರೆ ಇದನ್ನು ಧಾರ್ಮಿಕ ನೆಲೆಯಿಂದ ನೋಡುವುದರಲ್ಲಿ ಅನೇಕ ಸಮಸ್ಯೆಗಳಿವೆ. ಇದು ಪ್ರಧಾನವಾಗಿ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆ.

ಏಕೆಂದರೆ ದಕ್ಷಿಣ ಭಾರತದ ಕೇರಳ ರಾಜ್ಯದಲ್ಲಿನ ಜನಸಂಖ್ಯೆಯಲ್ಲಿ ಮುಸ್ಲಿಮರ ಪಾಲು ಶೇ. 26.26. ಆದರೆ ಇಲ್ಲಿನ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ 2001–2011 ದಶಕದಲ್ಲಿ ಶೇ.4.60. ಆದರೆ ಮುಸ್ಲಿಮರ ಪ್ರಮಾಣ ಶೇ.20ಕ್ಕಿಂತ ಕಡಿಮೆಯಿರುವ ಬಿಹಾರ ಮತ್ತು ಉತ್ತರ ಪ್ರದೇಶಗಳಲ್ಲಿ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಶೇ. 25 ರಷ್ಟಿದೆ. ಇದೇ ರೀತಿಯಲ್ಲಿ ರಾಜಸ್ಥಾನ, ಮಧ್ಯಪ್ರದೇಶ, ಗುಜರಾತ್ ಮತ್ತು ಹರಿಯಾಣ ರಾಜ್ಯಗಳಲ್ಲಿ ಮುಸ್ಲಿಮರ ಪ್ರಮಾಣ ಶೇ. 10ಕ್ಕಿಂತ ಕಡಿಮೆಯಿದೆ. ಆದರೆ ಅವುಗಳಲ್ಲಿ ಜನಸಂಖ್ಯೆಯೆ ಬೆಳವಣಿಗೆ ಪ್ರಮಾಣ ಶೇ 20ರ ಆಸುಪಾಸಿನಲ್ಲಿದೆ. ಆದರೆ ಕರ್ನಾಟಕ ರಾಜ್ಯದಲ್ಲಿ ಮುಸ್ಲಿಮರ ಪ್ರಮಾಣ ಶೇ.12.92ರಷ್ಟಿದ್ದರೂ ಅಲ್ಲಿ ಜನಸಂಖ್ಯೆಯ ಬೆಳವಣಿಗೆ ಪ್ರಮಾಣ ಶೇ.15.7ರಷ್ಟಿದೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಸಾಪೇಕ್ಷವಾಗಿ ಮುಸ್ಲಿಮರ ಸಂಖ್ಯೆಯು ಉತ್ತರ ಭಾರತದ ಆಯ್ದ ರಾಜ್ಯಗಳಲ್ಲಿರುವ ಪ್ರಮಾಣಕ್ಕಿಂತ ಅಧಿಕವಾಗಿದ್ದರೂ ಅಲ್ಲಿ ಜನಸಂಖ್ಯೆಯ ಬೆಳವಣಿಗೆಯು ತಹಬಂದಿಯಲ್ಲಿದೆ.

ಈ ರೀತಿಯ ಭಿನ್ನತೆಯ ಮೂಲದಲ್ಲಿ ಸಾಮಾಜಿಕ ಸೂಚಿಗಳಾದ ಮಹಿಳೆಯರ ಸಾಕ್ಷರತೆ, ಶಿಶು ಮರಣ ಪ್ರಮಾಣ ಮತ್ತು ಗಂಡು ಮಕ್ಕಳ ಅತಿವ್ಯಾಮೋಹ ಮುಂತಾದವು ಕಾರಣಗಳಾಗಿವೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಜನಸಂಖ್ಯೆಯ ನಿಯಂತ್ರಣ ಅತ್ಯಂತ ಯಶಸ್ವಿಯಾಗಿದ್ದರೆ ಅಲ್ಲಿ ಮಹಿಳೆಯರ ಉತ್ತಮ ಸಾಕ್ಷರತೆ ಪ್ರಮಾಣ, ಕೆಳಮಟ್ಟದ ಶಿಶು ಮರಣ ಪ್ರಮಾಣ ಮತ್ತು ಮಹಿಳೆಯರ ಪರವಾಗಿರುವ ಲಿಂಗ ಅನುಪಾತಗಳ ಪಾತ್ರ ನಿರ್ಣಾಯಕವಾದುದಾಗಿದೆ. ಈ ವಿಷಯದಲ್ಲಿ ಉತ್ತರ ಭಾರತದ ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ಗುಜರಾತ್ ಮತ್ತು ಹರಿಯಾಣ ರಾಜ್ಯಗಳು ಬಹಳಷ್ಟು ಹಿಂದುಳಿದಿವೆ. ದಕ್ಷಿಣ ಭಾರತದ ರಾಜ್ಯಗಳಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ 2011ರಲ್ಲಿ ಶೇ. 70ಕ್ಕಿಂತ ಅಧಿಕವಾಗಿದ್ದರೆ ಉತ್ತರ ಭಾರತದ ರಾಜ್ಯಗಳಲ್ಲಿ ಇದು ಶೇ. 60ಕ್ಕಿಂತ ಕೆಳಮಟ್ಟದಲ್ಲಿದೆ. ಶಿಶು ಮರಣ ಪ್ರಮಾಣವು ಉತ್ತರ ಭಾರತದ ರಾಜ್ಯಗಳಲ್ಲಿ 2016ರಲ್ಲಿ 35ರ ಮೇಲಿದ್ದರೆ ದಕ್ಷಿಣ ಭಾರತದಲ್ಲಿ ಇದು 25ಕ್ಕಿಂತ ಕೆಳಮಟ್ಟದಲ್ಲಿದೆ. ಉತ್ತರ ಪ್ರದೇಶ, ಮಧ್ಯಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ಇದು 40ಕ್ಕಿಂತ ಅಧಿಕಮಟ್ಟದಲ್ಲಿದೆ. ಪುದುಚೆರಿ, ತಮಿಳುನಾಡು ಮತ್ತು ಕೇರಳ ರಾಜ್ಯಗಳಲ್ಲಿ ಇದು 20ಕ್ಕಿಂತ ಕಡಿಮೆಯಿದೆ. ಇದೇ ರೀತಿಯಲ್ಲಿ ಮೇಲೆ ತಿಳಿಸಿರುವ ಉತ್ತರ ಭಾರತದ ರಾಜ್ಯಗಳಾದ ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ, ಹರಿಯಾಣ ಗುಜರಾತ್‌ಗಳಲ್ಲಿ ಲಿಂಗ ಅನುಪಾತ 2011ರಲ್ಲಿ 920ಕ್ಕಿಂತ ಕಡಿಮೆಯಿದ್ದರೆ ದಕ್ಷಿಣ ಭಾರತದ ರಾಜ್ಯಗಳಲ್ಲಿ ಇದು 970ಕ್ಕಿಂತ ಅಧಿಕವಾಗಿದೆ. ಲಿಂಗ ಅನುಪಾತದ ಕೊರತೆಯು ಗಂಡು ಮಕ್ಕಳ ಅತಿವ್ಯಾಮೋಹದ ಮತ್ತು ಲಿಂಗ ಅಸಮಾನತೆಯ ಸೂಚಿಯಾಗಿದೆ. ಈ ದೃಷ್ಟಿಯಿಂದ ದಕ್ಷಿಣ ಭಾರತದ ರಾಜ್ಯಗಳಲ್ಲಿ ಮಹಿಳೆಯರ ಸ್ಥಿತಿಗತಿಯು ಉತ್ತರ ಭಾರತದ ರಾಜ್ಯಗಳಲ್ಲಿನ ಮಹಿಳೆಯರ ಸಾಮಾಜಿಕ ಸ್ಥಿತಿಗತಿಗಿಂತ ಉತ್ತಮವಾಗಿದೆ. ಇಲ್ಲಿದೆ ಜನಸಂಖ್ಯೆಯ ಬೆಳವಣಿಗೆ ಪ್ರಮಾಣದಲ್ಲಿನ ಭಿನ್ನತೆಯ ಮೂಲ.

ಜನಸಂಖ್ಯೆಯ ಬೆಳವಣಿಗೆಯನ್ನು ಸೂಚಿಸುವ ಒಂದು ಬಹುಮುಖ್ಯ ಸೂಚಿಯೆಂದರೆ 0–6 ವರ್ಷ ವಯೋಮಾನದ ಮಕ್ಕಳ ಸಂಖ್ಯೆ. ದಕ್ಷಿಣ ಭಾರತದ ನಾಲ್ಕು ರಾಜ್ಯಗಳಲ್ಲಿ ಇವರ ಸಂಖ್ಯೆ 2001ರಲ್ಲಿ 283.82 ಲಕ್ಷವಿದ್ದುದು 2011ರಲ್ಲಿ ಇದು 271.98 ಲಕ್ಷಕ್ಕಿಳಿದಿದೆ. ಆದರೆ ಉತ್ತರ ಪ್ರದೇಶ, ಮಧ್ಯಪ್ರದೇಶ, ಬಿಹಾರ ಮತ್ತು ಹರಿಯಾಣಗಳಲ್ಲಿ ಇವರ ಸಂಖ್ಯೆಯು 2001ರಲ್ಲಿ 625.47 ಲಕ್ಷದಷ್ಟಿದ್ದುದು 2011ರಲ್ಲಿ 641.13 ಲಕ್ಷಕ್ಕೇರಿದೆ. ಇದು ದಕ್ಷಿಣ ಭಾರತದ ರಾಜ್ಯಗಳಲ್ಲಿ ಜನಸಂಖ್ಯೆಯ ಬೆಳವಣಿಗೆಯು ಇಳಿಮುಖವಾಗುತ್ತಿರುವುದನ್ನು ಸೂಚಿಸುತ್ತಿದ್ದರೆ ಉತ್ತರ ಭಾರತದ ರಾಜ್ಯಗಳಲ್ಲಿ ಇದು ಇನ್ನೂ ಏರುಮುಖಿಯಾಗಿರುವುದನ್ನು ಸೂಚಿಸುತ್ತದೆ.

ಪ್ರಧಾನಮಂತ್ರಿ ಅವರು ಕುಟುಂಬದ ಗಾತ್ರ ಮತ್ತು ದೇಶಭಕ್ತಿಗಳ ನಡುವೆ ವಿಲೋಮ ಸಂಬಂಧದ ಬಗ್ಗೆ ಮಾತನಾಡಿದ್ದಾರೆ. ಈ ಸೂತ್ರದ ಪ್ರಕಾರ ಸಣ್ಣ ಗಾತ್ರದ ಕುಟುಂಬವು ದೇಶಭಕ್ತಿಯ ಸಂಗತಿಯಾದರೆ ದೊಡ್ಡ ಗಾತ್ರದ ಕುಟುಂಬವು ಅನೇಕ ಸಮಸ್ಯೆಗಳ ಕೂಪವಾಗಿರುತ್ತದೆ. ಹರಿಯಾಣ, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳಲ್ಲಿ ಕುಟುಂಬದ ಸರಾಸರಿ ಗಾತ್ರ (ಕುಟುಂಬದ ಸದಸ್ಯರ ಸಂಖ್ಯೆ) 2011ರಲ್ಲಿ 5.5 ಕ್ಕಿಂತ ಅಧಿಕವಾಗಿದ್ದರೆ ದಕ್ಷಿಣ ಭಾರತದ ರಾಜ್ಯಗಳಲ್ಲಿ ಇದು 4.5 ಕ್ಕಿಂತ ಅಧಿಕವಾಗಿದೆ. ಪ್ರಧಾನಮಂತ್ರಿ ಅವರ ಮಾನದಂಡವನ್ನು ಇಲ್ಲಿ ಅನ್ವಯಿಸಿದರೆ ದಕ್ಷಿಣ ಭಾರತದ ರಾಜ್ಯಗಳಲ್ಲಿನ ಜನರು ಹೆಚ್ಚು ದೇಶಭಕ್ತರೆಂದು ಮತ್ತು ಉತ್ತರ ಭಾರತದ ರಾಜ್ಯಗಳಲ್ಲಿನ ಜನರ ದೇಶಭಕ್ತಿ ಕಡಿಮೆಯೆಂದು ಹೇಳಲು ಬರುತ್ತದೆಯೇ? ಇವೆರಡರ ನಡುವಿನ ಸಂಬಂಧದ ಬಗ್ಗೆ ಪ್ರಧಾನಮಂತ್ರಿ ಅವರು ರೂಪಿಸಿರುವ ಮಾನದಂಡವನ್ನು ಮರುಪರಿಶೀಲಿಸುವ ಅಗತ್ಯವಿದೆ.

ಜನಸಂಖ್ಯೆಯ ಬೆಳವಣಿಗೆ ಗತಿಶೀಲತೆಯು ಬಹುಮುಖಿಯಾದ ಸಂಕೀರ್ಣ ಸಂಗತಿಯಾಗಿದೆ. ಇದನ್ನು ಸೀಮಿತ ವ್ಯಾಪ್ತಿಯಲ್ಲಿ ನೋಡುವುದು ಸರಿಯಲ್ಲ. ಇದು ಸಂಪೂರ್ಣವಾಗಿ ಜೈವಿಕವಾದುದಲ್ಲ. ಸಾಮಾಜಿಕ ಮತ್ತು ಆರ್ಥಿಕ ಚೌಕಟ್ಟಿನಲ್ಲಿ ಇದನ್ನು ವಿಶ್ಲೇಷಿಸುವ ಅಗತ್ಯವಿದೆ. ಧಾರ್ಮಿಕ ಸಂಬಂಧದ ನೆಲೆಯಲ್ಲಿ ಇದನ್ನು ಪರಿಶೀಲಿಸುವುದರಿಂದ ಇದನ್ನು ಬಗೆಹರಿಹಸುವುದು ಸಾಧ್ಯವಿಲ್ಲ. ಅಧ್ಯಯನಗಳು ತೋರಿಸುತ್ತಿರುವಂತೆ ಹಿಂದೂಗಳ ಮತ್ತು ಮುಸ್ಲಿಮರ ನಡುವಿನ ಒಟ್ಟು ಸಂತಾನೋತ್ಪತ್ತಿ ಪ್ರಮಾಣಗಳ(ಟೋಟಲ್ ಫರ್ಟಿಲಿಟಿ ರೇಟ್) ನಡುವಿನ ಅಂತರ ಕುಗ್ಗುತ್ತಿದೆ. ಉದಾಹರಣೆಗೆ ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಲ್ಲಿನ ಮುಸ್ಲಿಮರ ಒಟ್ಟು ಸಂತಾನೋತ್ಪತ್ತಿ ಪ್ರಮಾಣ 2001ರಲ್ಲಿ ಕ್ರಮವಾಗಿ 2.8 ಮತ್ತು 2.1 ರಷ್ಟಿದ್ದುದು 2011ರಲ್ಲಿ ಅದು 1.8 ಮತ್ತು 1.9ಕ್ಕಿಳಿದಿದೆ. ಇದೇ ರೀತಿಯಲ್ಲಿ ಉತ್ತರ ಪ್ರದೇಶದಲ್ಲಿ ಇದು 4.8ರಿಂದ 2.9ಕ್ಕಿಳಿದಿದ್ದರೆ ಬಿಹಾರದಲ್ಲಿ ಇದು 5.1ರಿಂದ 2.3ಕ್ಕಿಳಿದಿದೆ. ನಿಜ, ಇಷ್ಟಾದರೂ ಮುಸ್ಲಿಮರ ಒಟ್ಟು ಸಂತಾನೋತ್ಪತ್ತಿ ಪ್ರಮಾಣವು ಹಿಂದೂಗಳ ಸಂತಾನೋತ್ಪತ್ತಿ ಪ್ರಮಾಣಕ್ಕಿಂತ ಅಧಿಕವಾಗಿದೆ. ಆದರೆ ಅದು ಕಡಿಮೆಯಾಗುತ್ತಿದೆ. ಇದನ್ನು ಗಮನದಲ್ಲಿಟ್ಟುಕೊಂಡು ನಾವು ಜನಸಂಖ್ಯೆಯ ಬೆಳವಣಿಗೆಯನ್ನು ನಿಯಂತ್ರಿಸುವ ಕ್ರಮಗಳ ಬಗ್ಗೆ ಯೋಚಿಸಬೇಕು. ಧಾರ್ಮಿಕ ಸಂಬಂಧಗಳ ನೆಲೆಯಿಂದ ಇದನ್ನು ನಿರ್ವಹಿಸುವುದರ ಬಗ್ಗೆ ಮರುಪರಿಶೀಲಿಸುವ ಅಗತ್ಯವಿದೆ. ಚೀನಾ ದೇಶವು ಸೀಮಿತವಾದ ನೆಲೆಯಲ್ಲಿ 'ಒಂದು ಮಗು' ನೀತಿಯನ್ನು ಕಡ್ಡಾಯ ಮಾಡಿ ಎದುರಿಸಿದ ಸಮಸ್ಯೆಗಳು ನಮ್ಮ ಮುಂದಿವೆ. ಜನಸಂಖ್ಯೆಯ ನಿಯಂತ್ರಣಕ್ಕೆ ಬಲವಂತದ ಮತ್ತು ದಂಡ ಪ್ರಯೋಗದ ಕ್ರಮಗಳ ಬಗ್ಗೆ ಯೋಚಿಸುವ ಮೊದಲು ಅದರ ಮೂಲದಲ್ಲಿನ ಕಾರಣಗಳನ್ನು ವಿಶ್ಲೇಷಿಸುವುದು ಅಪೇಕ್ಷಣೀಯ.

ಈಗಾಗಲೆ ದಕ್ಷಿಣ ಭಾರತದ ರಾಜ್ಯಗಳು ಹತ್ತಿರ ಹತ್ತಿರ ಜನಸಂಖ್ಯೆಯನ್ನು ಸ್ಥಿರಮಟ್ಟದಲ್ಲಿ ಕಾಯ್ದುಕೊಳ್ಳುವ ಪ್ರಮಾಣವನ್ನು ಸಾಧಿಸಿಕೊಳ್ಳುವ ಹಂತದಲ್ಲಿವೆ. ಯಾವುದನ್ನು ಜನಸಂಖ್ಯಾಶಾಸ್ತ್ರದಲ್ಲಿ 'ರೀಪ್ಲೇಸ್‌ಮೆಂಟ್ ರೇಟ್' ಎಂದು ಕರೆಯುತ್ತೇವೆಯೋ ಅಂತಹ ಒಟ್ಟು ಸಂತಾನೋತ್ಪತ್ತಿ ಪ್ರಮಾಣವನ್ನು ಇವು ಸಾಧಿಸಿಕೊಂಡಿವೆ. ಕೇರಳ ರಾಜ್ಯದಲ್ಲಿ 2001 ರಿಂದ 2011ರ ದಶಕದಲ್ಲಿ ಪ್ರತಿ ಕೋಟಿ ಜನಸಂಖ್ಯೆಗೆ ಹೊಸದಾಗಿ ಹುಟ್ಟಿದ ಜನರ ಸಂಖ್ಯೆ 5 ಲಕ್ಷವಾದರೆ ಬಿಹಾರದಲ್ಲಿ ಇದು 21 ಲಕ್ಷ. ಈ ಸಂಖ್ಯೆಯು ಉತ್ತರ ಪ್ರದೇಶದಲ್ಲಿ 36 ಲಕ್ಷವಾಗಿದ್ದರೆ ಕರ್ನಾಟಕದಲ್ಲಿ ಇದು 13.5 ಲಕ್ಷವಾಗಿದೆ. ದಕ್ಷಿಣ ಭಾರತದ ರಾಜ್ಯಗಳು ಜನಸಂಖ್ಯೆಯನ್ನು ತಹಬಂದಿಗೆ ತರುವಲ್ಲಿ ಯಶಸ್ವಿಯಾಗಿದ್ದರೆ ಮಹಿಳೆಯರ ಉನ್ನತ ಸಾಕ್ಷರತೆ, ಕೆಳಮಟ್ಟದ ಶಿಶು ಮರಣ ಪ್ರಮಾಣ ಮತ್ತು ಮಹಿಳಾಪರವಾದ ಲಿಂಗ ಅನುಪಾತವು ಕಾರಣವಾಗಿವೆ.

ಜನಸಂಖ್ಯೆಯ ಬೆಳವಣಿಗೆಯ ನಿಯಂತ್ರಣಕ್ಕೆ ಉತ್ತರ ಭಾರತದ ರಾಜ್ಯಗಳು ದಕ್ಷಿಣ ಭಾರತದ ರಾಜ್ಯಗಳಿಂದ ಪಾಠ ಕಲಿಯಬಹುದು. ಧಾರ್ಮಿಕ ಕಾಮಾಲೆ ಕಣ್ಣಿನಿಂದ ಜನಸಂಖ್ಯೆಯ ಗತಿಶೀಲತೆಯನ್ನು ಪರಿಶೀಲಿಸುವ ಬಗ್ಗೆ ಪುನರಾಲೋಚಿಸುವ ಅಗತ್ಯವಿದೆ. ಜನಸಂಖ್ಯೆ ಮತ್ತು ಮಕ್ಕಳ ಜನನ ಎನ್ನುವುದು ಭಾವನಾತ್ಮಕ ಮತ್ತು ಕೌಟುಂಬಿಕ ಸಂಗತಿಯಾಗಿದೆ. ಇದನ್ನು ಸೀಮಿತ ನೆಲೆಯಲ್ಲಿ ನೋಡುವುದಕ್ಕೆ ಪ್ರತಿಯಾಗಿ ವಿಸ್ತೃತ ನೆಲೆಯಲ್ಲಿ ನಿರ್ವಹಿಸುವ ಅಗತ್ಯವಿದೆ.

(ಇಲ್ಲಿ ಅಂಕಿಸಂಖ್ಯೆಗಳನ್ನು 2001 ಮತ್ತು 2011ರ ಜನಗಣತಿ ವರದಿಗಳಿಂದ ಪಡೆದುಕೊಳ್ಳಲಾಗಿದೆ)



ಒಂದು ವಿಷಮಯ ಸರಕಾರದ ನೂರು ದಿನಗಳು

ಪ್ರಕಾಶ ಕಾರಟ್

ಮೋದಿ ಸರಕಾರದ ಎರಡನೇ ಅವಧಿಯ ಅಧಿಕಾರದ ನೂರು ದಿನಗಳು ಸಂದಿವೆ. ಇದು ಒಂದು ಸಣ್ಣ ಅವಧಿಯಾದರೂ, ಈ ಸರಕಾರದ ಗುಣಾಣುಗಳು ಸ್ಪಷ್ಟವಾಗಿ ಕಣ್ಣಿಗೆ ರಾಚುವಂತಿವೆ. ಅಂದರೆ ಕಾರ್ಪೊರೇಟ್ ಬಂಡವಾಳ ಮತ್ತು ಹಿಂದುತ್ವವನ್ನು ಬೆಸೆದಿರುವ ಒಂದು ಸರ್ವಾಧಿಕಾರಶಾಹೀ ಆಳ್ವಿಕೆ.

ಕಳೆದ 100 ದಿನಗಳಲ್ಲಿ ಕಾಣ ಬಂದಿರುವ ಸಂಗತಿಗಳೆಂದರೆ–ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರಜಾಪ್ರಭುತ್ವದ ಮೇಲೆ ಅಭೂತಪೂರ್ವ ಪ್ರಹಾರ; ಸಂಸತ್ತಿಗೆ ಕಳಂಕ, ನ್ಯಾಯಾಂಗವೂ ಸೇರಿದಂತೆ ಸಂವಿಧಾನಿಕ ಸಂಸ್ಥೆಗಳನ್ನು ಬುಡಮೇಲು ಮಾಡಿರುವುದು ಮತ್ತು ವಿರೋಧ ಹಾಗೂ ಎಲ್ಲ ಪ್ರಕಾರಗಳ ಭಿನ್ನಮತಗಳ ಮೇಲೆ ಸರ್ವಾಧಿಕಾರಶಾಹೀ ದಾಳಿ.

ಸಂವಿಧಾನಿಕ ಕಪಟತನದಿಂದ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅದರ ವಿಶೇಷ ಸ್ಥಾನಮಾನವನ್ನು ವಂಚಿಸಿ, ಅದನ್ನು ಕಳಚಿ ಹಾಕುವ ಮೂಲಕ ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವಕ್ಕೆ ಅತ್ಯಂತ ಗಂಬೀರ ಹೊಡೆತವನ್ನು ಹಾಕಲಾಗಿದೆ. ಕಾಶ್ಮೀರವನ್ನು ಒಂದು ವಿಶಾಲ ಸೆರೆಮನೆಯಾಗಿ ಪರಿವರ್ತಿಸಿ ಕಣಿವೆಯಲ್ಲಿನ ಎಂಬತ್ತು ಲಕ್ಷ ಜನಗಳ ಎಲ್ಲ ಮೂಲಭೂತ ಸ್ವಾತಂತ್ರ್ಯಗಳನ್ನು ನಿರಾಕರಿಸಿರುವ ಸಂಪೂರ್ಣ ನಿರ್ಬಂಧದ ಸ್ಥಿತಿಯನ್ನು ಮುಂದುವರೆಸಲಾಗುತ್ತಿದೆ.

ಲೋಕಸಭಾ ಚುನಾವಣೆಯ ನಂತರದ ಮೊದಲ ಸಂಸತ್ ಅಧಿವೇಶನದಲ್ಲಿ ಹಲವಾರು ಶಾಸನಗಳನ್ನು ಯಾವುದೇ ಸರಿಯಾದ ಪರೀಕ್ಷಣೆ ಮತ್ತು ಚರ್ಚೆಗಳಿಲ್ಲದೆ ದಬಾಯಿಸಿಕೊಂಡು ಪಾಸು ಮಾಡಿಸಿಕೊಂಡ ಅಭೂತಪೂರ್ವ ದೃಶ್ಯ ಕಾಣ ಬಂದಿದೆ. ಮೋದಿ ಸರಕಾರದ ಆಶಯಗಳು ಸ್ಪಷ್ಟವಾಗಿವೆ– ಸಂಸತ್ತು ಕಾರ್ಯಾಂಗದ ರಬ್ಬರ್ ಸ್ಟಾಂಪ್ ಆಗಿ ಕೆಲಸ ಮಾಡಬೇಕು!

ಸಂವಿಧಾನಿಕ ಮತ್ತು ಪ್ರಭುತ್ವದ ಸಂಸ್ಥೆಗಳನ್ನು ಬುಡಮೇಲು ಮಾಡುವ ನಡೆಗಳು ಹೆಚ್ಚಿವೆ. ನ್ಯಾಯಾಂಗವನ್ನು ಬೆದರಿಸಲಾಗುತ್ತಿದೆ, ನ್ಯಾಯಮೂರ್ತಿ ಅಕಿಲ್ ಕುರೇಶಿಯವರನ್ನು ಮಧ್ಯಪ್ರದೇಶ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ನೇಮಿಸಬೇಕೆಂಬ ಕೊಲೆಜಿಯಂ ಶಿಫಾರಸನ್ನು ಸ್ವೀಕರಿಸಲು ನಿರಾಕರಿಸಿರುವುದು, ನ್ಯಾಯಾಂಗದ ನೇಮಕಗಳಲ್ಲಿ ಸರಕಾರ ಹೇಗೆ ಹಸ್ತಕ್ಷೇಪ ಮಾಡಲು ಪ್ರಯತ್ನಿಸುತ್ತಿದೆ ಎಂಬುದಕ್ಕೆ ಇತ್ತೀಚಿನ ಉದಾಹರಣೆ.

ಪ್ರತಿಪಕ್ಷಗಳನ್ನು ದಮನ ಮಾಡುವ ಪ್ರಯತ್ನಗಳಿಗೆ ನೆರವಾಗಲು ಸಿಬಿಐ ಮತ್ತು ಜಾರಿ ನಿರ್ದೇಶನಾಲಯ(ಇಡಿ)ವನ್ನು ಬಳಸಲಾಗುತ್ತಿದೆ. ಪ್ರತಿಪಕ್ಷಗಳ ಮುಖಂಡರ ವಿರುದ್ಧ ಅವನ್ನು ದಬಾವಣೆಯ ಸಾಧನಗಳಾಗಿ ಝಳಪಿಸಲಾಗುತ್ತಿದೆ. ಈ ಸಂಸ್ಥೆಗಳು ತನಿಖೆ ಮಾಡುತ್ತಿರುವ ಪ್ರತಿಪಕ್ಷಗಳ ಮುಖಂಡರ ಸಂಖ್ಯೆ ತೀವ್ರವಾಗಿ ಏರಿದೆ. ಈ ಬೆದರಿಕೆಯ ಮೂಲಕ ಪ್ರತಿಪಕ್ಷಗಳ ಮುಖಂಡರು ಬಿಜೆಪಿಗೆ ಪಕ್ಷಾಂತರ ಮಾಡುವಂತೆ ಪ್ರೇರೇಪಿಸಲಾಗುತ್ತಿದೆ.

ಕ್ರಿಮಿನಲ್ ನ್ಯಾಯನಿರ್ಧಾರದ ವ್ಯವಸ್ಥೆಯನ್ನು ಬುಡಮೇಲು ಮಾಡುವ ಪ್ರಯತ್ನ ತ್ವರಿತ ಗತಿಯಲ್ಲಿ ಸಾಗಿದೆ– ಪೋಲೀಸ್ ತನಿಖೆಗಳಿಗೆ ಮತ್ತು ವಿಚಾರಣಾ ಕೋರ್ಟ್‌ಗಳ ನಿರ್ಧಾರಗಳಿಗೆ ಹಿಂದುತ್ವದ ಮೌಲ್ಯಗಳ ಬಣ್ಣದ ಲೇಪನವಾಗುತ್ತಿದೆ. ಪೆಹ್ಲೂಖಾನ್ ಕೊಲೆ ಪ್ರಕರಣದಲ್ಲಿ ಯಾರೂ ತಪ್ಪಿತಸ್ಥರು ಕಾಣಲಿಲ್ಲ! ಈಗ ತಬ್ರೆಝ್ ಅನ್ಸಾರಿಯನ್ನು ಬಡಿದು ಸಾಯಿಸಿದ ಕೇಸನ್ನು ದುರ್ಬಲಗೊಳಿಸಲಾಗಿದೆ, ಆಪಾದಿತರ ಮೇಲಿನ ಕೊಲೆ ಆಪಾದನೆಯನ್ನು ಕೈಬಿಡಲಾಗಿದೆ. ಈ ತಲೆಕೆಳಗಾದ ಮಾನದಂಡಗಳಲ್ಲಿ ಅಪರಾಧ ಕೃತ್ಯಗಳಿಗೆ ಬಲಿಯಾದವರನ್ನೇ ಅವೇ ಅಪರಾಧಗಳಿಗೆ ಹೊಣೆಯಾಗಿ ಮಾಡಲಾಗುತ್ತಿದೆ.

ಇವೆಲ್ಲವೂ ಒಂದು ಗಂಭೀರ ಆರ್ಥಿಕ ನಿಧಾನಗತಿಯು, ಒಂದು ಆರ್ಥಿಕ ಹಿಂಜರಿತ ಸನ್ನಿಹಿತವಾಗುತ್ತಿರುವ ಹಿನ್ನೆಲೆಯಲ್ಲಿ ನಡೆಯುತ್ತಿವೆ. ಈ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ, ಅಂದರೆ ಎಪ್ರಿಲ್‌ನಿಂದ ಜೂನ್ 2019ರ ಅವಧಿಯಲ್ಲಿ ಜಿಡಿಪಿ ಬೆಳವಣಿಗೆ ದರ 5ಶೇ.ಕ್ಕೆ ಇಳಿದಿದೆ–ಇದು ಕಳೆದ ಆರು ವರ್ಷಗಳಲ್ಲೆ ಅತೀ ಕಡಿಮೆ ಬೆಳವಣಿಗೆ ದರ. ಇದು ಕೂಡ ಒಂದು ಉತ್ಪ್ರೇಕ್ಷಿತ ದರವೇ ಆಗಿದೆ. ಗ್ರಾಮೀಣ ಸಂಕಟ, ಹೆಚ್ಚುತ್ತಿರುವ ನಿರುದ್ಯೋಗ, ಕೊಳ್ಳುವ ಸಾಮರ್ಥ್ಯದ ಮತ್ತು ಸರಕುಗಳಿಗೆ ಬೇಡಿಕೆಯ ಕೊರತೆ ಪ್ರಸಕ್ತ ಬಿಕ್ಕಟ್ಟಿನ ಕಾರಣಗಳು. ಉದ್ದಿಮೆಗಳು ಮತ್ತು ಆರ್ಥಿಕ ವ್ಯವಸ್ಥೆಯ ವಿವಿಧ ವಲಯಗಳನ್ನು ಲಕ್ಷಾಂತರ ಪ್ರಮಾಣದಲ್ಲಿ ಸಂಭವಿಸುತ್ತಿರುವ ಉದ್ಯೋಗ ನಷ್ಟಗಳು ತಟ್ಟಿವೆ.

ಇಂತಹ ಆರ್ಥಿಕ ನಿಧಾನಗತಿಯ ಎದುರಲ್ಲೂ ಮೋದಿ ಸರಕಾರ ದೊಡ್ಡ ಬಂಡವಳಿಗರು ಮತ್ತು ವಿದೇಶಿ ಬಂಡವಾಳದ ಹಿತಗಳಿಗೇ ಆದ್ಯತೆ ನೀಡುವ ಧೋರಣೆಗಳನ್ನೇ ಛಲದಿಂದ ಅನುಸರಿಸುತ್ತಿದೆ. 2019–20ರ ಕೇಂದ್ರ ಬಜೆಟ್ ವಿದೇಶಿ ಬಂಡವಾಳಕ್ಕೆ ಮತ್ತು ಕಾರ್ಪೊರೇಟ್‌ಗಳಿಗೆ ಹಲವಾರು ರಿಯಾಯ್ತಿಗಳನ್ನು ಕೊಟ್ಟಿತ್ತು. ಇದೂ ಸಾಲದೆಂಬಂತೆ, ವಿದೇಶಿ ಹಣಕಾಸು ಬಂಡವಾಳದ ಒತ್ತಡಕ್ಕೆ ಈ ಸರಕಾರ ತಲೆಬಾಗಿದೆ, ವಿದೇಶಿ ಹೂಡಿಕೆದಾರರ ಬಂಡವಾಳ ಗಳಿಕೆಯ ಮೇಲೆ ಹಾಕಿದ್ದ ಸರ್ಚಾರ್ಜ್‌ನ್ನು ಹಿಂತೆಗೆದುಕೊಂಡಿದೆ.



ವ್ಯಂಗ್ಯಚಿತ್ರ ಕೃಪೆ: ನವತೆಲಂಗಾಣ



ಪೆಹ್ಲೂ ಖಾನ್, ತಬ್ರೆಝು ಅನ್ಸಾರಿ

ಮೋದಿ ಸರಕಾರ ಸಾರ್ವಜನಿಕ ವಲಯದ ಉದ್ದಿಮೆಗಳ ಖಾಸಗೀಕರಣದ ಒಂದು ಆಕ್ರಮಣಕಾರೀ ಯೋಜನೆಯನ್ನು ಕೈಗೆತ್ತಿಕೊಂಡಿದೆ. 1 ಲಕ್ಷ ರೂ. ಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಈ ಘಟಕಗಳ ಶೇರುಗಳ ಮಾರಾಟ ಮಾಡಲು ಉದ್ಯುಕ್ತವಾಗಿದೆ. ರೈಲ್ವೆ, ರಕ್ಷಣಾ ಉತ್ಪಾದನೆ, ಬ್ಯಾಂಕಿಂಗ್, ಗಣಿಗಾರಿಕೆ ಇವೆಲ್ಲವೂ ಖಾಸಗೀಕರಣಕ್ಕೆ ಗುರಿಯಾಗುತ್ತಿವೆ.

ಗ್ರಾಮೀಣ ಬೇಡಿಕೆಗೆ ಉತ್ತೇಜನೆ ನೀಡಬಹುದಾದ ಮನರೇಗ ಮತ್ತಿತರ ಸಾಮಾಜಿಕ ಕಲ್ಯಾಣ ಯೋಜನೆಗಳ ಮೇಲಿನ ಸಾರ್ವಜನಿಕ ವೆಚ್ಚಗಳನ್ನು ಹೆಚ್ಚಿಸುವ ಬದಲು ಈ ಸರಕಾರ ವಿದೇಶಿ ಬಂಡವಾಳವನ್ನು ತುಷ್ಟೀಕರಿಸುವುಕ್ಕೆ ಮುಂದಾಗಿದೆ. ಈ "ರಾಷ್ಟ್ರವಾದಿ" ಸರಕಾರ ಕಲ್ಲಿದ್ದಲು ಗಣಿಗಾರಿಕೆಯಲ್ಲಿ 100 ಶೇಕಡಾ ವಿದೇಶಿ ನೇರ ಹೂಡಿಕೆಗೆ ಅವಕಾಶ ಕೊಡಲಾಗುವುದು ಎಂದು ಪ್ರಕಟಿಸಿದೆ. ಇದು ದೇಶದ ಕಲ್ಲಿದ್ದಲು ಸಂಪನ್ಮೂಲವನ್ನು ಬಹುರಾಷ್ಟ್ರೀಯ ಗಣಗಾರಿಕೆ ಕಂಪನಿಗಳು ಸೂರೆ ಮಾಡಲು ಮತ್ತು ಸರಕಾರೀ ಸ್ವಾಮ್ಯದ ಕೋಲ್ ಇಂಡಿಯಾವನ್ನು ದುರ್ಬಲಗೊಳಿಸಲು ದಾರಿ ತೆರೆಯುವ ಕ್ರಮವಾಗಲಿದೆ.

ಮೋದಿ ಸರಕಾರ ರಾಜ್ಯಗಳ ಹಕ್ಕುಗಳನ್ನು ವ್ಯವಸ್ಥಿತವಾಗಿ ಅತಕ್ರಮಿಸುವ, ಅವನ್ನು ಮೊಟಕುಗೊಳಿಸುವ ದಾರಿ ಹಿಡಿದಿದೆ. ಕಳೆದ ಸಂಸತ್ ಅಧಿವೇಶನದಲ್ಲಿ ಪಾಸು ಮಾಡಿಸಿಕೊಂಡ ಹೆಚ್ಚಿನ ಶಾಸನಗಳು ರಾಜ್ಯಗಳ ಹಕ್ಕುಗಳನ್ನು ಮೊಟಕುಗೊಳಿಸಿವೆ. ಇವಷ್ಟೇ ಅಲ್ಲ, ರಕ್ಷಣಾ ವೆಚ್ಚವನ್ನೂ ಕೇಂದ್ರ ಮತ್ತು ರಾಜ್ಯಗಳ ನಡುವೆ ಸಂಪನ್ಮೂಲಗಳನ್ನು ಹಂಚುವ ಒಂದು ಶರತ್ತಾಗಿ ಪರಿಗಣಿಸಬೇಕು ಎಂದು ಹಣಕಾಸು ಆಯೋಗಕ್ಕೆ ಹೇಳಿದೆ. ಇದನ್ನು ಜಾರಿಗೊಳಿಸಿದರೆ ಅದು ತೆರಿಗೆ ಆದಾಯದಲ್ಲಿ ರಾಜ್ಯಗಳ ಪಾಲನ್ನು ಗಂಭೀರವಾಗಿ ತಟ್ಟಲಿದೆ.

ಇನ್ನು, ಒಂದು ರಾಷ್ಟ್ರೀಯ ಭದ್ರತಾ ಪ್ರಭುತ್ವದ ಪರಿಕಲ್ಪನೆ ಯುಎಪಿಎ(ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ) ಮತ್ತು ರಾಷ್ಟ್ರೀಯ ತನಿಖಾ ಏಜೆನ್ಸಿ(ಎನ್‌ಐಎ)ಗೆ ಸಂಬಂಧಪಟ್ಟ ಕಾಯ್ದೆಯ ತಿದ್ದುಪಡಿಗಳೊಂದಿಗೆ ಇನ್ನಷ್ಟು ಗಟ್ಟಿಗೊಂಡಿದೆ. ಇದರಿಂದ ಭಿನ್ನಮತ ಹೊಂದಿರುವವರು, ಪ್ರತಿಭಟನಾಕಾರರು ಹೆಚ್ಚು ಸುಲಭವಾಗಿ ರಾಷ್ಟ್ರೀಯ ಭದ್ರತೆಯ ಪರಿಧಿಗೆ ಒಳಗಾಗುತ್ತಾರೆ.

ಸಂವಿಧಾನ ನಿರೂಪಿಸಿರುವ ಪೌರತ್ವದ ಪರಿಕಲ್ಪನೆಗೇ ಈಗ ಬೆದರಿಕೆ ಬಂದಿದೆ. ಮೋದಿ–ಷಾ ಜೋಡಿ ರಾಷ್ಟ್ರೀಯ ನಾಗರಿಕರ ದಾಖಲೆ(ಎನ್‌ಆರ್‌ಸಿ) ಯನ್ನು ಭಾರತದ ಇತರೆಡೆಗಳಿಗೂ ವಿಸ್ತರಿಸುವ ಯೋಜನೆ ಹಾಕಿಕೊಂಡಿದೆ. ಈಗಾಗಲೇ ಅದು ಒಂದು ಪ್ರದೇಶದ ಎಲ್ಲ ನಿವಾಸಿಗಳ 'ರಾಷ್ಟ್ರೀಯ ಜನಸಂಖ್ಯಾ ದಾಖಲೆ'ಯಲ್ಲಿ ಗಣತಿಗೆ ಒಂದು ಅಧಿಸೂಚನೆಯನ್ನು ಹೊರಡಿಸಿದೆ. ಇದು ಎನ್‌ಆರ್‌ಸಿಯ ಆಧಾರವಾಗುತ್ತದೆ. ಇದನ್ನು 'ಅತಿಕ್ರಮಣಕಾರರನ್ನು' ಅಂದರೆ ಅವರ ಅರ್ಥದಲ್ಲಿ ಮುಸ್ಲಿಮರನ್ನು ಹೊರಹಾಕಲು ಬಳಸಲಾಗುವುದು. ಅದೇ ವೇಳೆಗೆ, ಸಂಸತ್ತು ಮುಸ್ಲಿಮೇತರ ಕಾನೂನುಬಾಹಿರ ವಲಸೆಗಾರರಿಗೆ ನಾಗರಿಕತ್ವವನ್ನು ಒದಗಿಸುವ ನಾಗರಿಕತ್ವ ತಿದ್ದುಪಡಿ ಮಸೂದೆಯನ್ನು ಪಾಸು ಮಾಡುತ್ತದೆ. ಈ ಮೂಲಕ ಹಿಂದೂ ವಲಸೆಗಾರರಿಗೆ ನಾಗರಿಕತ್ವವನ್ನು ಕೊಡಬಹುದು.

ಈ ಒಂದು ಸಣ್ಣ ಅವಧಿಯಲ್ಲಿ, ಮೋದಿ ಸರಕಾರ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಅಡಿಯಾಳು ಮಿತ್ರನಾಗಲು ಇನ್ನಷ್ಟು ಕ್ರಮಗಳನ್ನು ಕೈಗೊಂಡಿದೆ. ಈ ಸರಕಾರ ಕೈಗೊಂಡ ಮೊದಲ ನಿರ್ಧಾರಗಳಲ್ಲಿ ಒಂದು, ಇರಾನಿನಿಂದ ತೈಲ ಖರೀದಿಯನ್ನು ಸಂಪೂರ್ಣವಾಗಿ ನಿಲ್ಲಿಸುವುದು. ಹೆಚ್ಚೆಚ್ಚು ಪ್ರಮಾಣದಲ್ಲಿ ಅಮೆರಿಕಾದ ಶಸ್ತ್ರಾಸ್ತ್ರಗಳು ಮತ್ತು ಮಿಲಿಟರಿ ಸಾಧನಗಳ ಖರೀದಿಗಳನ್ನು ಆರಂಭಿಸಲಾಗಿದೆ. ಅಮೆರಿಕಾದೊಂದಿಗೆ 'ಮೂಲ ವಿನಿಮಯ ಮತ್ತು ಸಹಕಾರ ಒಪ್ಪಂದ'(ಬಿಇಸಿಎ) ಕ್ಕೆ ಸಹಿ ಹಾಕುವ ಕುರಿತ ಮಾತುಕಡೆಗಳು ಅಂತಿಮ ಘಟ್ಟ ತಲುಪಿವೆ.

ಹೀಗೆ ಮೋದಿ ಆಳ್ವಿಕೆಯ ನೂರು ದಿನಗಳು ಇನ್ನೂ ಬರಲಿರುವುದರ ರುಚಿ ಹೇಗಿರುತ್ತದೆ ಎಂಬುದನ್ನು ಮುಂದಾಗಿ ತೋರಿಸಿವೆ.

ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸುವ ಹಾಗೂ ಸಂವಿಧಾನಿಕ ಮೌಲ್ಯಗಳನ್ನು ಕಾಪಾಡಿಕೊಳ್ಳುವ ಗುರುತರವಾದ ಕೆಲಸವನ್ನು ಮಾಡಬೇಕಾಗಿದೆ. ಜನಗಳನ್ನು ಅವರ ಜೀವನಾಧಾರಗಳ, ಉದ್ಯೋಗಗಳ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗೆ ಅಣಿನೆರೆಸಬೇಕಾಗಿದೆ. ಇವನ್ನೆಲ್ಲ ಸಾಧಿಸುವ ಹೋರಾಟಗಳಿಗೆ ಸಾಧ್ಯವಾದಷ್ಟು ವ್ಯಾಪಕವಾದ ಐಕ್ಯತೆಯನ್ನು ಬೆಸೆಯಬೇಕಾಗಿದೆ. ಮೋದಿ ಸರಕಾರದ "ರಾಷ್ಟ್ರವಾದ"ದ ನಿಜ ಬಣ್ಣವನ್ನು, ಅದು ದೇಶವನ್ನು ಮತ್ತು ಜನಗಳನ್ನು ಬಾಧಿಸುತ್ತಿರುವ ಗಂಭೀರ ಸಮಸ್ಯೆಗಳಿಂದ ಗಮನವನ್ನು ಬೇರೆಡೆಗೆ ತಿರುಗಿಸಲು ಮಾತ್ರ ನೆರವಾಗುವ ಹಿಂದೂ ಬಹುಸಂಖ್ಯಾತವಾದವಷ್ಟೇ ಎಂಬುದನ್ನು ಬಯಲಿಗೆ ಳೆಯಬೇಕಾಗಿದೆ.


ಎರಡನೇ ಮೋದಿ ಆಳ್ವಿಕೆಯ ನೂರು ದಿನಗಳು ಇನ್ನೂ ಬರಲಿರುವುದರ ರುಚಿ ಹೇಗಿರುತ್ತದೆ ಎಂಬುದನ್ನು ಮುಂದಾಗಿ ತೋರಿಸಿವೆ.

ಆದ್ದರಿಂದ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಜಾತ್ಯತೀತತೆ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸುವ ಹಾಗೂ ಸಂವಿಧಾನಿಕ ಮೌಲ್ಯಗಳನ್ನು ಕಾಪಾಡಿಕೊಳ್ಳುವ ಗುರುತರವಾದ ಕೆಲಸವನ್ನು ಮಾಡಬೇಕಾಗಿದೆ.

ಜನಗಳನ್ನು ಅವರ ಜೀವನಾಧಾರಗಳ, ಉದ್ಯೋಗಗಳ ಮತ್ತು ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆಗೆ ಅಣಿನೆರೆಸಬೇಕಾಗಿದೆ..

ಮೋದಿ ಸರಕಾರದ "ರಾಷ್ಟ್ರವಾದ"ದ ನಿಜಬಣ್ಣವನ್ನು, ಬಯಲಿಗೆಳೆಯಬೇಕಾಗಿದೆ.





ವ್ಯಂಗ್ಯಚಿತ್ರ ಕೃಪೆ:
ಪಿ.ಮಹಮ್ಮದ್

ಆಗಸ್ಟ್ 5, 2019ರಂದು ಮೋದಿ ಸರಕಾರ ಸಂವಿಧಾನ, ಪ್ರಜಾಪ್ರಭುತ್ವ, ಒಕ್ಕೂಟ ತತ್ವ ಮತ್ತು ಜಾತ್ಯತೀತತೆಯ ನೀತಿಗಳ ವಿರುದ್ಧ ಒಂದು ಮಿಂಚಿನ ಪ್ರಹಾರ ನಡೆಸಿ ಸಂವಿಧಾನದ 370ನೇ ಮತ್ತು 35ಎ ವಿಧಿಗಳನ್ನು ರದ್ದು ಪಡಿಸಿದ್ದರ ಸುತ್ತ ಹಲವು ಪ್ರಶ್ನೆಗಳು ಎದ್ದಿವೆ. ಸಿಪಿಐ(ಎಂ) ಈ ಕುರಿತು ಪ್ರಕಟಿಸಿರುವ ಪುಸ್ತಿಕೆ "ಸಂವಿಧಾನಕ್ಕೆ ಮೋಸ, ಕಾಶ್ಮೀರಕ್ಕೆ ವಿಶ್ವಾಸದ್ರೋಹ" ಇಂತಹ ಎಂಟು ಪ್ರಮುಖ ಪ್ರಶ್ನೆಗಳಿಗೆ ಉತ್ತರ ನೀಡಿದೆ. ಇವುಗಳಲ್ಲಿ ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕೊಡಬೇಕಾಗಿ ಪ್ರಸಂಗ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಆಗ ಕಾಶ್ಮೀರದ ಮಹಾರಾಜನಿಗೆ ಭಾರತದಿಂದ ಸ್ವತಂತ್ರವಾಗಿರಲು ಬೆಂಬಲ ಕೊಟ್ಟ ಶಕ್ತಿಗಳೇ ಈಗ ದೇಶಭಕ್ತಿಯ ಪೋಸು ಕೊಡುವ ಗೋಸುಂಬೆತನದ ಬಗ್ಗೆ ಹಿಂದಿನ ಸಂಚಿಕೆಗಳಲ್ಲಿ ಓದಿದ್ದೀರಿ. ಈ ಸಂಚಿಕೆಯಲ್ಲಿ – ಸಂವಿಧಾನದ 370ನೇ ಮತ್ತು 35ಎ ವಿಧಿಗಳಲ್ಲಿ ಏನಿದೆ, ನಮ್ಮ ಸಂವಿಧಾನದಲ್ಲಿ ಇಂತಹ ವಿಶೇಷ ಅಂಶಗಳು, ಕೇಸರಿ ಪಡೆಗಳು ಪ್ರಚಾರ ಮಾಡುತ್ತಿರುವಂತೆ ಜಮ್ಮು ಮತ್ತು ಕಾಶ್ಮೀರಕ್ಕೆ ಮಾತ್ರವೇ ಇವೆಯೇ?



ಪ್ರಕಟಣೆ: ಸಿಪಿಐ(ಎಂ) ಕರ್ನಾಟಕ ರಾಜ್ಯಸಮಿತಿ
ಬೆಲೆ ರೂ.10/-

ವಿಧಿ 370 ಮತ್ತು 35ಎ ರಲ್ಲಿ ಏನಿದೆ, ಅದು ಬಂದದ್ದು ಯಾವಾಗ?

ಅಕ್ಟೋಬರ್ 30, 1947 ರಂದು ಮಹಾರಾಜ ತುರ್ತು ಆಡಳಿತದ ಮುಖ್ಯಸ್ಥರಾಗಿ ಶೇಖ್ ಅಬ್ದುಲ್ಲರನ್ನು ನೇಮಕ ಮಾಡಿದರು. ನಂತರ ಮಾರ್ಚ್ 5, 1948ರಂದು ಇದರ ಸ್ಥಾನದಲ್ಲಿ ಒಂದು ಮಧ್ಯಂತರ ಸರಕಾರ ಬಂತು. ಶೇಖ್ ಅಬ್ದುಲ್ಲ ಅದರಲ್ಲಿ ಪ್ರಧಾನ ಮಂತ್ರಿಯಾಗಿದ್ದರು. ರಾಜ್ಯಕ್ಕೆ ಒಂದು ಸಂವಿಧಾನವನ್ನು ರೂಪಿಸಲು ಒಂದು ರಾಷ್ಟ್ರೀಯ ಸಭೆಯನ್ನು ಕರೆಯಬೇಕೆಂದು ಅದಕ್ಕೆ ಹೇಳಲಾಯಿತು. ಆದರೆ ಮಹಾರಾಜ ಹೆಸರಿಗೆ ಮುಖ್ಯಸ್ಥರಾಗಿ ಉಳಿದರು.

ಭಾರತ ಸರಕಾರ ಕಾಶ್ಮೀರದ ಮುಖಂಡತ್ವಕ್ಕೆ ವಿಶೇಷ ಸ್ಥಾನಮಾನ ನೀಡುವುದಾಗಿ ಪ್ರತಿಜ್ಞೆ ಮಾಡಿತ್ತು. ಆ ಕುರಿತಂತೆ ಮಾತುಕತೆಯನ್ನು ಆರಂಭಿಸಿತು.

ವಲ್ಲಭಭಾಯಿ ಪಟೇಲ್ ಕಾಶ್ಮೀರಕ್ಕೆ ಯಾವುದೇ ವಿಶೇಷ ಪರಿಗಣನೆಗೆ ವಿರುದ್ಧವಾಗಿದ್ದರು ಎಂದು ಆರೆಸ್ಸೆಸ್-ಬಿಜೆಪಿ ಅಪಪ್ರಚಾರ ನಡೆಸುತ್ತಿವೆ. ನಿಜಸಂಗತಿ ತದ್ವಿರುದ್ಧವಾಗಿದೆ. ಮೇ 15 ಮತ್ತು 16ರಂದು ಅವರ ನಿವಾಸದಲ್ಲಿ ಒಂದು ಸಭೆಯನ್ನು ಕರೆಯಲಾಯಿತು. ಅದರಲ್ಲಿ ನೆಹರು ಮತ್ತು ಅಬ್ದುಲ್ಲ ಹಾಜರಿದ್ದರು. "ಬೇರೆ ಯಾವ ವಿಷಯಗಳನ್ನು ರಾಜ್ಯ ಒಪ್ಪಬಹುದು ಎಂಬುದನ್ನು ರಾಜ್ಯದ ಸಂವಿಧಾನ ಸಭೆಯು ಅದನ್ನು ಕರೆದಾಗ ನಿರ್ಧರಿಸುತ್ತದೆ" ಎಂದು ಈ ಸಭೆಯಲ್ಲಿ ಎಲ್ಲರೂ ಒಪ್ಪಿರುವುದಾಗಿ ನೆಹರು ಅಬ್ದುಲ್ಲರಿಗೆ ಬರೆದ ಪತ್ರದಲ್ಲಿ ದಾಖಲಾಗಿದೆ. ಶ್ಯಾಮಪ್ರಸಾದ್ ಮುಖರ್ಜಿ ಆಗ ನೆಹರು ಸಂಪುಟದ ಸದಸ್ಯರಾಗಿದ್ದರು, ಮತ್ತು ಕಾಶ್ಮೀರ ಕುರಿತ ನಿರ್ಧಾರಗಳಲ್ಲಿ ಭಾಗಿಯಾಗಿದ್ದರು. ವಿಧಿ 370ನ್ನು(ಕರಡು ಸಂವಿಧಾನದಲ್ಲಿ 306ಎ) ಅಂಗೀಕರಿಸಿದ ಅಧಿವೇಶನದ ಅಧ್ಯಕ್ಷತೆಯನ್ನು ಡಾ.ರಾಜೇಂದ್ರ ಪ್ರಸಾದ್ ವಹಿಸಿದ್ದರು. ಹೀಗೆ ಆಗಿನ ಸಮಸ್ತ ಮುಖಂಡತ್ವಕ್ಕೆ ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ಕುರಿತಂತೆ ಒಪ್ಪಿಗೆಯಿತ್ತು.

ಈ ಚರ್ಚೆಗಳು ವಿಧಿ 370ರಲ್ಲಿ ಹರಳುಗಟ್ಟಿಕೊಂಡವು. ಇದನ್ನು ಸಂವಿಧಾನ ಸಭೆ ಅಕ್ಟೋಬರ್ 1949ರಲ್ಲಿ ಅಂಗೀಕರಿಸಿತು. **ಅದು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸ್ವಾಯತ್ತತೆಯ ಚೌಕಟ್ಟನ್ನು ಒದಗಿಸಿತು. ಅದು ಸ್ವಂತ ಸಂವಿಧಾನವನ್ನು ಮತ್ತು ಬಾವುಟವನ್ನು ಹೊಂದಲು ಮತ್ತು ಸೇರ್ಪಡೆಯ ದಸ್ತಾವೇಜಿನಲ್ಲಿ ನಮೂದಿಸಿದ ಮೂರು ವಿಷಯಗಳನ್ನು(ವಿದೇಶ ವ್ಯವಹಾರಗಳು, ರಕ್ಷಣೆ ಮತ್ತು ಸಂಪರ್ಕ) ಬಿಟ್ಟು ಉಳಿದ ಎಲ್ಲ ವಿಷಯಗಳ ಮೇಲೆ ತನ್ನ ಅಧಿಕಾರವ್ಯಾಪ್ತಿಯನ್ನು ಹೊಂದಲು ಅವಕಾಶ ನೀಡಿತು.** ಸೇರ್ಪಡೆಯ ದಸ್ತಾವೇಜಿನಲ್ಲಿ ನಮೂದಿಸಿದ ವಿಷಯಗಳನ್ನು ಕುರಿತ ಕೇಂದ್ರೀಯ ಕಾನೂನುಗಳಿಗೆ ರಾಜ್ಯ ಸರಕಾರದೊಂದಿಗೆ "ಸಮಾಲೋಚನೆಗಳು" ಸಾಕು, ಆದರೆ ಉಳಿದ ಎಲ್ಲ ಕಾನೂನುಗಳನ್ನು ಕಾಶ್ಮೀರದಲ್ಲಿ ಅನ್ವಯಿಸಲು ರಾಜ್ಯ ಸರಕಾರದ ನಿರ್ದಿಷ್ಟ ಸಹಮತ ಮತ್ತು ಒಪ್ಪಿಗೆ ಅಗತ್ಯವಾಗಿತ್ತು. **ಸಂವಿಧಾನ ಸಭೆಯಲ್ಲಿ ಗೋಪಾಲಸ್ವಾಮಿ ಅಯ್ಯಂಗಾರ್ ಈ ವಿಧಿ ಅಂಗೀಕಾರಗೊಂಡಾಗ ಅಕ್ಟೋಬರ್ 17, 1949ರಂದು ಮಾಡಿದ ಭಾಷಣದಲ್ಲಿ ವಿವರಣೆ ನೀಡುತ್ತ "ಇದು(ವಿಶೇಷ ಸ್ಥಾನಮಾನ) ಕಾಶ್ಮೀರದ ಜನತೆಗೆ ಮತ್ತು ಸರಕಾರಕ್ಕೆ ನಮ್ಮ ಬದ್ಧತೆಗಳಲ್ಲಿ ಒಂದು" ಎಂದರು. ಈಗ ಬಿಜೆಪಿಯ ಅಡಿಯಲ್ಲಿ ಈ ಬದ್ಧತೆ ಚಿಂದಿಯಾಗಿ ಬಿಟ್ಟಿದೆ.**

ಸಂವಿಧಾನದ 370ನೇ ವಿಧಿಯಲ್ಲಿ ಭಾರತೀಯ ಒಕ್ಕೂಟದ ಒಳಗೆ 'ಕಶ್ಮೀರಿಯತ್" ಎಂದು ಹೆಸರಾದ ತಮ್ಮ ಅಸ್ಮಿತೆ ಮತ್ತು ಜೀವನ ಶೈಲಿಯನ್ನು ಕಾಯ್ದುಕೊಳ್ಳುವ ಕಾಶ್ಮೀರಿ ಜನತೆಯ ಆಕಾಂಕ್ಷೆಗಳು ಸಾಕಾರಗೊಂಡಿವೆ. ಇದು ಸಂವಿಧಾನದಲ್ಲಿ 370ನೇ ವಿಧಿಯನ್ನು ಒಳಗೊಂಡುದರ ಉಗಮ. ಇದನ್ನು ಅನುಸರಿಸಿ 1952ರಲ್ಲಿ ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರದ ಪ್ರತಿನಿಧಿಗಳು ದಿಲ್ಲಿ ಒಪ್ಪಂದಕ್ಕೆ ಸಹಿ ಹಾಕಿದರು.

35ಎ ವಿಧಿ ತನ್ನ ಅಧಿಕಾರವನ್ನು 370ನೇ ವಿಧಿಯಿಂದ ಪಡೆಯುತ್ತದೆ. ಇದನ್ನು 1954 ರಲ್ಲಿ ಒಂದು ರಾಷ್ಟ್ರಪತಿ ಆದೇಶದ ಮೂಲಕ ಪಾಸು ಮಾಡಲಾಯಿತು. ಇದು ಜಮ್ಮು ಮತ್ತು ಕಾಶ್ಮೀರ ಶಾಸಕಾಂಗಕ್ಕೆ ರಾಜ್ಯದ ಖಾಯಂ ನಿವಾಸಿಗಳು ಮತ್ತು ಅವರ ಹಕ್ಕುಗಳು ಹಾಗೂ ವಿಶೇಷಾಧಿಕಾರಗಳನ್ನು ನಿರೂಪಿಸುವ ಅಧಿಕಾರವನ್ನು ಕೊಡುತ್ತದೆ.

ಈ ಮೊದಲು ಮಹಾರಾಜರ ಆಳ್ವಿಕೆಯ ಸಮಯದಲ್ಲಿ, ಕಾಶ್ಮೀರಿ ಪಂಡಿತ್ ಸಮುದಾಯದವರ ನೇತೃತ್ವದಲ್ಲಿ ಸ್ಥಳೀಯ ಜನಗಳು ಹೊರಗಿನವರಿಂದ, ಈ ಸುಂದರ ರಾಜ್ಯದಲ್ಲಿ ಭೂಮಿ ಖರೀದಿಸ ಬಯಸುವ ಬ್ರಿಟಿಶ್ ಮತ್ತು ಶ್ರೀಮಂತ ಭಾರತೀಯ ಬೂರ್ಜ್ವಾಗಳಿಂದ ಒಂದು ರೀತಿಯ ರಕ್ಷಣೆಯನ್ನು ಬಯಸಿದರು. ಇದಕ್ಕಾಗಿ ಅಂಗೀಕರಿಸಿದ 1927ರ "ವಂಶಾನುಗತ ರಾಜ್ಯ ವಿಷಯ ಆದೇಶ" ರಾಜ್ಯದ ಪ್ರಜೆಗಳಿಗೆ, ರಾಜ್ಯೇತರ ಪ್ರಜೆಗಳಿಗೆ ಇರದ ಸರಕಾರೀ ಕಚೇರಿಯ ಮತ್ತು ಭೂಬಳಕೆ ಹಾಗೂ ಒಡೆತನದ ಹಕ್ಕುಗಳನ್ನು ನೀಡಿತು. ಈ ಕಾಯದೆಯನ್ನು 1954ರಲ್ಲಿ ರದ್ದು ಮಾಡಿ ವಿಧಿ 35ಎನ್ನು ಸೇರಿಸಲಾಯಿತು. ಇದು ಜಮ್ಮು ಮತ್ತು ಕಾಶ್ಮೀರ ಶಾಸಕಾಂಗಕ್ಕೆ ಖಾಯಂ ನಿವಾಸಿಗಳ ಪರಿಮಿತಿಗಳನ್ನು ನಿರ್ಧರಿಸುವ ಹಕ್ಕನ್ನು ಕೊಟ್ಟಿತು.

ಈ ಬಗ್ಗೆ ಸುಪ್ರಿಂ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿರುವಾಗಲೇ ಈ ವಿಧಿಯನ್ನು ತೆಗೆದಿರುವುದು ಬಿಜೆಪಿ ಈ ಮುಸ್ಲಿಂ ಪ್ರಾಬಲ್ಯದ ರಾಜ್ಯದ ಜನಸಂಖ್ಯಾ ಸ್ವರೂಪವನ್ನು ಬದಲಿಸುವ ಆತುರದಲ್ಲಿ ಇದೆ ಎಂಬುದನ್ನು ಬಿಂಬಿಸುತ್ತದೆ. ಈಗ ಪ್ರತಿಯೊಬ್ಬರೂ ಕಾಶ್ಮೀರದಲ್ಲಿ ಭೂಮಿಯ ತುಣುಕನ್ನು ಹೊಂದಬಹುದು ಎಂಬ ಬಿಜೆಪಿಯ ಪ್ರಚಾರ ಈ ಗುರಿಸಾಧನೆ ಗಾಗಿಯೇ ಇದೆ. ಇದು ಪ್ಯಾಲೆಸ್ತೀನ್‌ನ ಪಶ್ಚಿಮ ತಟದಲ್ಲಿ ಜನಸಂಖ್ಯಾ ಸ್ವರೂಪವನ್ನು ಬದಲಿಸಲು ಇಸ್ರೇಲ್ ಸರಕಾರ ಯೆಹೂದಿ ನೆಲೆಸಿಗರನ್ನು ಪ್ರೋತ್ಸಾಹಿಸುವ ಝಿಯೋನಿಸ್ಟ್ ಧೋರಣೆಯ ರೀತಿಯದ್ದೇ ಆಗಿದೆ.

ನಾವು ಮುಂದೆ ನೋಡುವಂತೆ, 370ನೇ ವಿಧಿಯ ಹೆಚ್ಚಿನ ಅಂಶಗಳನ್ನು ಸಮಯ ಕಳೆದಂತೆ ದುರ್ಬಲ ಗೊಳಿಸಲಾಗಿದೆ. ಕಾಂಗ್ರೆಸ್ ನೇತೃತ್ವದ ಸರಕಾರಗಳು ಕೂಡ ಸೇರಿದಂತೆ ಕೇಂದ್ರದಲ್ಲಿನ ಸರಕಾರಗಳು ಜಮ್ಮು ಮತ್ತು ಕಾಶ್ಮೀರದ ಸ್ವಾಯತ್ತತೆಯನ್ನು ಗಮನಾರ್ಹವಾಗಿ ಕ್ಷಯಿಸಿ ಬಿಟ್ಟಿವೆ.

ಸಂವಿಧಾನ ಸಭೆಯ ಸದಸ್ಯರಾಗಿ ಶೇಖ್ ಅಬ್ದುಲ್ಲ ಪ್ರತಿಜ್ಞೆ ಸ್ವೀಕಾರ, 1948



ಭಾರತ ಸಂಘ ಮತ್ತು ಜಮ್ಮು ಮತ್ತು ಕಾಶ್ಮೀರ ರಾಜ್ಯದ ಬಾವುಟಗಳು––ಸ್ವಾಯತ್ತತೆಯ ಪ್ರತೀಕ



ವಿಶೇಷ ಅಂಶಗಳು ಜಮ್ಮು ಮತ್ತು ಕಾಶ್ಮೀರಕ್ಕೆ ಮಾತ್ರವೇ ಇವೆಯೇ?

ಇಂತಹ ವಿಶೇಷ ಅಂಶಗಳನ್ನು ಪಡೆದಿರುವುದು ಜಮ್ಮು ಮತ್ತು ಕಾಶ್ಮೀರ ರಾಜ್ಯ ಮಾತ್ರ ಎಂದು ಬಿಜೆಪಿ ಪ್ರಚಾರ ಚಿತ್ರಿಸುತ್ತದೆ. ನಿಜಸಂಗತಿ ತದ್ವಿರುದ್ಧವಾಗಿದೆ. ಇತರ ರಾಜ್ಯಗಳಿಗೂ, ಖಾಯಂ ನಿವಾಸಿಗಳನ್ನು ಬಿಟ್ಟು ಇತರರು ಭೂಮಿ ಖರೀದಿಸಲು ಹಾಗೂ ಉದ್ಯೋಗ ಪಡೆಯಲು ನಿಷೇಧಿಸುವ ವಿಶೇಷ ಅವಕಾಶಗಳನ್ನು, 371ನೇ ವಿಧಿ, ಮತ್ತು 371(ಎ) ಯಿಂದ 371(ಐ) ವರೆಗಿನ ಒಟ್ಟು 9 ವಿಧಿಗಳು ಕೊಟ್ಟಿವೆ. ಈ ವಿಧಿಯ ಅಡಿಯಲ್ಲಿ ಬರುವ ರಾಜ್ಯಗಳೆಂದರೆ: ಮಹಾರಾಷ್ಟ್ರ, ಗುಜರಾತ್, ಅರುಣಾಚಲ ಪ್ರದೇಶ, ಅಸ್ಸಾಂ, ಹಿಮಾಚಲ ಪ್ರದೇಶ, ಮಣಿಪುರ, ಮೇಘಾಲಯ, ಮಿಝೋರಾಂ, ನಾಗಾಲ್ಯಾಂಡ್, ಸಿಕ್ಕಿಂ, ತ್ರಿಪುರಾ, ಉತ್ತರಾಖಂಡ, ಗೋವ ಮತ್ತು ಕರ್ನಾಟಕ.

ಇವಲ್ಲದೆ ಸಂವಿಧಾನದ ಪರಿಶಿಷ್ಟ(ಶೆಡ್ಯೂಲ್) 5 ಮತ್ತು 6 ಆದಿವಾಸಿ/ಬುಡಕಟ್ಟು ಒಡೆತನದ/ವಾಸಿಸುವ ಭೂಮಿಯ ರಕ್ಷಣೆಗಾಗಿಯೇ ಇವೆ. ಆ ಭೂಮಿಯನ್ನು ಯಾವುದೇ ಬುಡಕಟ್ಟೇತರರು ಖರೀದಿಸಲು ಬಿಡುವುದಿಲ್ಲ.

ಬಿಜೆಪಿಯ ಬೂಟಾಟಿಕೆ ಎಂತಹ ಮಟ್ಟದ್ದು ಎಂಬುದನ್ನು ಬಿಜೆಪಿ ಮುಖಂಡರ ನಿಲುವುಗಳಲ್ಲೇ ಕಾಣಬಹುದು. 35ಎ ರದ್ಧತಿಯ ನಂತರ ಈಗ ಭಾರತದ ಇತರ ರಾಜ್ಯಗಳಲ್ಲಿ ಹೇಗೆ ಜನರು ಭೂಮಿ ಖರೀದಿಸಲು ಕಾಶ್ಮೀರಕ್ಕೆ ಹೋಗಬಹುದು ಎಂಬ ದುಷ್ಟ ಪ್ರಚಾರವನ್ನು ಬಿಜೆಪಿ ಮುಖಂಡರು ಹಲವರು ಮಾಡುತ್ತಿದ್ದರೆ, ಜಮ್ಮು ನಲ್ಲಿರುವ ಬಿಜೆಪಿ ಮುಖಂಡರು ಹೊರಗಿನವರಿಂದ ಭೂಮಿಯನ್ನು ರಕ್ಷಿಸಲು ವಿಶೇಷ ರಕ್ಷಣೆಗಳನ್ನು ಕೊಡಬೇಕು ಎಂದು ಆಗ್ರಹಿಸುತ್ತಿದ್ದಾರೆ. ಮೊದಲು 35ಎ ನ್ನು ರದ್ದು ಮಾಡುತ್ತಾರೆ, ನಂತರ 35ಎ ಖಾತ್ರಿಪಡಿಸಿದ್ದ ವಿಶೇಷ ರಕ್ಷಣೆಗಳು ಬೇಕು ಎಂದು ಆಗ್ರಹಿಸುತ್ತಾರೆ!

371 (1949)-ಮಹಾರಾಷ್ಟ್ರ ಮತ್ತು ಗುಜರಾತ
371ಎ(1962) -ನಾಗಾಲ್ಯಾಂಡ್
371ಬಿ(1969)-ಅಸ್ಸಾಂ
371ಸಿ(1971)- ಮಣಿಪುರ
371ಡಿ,ಇ (1973)-ಆಂಧ್ರಪ್ರದೇಶ)
371ಎಫ್(1975)-ಸಿಕ್ಕಿಂ
371 ಜಿ(1986)-ಮಿಝೋರಾಂ
371 ಹೆಚ್(1986) ಅರುಣಾಚಲ ಪ್ರದೇಶ
371 ಜೆ(2012)-ಕರ್ನಾಟಕ
(ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಪ್ರತ್ಯೇಕ ಅಭಿವೃದ್ಧಿ ಮಂಡಳಿ)

ಭಾರತೀಯ ಸಂವಿಧಾನದಲ್ಲಿ ಈ ವಿಶೇಷ ಅವಕಾಶಗಳನ್ನು, ಒಂದು ನಿರ್ದಿಷ್ಟ ಪ್ರದೇಶದ ಅಥವ ಒಂದು ರಾಜ್ಯದ ನಿರ್ದಿಷ್ಟ ಅಗತ್ಯಗಳನ್ನು ಈಡೇರಿಸುವದಕ್ಕಾಗಿಯೇ ಒದಗಿಸಲಾಗಿದೆ. ಇವು ಅದರ ಒಕ್ಕೂಟ ಸ್ವರೂಪದ ಭಾಗವೇ ಆಗಿದೆ. ಭಾರತ ಭಾಷೆ, ಸಂಸ್ಕೃತಿಗಳು, ಜಾತಿಗಳು, ಧಾರ್ಮಿಕ ನಂಬಿಕೆಗಳಲ್ಲಿ ವ್ಯಾಪಕ ವೈವಿಧ್ಯತೆಗಳು ಇರುವ ಒಂದು ದೇಶ. ಅಲ್ಲದೆ ಅಸಮಾನ ಬೆಳವಣಿಗೆಗಳೂ ಇರುವ ದೇಶ. ಭಾರತದ ಸಂವಿಧಾನ ಈ ವೈವಿಧ್ಯತೆಗಳನ್ನು ಗುರುತಿಸಿ ಅವನ್ನು ಸರಿದೂಗಿಸಲು ವಿಧಾಯಕ ಕ್ರಿಯೆಗಳಿಗೆ ಅನುವು ಮಾಡಿಕೊಡಲು ವಿವಿಧ ಪರಿಚ್ಛೇದಗಳನ್ನು ಒದಗಿಸಿದೆ.

ಜಮ್ಮು ಮತ್ತು ಕಾಶ್ಮೀರದ ಅಗತ್ಯಗಳು 1947ರ ಅವಧಿಯಲ್ಲಿ ಒಂದು ಮುಸ್ಲಿಂ ಬಹುಮತದ ರಾಜ್ಯವು ಒಂದು ಮುಸ್ಲಿಂ ಬಹುಸಂಖ್ಯಾಕ ಪ್ರಭುತ್ವವಾಗಲು ಹೊರಟಿದ್ದ ಪಾಕಿಸ್ತಾನವನ್ನು ಸೇರುವ ಬದಲು ಒಂದು ಜಾತ್ಯತೀತ ಭಾರತಕ್ಕೆ ಸೇರ್ಪಡೆಯಾಗುವುದು ಸೂಕ್ತ ಎಂದು ಸೇರ್ಪಡೆಗೊಂಡ ರೀತಿಯಿಂದ ಎದ್ದು ಬಂದವುಗಳು. 370ನೇ ವಿಧಿ ಭಾರತೀಯ ಪ್ರಭುತ್ವ ಅವರ ಅಸ್ಮಿತೆಯನ್ನು ಗೌರವಿಸುತ್ತದೆ ಎಂದು ಜಮ್ಮು ಮತ್ತು ಕಾಶ್ಮೀರದ ಜನತೆಗೆ ನೀಡಿದ ಒಂದು ಗಂಭೀರ ಆಶ್ವಾಸನೆಯಾಗಿದೆ. ಇದನ್ನೇ ಬೇರೆ ಹಲವು ರಾಜ್ಯಗಳಿಗೂ ಮತ್ತು ಪ್ರದೇಶಗಳಿಗೂ 371ನೇ ವಿಧಿಯ ಅಡಿಯಲ್ಲಿ ಕೊಡಲಾಗಿದೆ. **ಮೋದಿ ಸರಕಾರ ಈಗ 370ನೇ ವಿಧಿಯನ್ನು ಹೆಚ್ಚು ಕಡಿಮೆ ರದ್ದೇ ಮಾಡಿಬಿಟ್ಟು ಈ ಆಶ್ವಾಸನೆಗೆ ಘಾತ ಬಗೆದಿದೆ, ದೇಶದ ಒಕ್ಕೂಟ ತತ್ವಕ್ಕೆ ಭಾರೀ ಹೊಡೆತ ಹಾಕಿದೆ. ನಾಳೆ ಒಂದಿಲ್ಲೊಂದು ನೆಪವೊಡ್ಡಿ ಇತರ ರಾಜ್ಯಗಳಿಗೆ ಇರುವ ವಿಶೇಷ ಅಂಶಗಳನ್ನೂ ರದ್ದು ಮಾಡಬಹುದು.**



ಭೌತಿಕ ಸರಕು/ಸೇವೆಗಳ ಉತ್ಪಾದನೆ, ವಿತರಣೆ ಮತ್ತು ಮಾರಾಟದ ವ್ಯವಸ್ಥೆಗೆ 'ಬೇಲಿ ಹಾಕಿ ಆವರಣ' ರಚಿಸಿ ಏಕಸ್ವಾಮ್ಯ ಕಲ್ಪಿಸುವ ಅಮೆಜಾನಿನ ಈ ಹೊಸ 'ಆವರಣ ಮಾದರಿ'ಯನ್ನು ಇತರ ಕೆಲವು ಹೊಸ ಡಿಜಿಟಲ್ ಕಂಪನಿಗಳು ಅನುಸರಿಸುತ್ತಿದ್ದು, ಈ ಮಾದರಿ ಏಕಸ್ವಾಮ್ಯ ಬಂಡವಾಳಶಾಹಿಯ ಬೆಳವಣಿಗೆಯ ಹೊಸ ಟ್ರೆಂಡನ್ನು ಪ್ರತಿನಿಧಿಸುವಂತೆ ಕಾಣ ಬರುತ್ತದೆ. ಉಬೇರ್ (ನಮ್ಮಲ್ಲಿ ಓಲಾ ಸಹ) ಬಾಡಿಗೆ ಸಾಗಾಣಿಕೆ (ಟ್ಯಾಕ್ಸಿ) ಕ್ಷೇತ್ರದಲ್ಲಿ, ಏರ್.ಬಿ.ಎನ್.ಬಿ. (ನಮ್ಮಲ್ಲಿ ಓಯೋ) ತಾತ್ಕಾಲಿಕ ಬಾಡಿಗೆ ವಸತಿ (ಹೊಟೇಲ್/ಗೆಸ್ಟ್ ಹೌಸ್/ಸ್ಟೇ ಹೋಂ ಇತ್ಯಾದಿ) ಕ್ಷೇತ್ರದಲ್ಲಿ ಈ ಟ್ರೆಂಡ್ ಕಂಡುಬರುತ್ತಿದೆ. ಉಬೇರ್ ಚಾಲಕ-ರಹಿತ ಕಾರು ತಂತ್ರಜ್ಞಾನ ಬಳಸಿ ಟ್ಯಾಕ್ಸಿ ಕ್ಷೇತ್ರದಲ್ಲಿ, ಮನುಷ್ಯರೇ ಇಲ್ಲದಂತೆ ಮಾಡ ಹೊರಟಿದೆ. ಹಾಗೆ ನೋಡಿದರೆ, ಗೂಗಲ್-ಫೇಸ್ ಬುಕ್ ಗಳದ್ದು ಸಹ 'ಬೇಲಿ ಹಾಕಿ ಆವರಣ' ರಚಿಸುವ ಮಾದರಿಯೇ. ಬಳಕೆದಾರರು, ಅವರ ಸಂವಹನ-ಸಂಪರ್ಕ, ಖಾಸಗಿ ಮಾಹಿತಿ, ಜಾಹೀರಾತುದಾರರು – ಇವರೆಲ್ಲರನ್ನೂ ಒಂದು 'ಆವರಣ'ದೊಳಗೆ ಬಂಧಿಸಿ ಇವು ತಮ್ಮ ಏಕಸ್ವಾಮ್ಯ ಸಾಧಿಸಿವೆ.
ಈ ಹಿನ್ನೆಲೆಯಲ್ಲಿ ದೈತ್ಯ ಡಿಜಿಟಲ್ ಕಂಪನಿಗಳ 'ಆವರಣ ಮಾದರಿ'ಯನ್ನು ಕೂಲಂಕಷವಾಗಿ ವಿಶ್ಲೇಷಿಸಬೇಕಾಗಿದೆ. ಈ ದೈತ್ಯ ಡಿಜಿಟಲ್ ಕಂಪನಿಗಳಿಗೆ ಮತ್ತು 'ಆವರಣ ಮಾದರಿ'ಗೆ ಪ್ರತಿರೋಧ ಹೂಡುವುದು ಹೇಗೆ ಎಂದು ಯೋಚಿಸಬೇಕಾಗಿದೆ. ನಮ್ಮ ಸುತ್ತಲಿನ 'ಒಯೋ', 'ಓಲಾ'ಗಳ ಪರಿಣಾಮಗಳನ್ನು ಅಧ್ಯಯನ ಮಾಡಬೇಕಾಗಿದೆ.

ಗೂಗಲ್, ಅಮೆಜಾನ್ ಗಳ ದೈತ್ಯಬಲದ ಹಿಂದೆ ಏನಿದೆ?

ವಸಂತರಾಜ ಎನ್.ಕೆ.

'ಗೂಗಲ್', 'ಅಮೆಜಾನ್' ಗಳು ಇಂದು ಮನೆಮಾತಾಗಿವೆ. ಇವು ಡಿಜಿಟಲ್ ಲೋಕದಿಂದ ದೂರ ಇರುವವರಿಗೂ ಗೊತ್ತಿರುವ ಕಂಪನಿಗಳಾಗಿವೆ. ಗೂಗಲ್ 'ಹುಡುಕು'ವುದಕ್ಕೆ ಬದಲಿ ಪದವಾಗಿ ಬಿಟ್ಟಿದೆ. ಗೂಗಲ್ ಮ್ಯಾಪ್ ನ್ನು ಅಟೋ ಚಾಲಕರೂ ಬಳಸಲಾರಂಭಿಸಿದ್ದಾರೆ. ಗೂಗಲ್ ಮ್ಯಾಪ್ ಮೂಲಕ ಸ್ಥಳ ತಿಳಿಸುವುದು, ಹುಡುಕುವುದು ಅಷ್ಟೇ ಸಾಮಾನ್ಯವಾಗಿ ಬಿಟ್ಟಿದೆ. ಮನೆಮಂದಿಯೆಲ್ಲ ಮೊಬೈಲುಗಳನ್ನು, ಬಟ್ಟೆಗಳನ್ನು, ಒಳ-ಉಡುಪುಗಳನ್ನೂ ಸಹ 'ಅಮೆಜಾನ್' ಮೂಲಕ ತರಿಸುವುದು ಸಾಮಾನ್ಯವಾಗಿ ಬಿಟ್ಟಿದೆ. ಕೆಲವೇ ವರ್ಷಗಳಲ್ಲಿ 'ಗೂಗಲ್', 'ಅಮೆಜಾನ್' ಗಳು ಜಗತ್ತಿನಾದ್ಯಂತ ಮನೆಮಾತಾಗಿರುವುದು ಮಾತ್ರವಲ್ಲ, 2017ರಲ್ಲಿ ಜಗತ್ತಿನ 'ಟಾಪ್ ಟೆನ್' (ಅತ್ಯಂತ ಹೆಚ್ಚು ಮಾರುಕಟ್ಟೆ ಮೌಲ್ಯವಿರುವ ಹತ್ತು) ಕಂಪನಿಗಳ ಪಟ್ಟಿಗೆ ಸೇರಿವೆ. ಗೂಗಲ್ ಸುಮಾರು 600 ಶತಕೋಟಿ ಡಾಲರುಗಳ ಮಾರುಕಟ್ಟೆ ಮೌಲ್ಯ (= ಶೇರುಗಳ ಸಂಖ್ಯೆ * ಶೇರಿನ ಬೆಲೆ) ಹೊಂದಿದ್ದು, ಈ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಸುಮಾರು 400 ಶತಕೋಟಿ ಡಾಲರಿಗೂ ಹೆಚ್ಚು ಮಾರುಕಟ್ಟೆ ಮೌಲ್ಯ ಹೊಂದಿರುವ ಅಮೆಜಾನ್ ಈ ಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. 2006ರಲ್ಲಿ ಈ ಎರಡೂ ಕಂಪನಿಗಳೂ ಜಗತ್ತಿನ 'ಟಾಪ್ ಟೆನ್' ಪಟ್ಟಿಯಲ್ಲೇ ಇರಲಿಲ್ಲ. ಆಗ ಪಟ್ಟಿಯಲ್ಲಿದ್ದ ಹತ್ತನೇ ಕಂಪನಿಯ ಮಾರುಕಟ್ಟೆ ಮೌಲ್ಯ 200 ಶತಕೋಟಿ ಡಾಲರು ಆಗಿತ್ತು. ಅಂದರೆ ಕೇವಲ 10 ವರ್ಷಗಳಲ್ಲಿ ಇವು 2-3 ಪಟ್ಟು ಬೆಳೆದಿವೆ. 2006ರಲ್ಲಿ 'ಟಾಪ್ ಟೆನ್' ಪಟ್ಟಿಯಲ್ಲಿ 5 ತೈಲ ಕಂಪನಿಗಳು, 3 ಹಣಕಾಸು, ತಲಾ ಒಂದು ಕೈಗಾರಿಕಾ ಉತ್ಪನ್ನಗಳ ಮತ್ತು ಡಿಜಿಟಲ್ (ಅಥವಾ ಐಟಿ – ಮಾಹಿತಿ ತಂತ್ರಜ್ಞಾನ) ಕಂಪನಿಗಳು ಇದ್ದವು. ಆಗ ಇದ್ದ ಒಂದೇ ಡಿಜಿಟಲ್ ಕಂಪನಿ ಮೈಕ್ರೋಸಾಫ್ಟ್. 2017ರ 'ಟಾಪ್ ಟೆನ್' ಪಟ್ಟಿಯಲ್ಲಿ ಒಟ್ಟು 5 ಡಿಜಿಟಲ್ ಕಂಪನಿಗಳು ಇವೆ, ಮಾತ್ರವಲ್ಲ ಮೊದಲ ನಾಲ್ಕು ಸ್ಥಾನಗಳನ್ನು (ಅನುಕ್ರಮವಾಗಿ ಆಪಲ್, ಗೂಗಲ್, ಮೈಕ್ರೋಸಾಫ್ಟ್, ಅಮೆಜಾನ್) ಆಕ್ರಮಿಸಿಕೊಂಡಿವೆ. 6ನೇ ಸ್ಥಾನದಲ್ಲಿರುವ ಡಿಜಿಟಲ್ ಕಂಪನಿ 'ಫೇಸ್ ಬುಕ್'.

'ಟಾಪ್ ಟೆನ್'ನಲ್ಲಿ ಡಿಜಿಟಲ್ ಕಂಪನಿಗಳ ಅಧಿಪತ್ಯ

ಇಲ್ಲಿ ಎರಡು ವಿಷಯಗಳನ್ನು ಗಮನಿಸಬೇಕು. ಮೊದಲನೆಯದಾಗಿ, ಸಾಮಾನ್ಯವಾಗಿ ಈ ಪಟ್ಟಿಯಲ್ಲಿ ಬರುವ ಕಂಪನಿಗಳು ದೈತ್ಯ ಗಾತ್ರದವಾಗಿದ್ದು ಆಯಾ ಕ್ಷೇತ್ರದಲ್ಲಿ (ಅಥವಾ ಉಪಕ್ಷೇತ್ರಗಳಲ್ಲಿ) ಗಮನಾರ್ಹ ಮಟ್ಟದ ಏಕಸ್ವಾಮ್ಯ ಸಾಧಿಸಿ ದೈತ್ಯಬಲ ಹೊಂದಿರುವಂಥವು. ಎರಡನೆಯದಾಗಿ, ಕಂಪನಿಯ ಮಾರುಕಟ್ಟೆ ಮೌಲ್ಯ ಮತ್ತು ಒಟ್ಟು ವಹಿವಾಟು ಮೊತ್ತ ಒಂದೇಯಲ್ಲ. ಯಾವುದೇ ಕಂಪನಿಯ ಮಾರುಕಟ್ಟೆ ಮೌಲ್ಯವು ಒಟ್ಟು ವಹಿವಾಟು ಮೊತ್ತಕ್ಕಿಂತ (ಕೆಲವೊಮ್ಮೆ ಹಲವು ಪಟ್ಟು) ಹೆಚ್ಚೂ ಇರಬಹುದು ಕಡಿಮೆಯೂ ಇರಬಹುದು. ಮಾರುಕಟ್ಟೆ ಮೌಲ್ಯದ ಪ್ರಕಾರದ 'ಟಾಪ್ ಟೆನ್' ಕಂಪನಿಗಳು, ಒಟ್ಟು ವಹಿವಾಟು ಮೊತ್ತದ ಪ್ರಕಾರ 'ಟಾಪ್ ಟೆನ್' ಕಂಪನಿ ಆಗಿರಬೇಕಾಗಿಲ್ಲ. ಉದಾಹರಣೆಗೆ, ಅತಿ ಹೆಚ್ಚು ಒಟ್ಟು ವಹಿವಾಟು ಮೊತ್ತ ಇರುವ 'ವಾಲ್ ಮಾರ್ಟ್' ಮಾರುಕಟ್ಟೆ ಮೌಲ್ಯದ ಪ್ರಕಾರದ 'ಟಾಪ್ ಟೆನ್' ಪಟ್ಟಿಯಲ್ಲೇ ಇಲ್ಲ! 2017ರಲ್ಲಿ ಮಾರುಕಟ್ಟೆ ಮೌಲ್ಯದ ಪ್ರಕಾರದ 'ಟಾಪ್ ಟೆನ್' ಕಂಪನಿಗಳಲ್ಲಿ 4 ಮಾತ್ರ ಒಟ್ಟು ವಹಿವಾಟು ಮೊತ್ತದ ಪ್ರಕಾರ 'ಟಾಪ್ ಟೆನ್' ಪಟ್ಟಿಯಲ್ಲಿ ಬರುತ್ತವೆ. 5 ಡಿಜಿಟಲ್ ಕಂಪನಿಗಳಲ್ಲಿ ಒಂದು ಮಾತ್ರ (ಆಪಲ್) ಬರುತ್ತದೆ. ಆದರೆ ಮಾರುಕಟ್ಟೆ ಮೌಲ್ಯ ಭವಿಷ್ಯದ ಹೆಚ್ಚಿನ ಒಟ್ಟು ವಹಿವಾಟಿನ ಸಾಧ್ಯತೆ ಮತ್ತು ಅದರ ಒಟ್ಟು ಶಕ್ತಿ-ಪ್ರಭಾವಗಳನ್ನಂತೂ ಸೂಚಿಸುತ್ತದೆ. ಇದೇ ಸಮಯದಲ್ಲಿ 2006ರಲ್ಲಿ 10ರಲ್ಲಿ 6 ಕಂಪನಿಗಳು ಭೌತವಸ್ತುಗಳ ಉತ್ಪಾದನೆಯಲ್ಲಿ ತೊಡಗಿದ್ದರೆ, 2017ರಲ್ಲಿ ಕೇವಲ 2 (ಆಪಲ್ ಮತ್ತು ಜಾನ್ಸನ್ ಅಂಡ್ ಜಾನ್ಸನ್) ಕಂಪನಿಗಳು ತೊಡಗಿದ್ದವು. 1990ರ ದಶಕದಲ್ಲಿ ನವ-ಉದಾರವಾದದ ಜಾಗತಿಕ ಬೆಳವಣಿಗೆಯೊಂದಿಗೆ ದೈತ್ಯ ಏಕಸ್ವಾಮ್ಯ ಹಣಕಾಸು ಕಂಪನಿಗಳು ಅಗಾಧವಾಗಿ ಬೆಳೆಯುವವರೆಗೆ ಎಲ್ಲಾ 'ಟಾಪ್ ಟೆನ್' ಕಂಪನಿಗಳು ಭೌತವಸ್ತುಗಳ ಉತ್ಪಾದನೆಯಲ್ಲಿ ತೊಡಗಿದ್ದವು.

ಇದುವರೆಗೆ ಏಕಸ್ವಾಮ್ಯ ಹಣಕಾಸು ಕಂಪನಿಗಳು 'ಟಾಪ್ ಟೆನ್'ನಲ್ಲಿ ಹೆಚ್ಚುತ್ತಿದ್ದು, ಇದು ನವ-ಉದಾರವಾದದ ಯುಗದಲ್ಲಿ ಕೈಗಾರಿಕಾ ಬಂಡವಾಳಕ್ಕಿಂತ ಹಣಕಾಸು ಬಂಡವಾಳವು ಪಡೆದಿರುವ ಮೇಲುಗೈಯ ಪ್ರತಿಫಲನ ಎಂದು ಅರ್ಥ ಮಾಡಿಕೊಳ್ಳಬಹುದು. ಹಾಗಾದರೆ ಕಳೆದ ಎರಡು ದಶಕಗಳಲ್ಲಿ ಡಿಜಿಟಲ್ ಕಂಪನಿಗಳು 'ಟಾಪ್ ಟೆನ್' ಮುಟ್ಟುವಷ್ಟು ಅಗಾಧ ವೇಗದಲ್ಲಿ ಬೆಳೆಯುತ್ತಿರುವುದನ್ನು ಹೇಗೆ ಅರ್ಥ ಮಾಡಿಕೊಳ್ಳುವುದು? ನವ-ಉದಾರವಾದದ ಯುಗದಲ್ಲಿಯೇ ಈ ಡಿಜಿಟಲ್ ಕಂಪನಿಗಳು ಹುಟ್ಟಿ ಬೆಳೆದಿರುವುದು ಕಾಕತಾಳಿಯವೇ? ಇದಕ್ಕಾಗಿ ಈ ಎರಡು ಕಂಪನಿಗಳ ವ್ಯವಹಾರವನ್ನು, ಅಂದರೆ ಅವು ಯಾವ 'ಉತ್ಪನ್ನ'ಗಳನ್ನು ಯಾರಿಗೆ 'ಮಾರುತ್ತವೆ' ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಅಗತ್ಯ. ನಿಜ ಹೇಳಬೇಕೆಂದರೆ, ಈ ಎರಡೂ 'ಡಿಜಿಟಲ್' ಕಂಪನಿಗಳು ಮೊದಲ ನೋಟಕ್ಕೆ ಯಾರಿಗೂ ಏನನ್ನೂ ಮಾರುವುದಿಲ್ಲ. ಅದರ ಬಳಕೆದಾರರಿಗಂತೂ, ಈ ಎರಡು ಕಂಪನಿಗಳು ಉಚಿತ 'ಸಮಾಜ ಸೇವೆ' ಮಾಡುತ್ತಿರುವಂತೆ ಕಾಣುತ್ತದೆ! ಹಾಗಂತ ಅವು ಪೋಸು ಕೊಡುತ್ತವೆ ಕೂಡಾ!



ಡಿಜಿಟಲ್ ಕಂಪನಿಗಳ ಅಧಿಪತ್ಯಕ್ಕೆ ಕಾರಣಗಳು

ಮಾಹಿತಿ ತಂತ್ರಜ್ಞಾನದ ದೊಡ್ಡ ಅವಿಷ್ಕಾರವಾದ ಇಂಟರ್-ನೆಟ್ (ಅಥವಾ ನೆಟ್) ತಾರಕಕ್ಕೇರುತ್ತಿದ್ದಾಗ 1998ರಲ್ಲಿ 'ಗೂಗಲ್' ಹುಟ್ಟಿತ್ತು. ಎಲ್ಲರಿಗೂ ಗೊತ್ತಿರುವಂತೆ 20ನೇ ಶತಮಾನದಲ್ಲಿ ಮಾನವ ಸಮಾಜದ ಆರ್ಥಿಕ, ವಿಜ್ಞಾನ-ತಂತ್ರಜ್ಞಾನಗಳ ಚಟುವಟಿಕೆಗಳು ಅಗಾಧವಾಗಿ ಬೆಳೆದಂತೆ ಮಾಹಿತಿ ತಂತ್ರಜ್ಞಾನ ಬೆಳೆಯುತ್ತಾ ಹೋಯಿತು. ಅಗಾಧವಾಗಿ ಬೆಳೆದ ಮಾಹಿತಿಗಳ ಶೇಖರಣೆ, ಸಂಸ್ಕರಣ, ಮತ್ತು ಸಂವಹನಗಳ ಅಗತ್ಯಗಳನ್ನು ಪೂರೈಸಲು ಕಂಪ್ಯೂಟರ್ ಮತ್ತು ಇತರ ಮಾಹಿತಿ ತಂತ್ರಜ್ಞಾನದ ಉಪಕರಣಗಳ ಅವಿಷ್ಕಾರ, ಉತ್ಪಾದನೆ ಮತ್ತು ಬಳಕೆ ಹೆಚ್ಚುತ್ತಾ ಹೋಯಿತು. ಈ ಉಪಕರಣಗಳ ಸಾಮರ್ಥ್ಯಗಳೂ ಅಗಾಧ ವೇಗದಲ್ಲಿ ಹೆಚ್ಚುತ್ತಾ ಹೋದವು. 1960/70ರ ದಶಕದಲ್ಲಿ ದೊಡ್ಡ ದೈತ್ಯ ಸರಕಾರಿ ಅಥವಾ ಕಾರ್ಪೊರೆಟ್ ಕಂಪನಿಗಳಿಗೆ ಸೀಮಿತವಾಗಿದ್ದ ಸಾವಿರಾರು ಚದರ ಅಡಿ ಹಲವಾರು ಕಿಲೋವಾಟುಗಳ ವಿದ್ಯುತ್ ಹೀರುತ್ತಿದ್ದ ದೈತ್ಯ ಕಂಪ್ಯೂಟರುಗಳು, ಹೆಚ್ಚು ಸಾಮರ್ಥ್ಯ ಪಡೆಯುತ್ತಾ ಚಿಕ್ಕದಾಗುತ್ತಾ ಮನೆ/ಕಚೇರಿಯ ಮೇಜಿನ ಮೇಲೆ 'ಪಿ.ಸಿ.' (ಪರ್ಸನಲ್ ಕಂಪ್ಯೂಟರ್) ಆಗಿ ಬಂದು, ಕಳೆದ ಎರಡು ದಶಕಗಳಿಂದ ಕೋಟ್ಯಾಂತರ ಹಸ್ತದ ಮೇಲೆ ಮೊಬೈಲ್ ಆಗಿ ಕೂತಿದೆ. ಇಂದಿನ ಮೊಬೈಲ್ ಫೋನುಗಳ ಸ್ಮರಣ (ಮೆಮೊರಿ) ಮತ್ತು ಸಂಸ್ಕರಣ (ಪ್ರೊಸೆಸಿಂಗ್ ಪವರ್) ಶಕ್ತಿ, 1969ರಲ್ಲಿ ಮಾನವನನ್ನು ಚಂದ್ರನ ಮೇಲೆ ಇಳಿಸಿದ 'ನಾಸಾ'ದ ಒಟ್ಟು ಕಂಪ್ಯೂಟರ್ ಸಂಕೀರ್ಣದ ಶಕ್ತಿಗಿಂತ ಮಿಲಿಯಾಂತರ ಪಟ್ಟು ಹೆಚ್ಚು ಇದೆ, ಎಂಬುದು ಈ ಅಗಾಧ ವೇಗದ ಬೆಳವಣಿಗೆಗೆ ಹಿಡಿದ ಕನ್ನಡಿ.

ಪುಟ 10 ಕ್ಕೆ









ಗೂಗಲ್, ಅಮೆಜಾನ್ ಗಳ ದೈತ್ಯಬಲದ ಹಿಂದೆ ಏನಿದೆ?....

ಪುಟ 9 ರಿಂದ

ಸರಾಸರಿಯಾಗಿ ಕಂಪ್ಯೂಟರ್ ಪ್ರೊಸೆಸರುಗಳ ವೇಗ ಪ್ರತಿ 18 ತಿಂಗಳಲ್ಲಿ ಇಮ್ಮಡಿ ಆಗುತ್ತಿದೆ. ಕಂಪ್ಯೂಟರುಗಳ ಬಳಕೆ ಸಹ ಅಗಾಧವಾಗಿ ಹೆಚ್ಚಿದೆ.

ಕಂಪ್ಯೂಟರುಗಳ ಅಗಾಧ ಹೆಚ್ಚಳ ಮತ್ತು, ಅವುಗಳ ಹಾಗೂ ಅವುಗಳ ಬಳಕೆದಾರರ ನಡುವೆ ಸಂವಹನ ಸಹ ಅಗಾಧವಾಗಿ ಹೆಚ್ಚಿದೆ. ಮೊದಲು ಅಮೆರಿಕದ ಸರಕಾರಿ ಸಂಶೋಧನಾ ಸಂಸ್ಥೆಗಳ ವಿ.ವಿ.ಗಳ ಕಂಪ್ಯೂಟರುಗಳ ಖಾಸಗಿ ಜಾಲವಾಗಿ ಆರಂಭವಾಗಿ, ಆ ಮೇಲೆ ಜಗತ್ತಿನ ಎಲ್ಲಾ ದೂರಸಂಪರ್ಕ ಜಾಲಗಳನ್ನು ಬಳಸಿ ಇಡೀ ಜಗತ್ತಿನ ಎಲ್ಲಾ ಕಂಪ್ಯೂಟರುಗಳನ್ನು ಜೋಡಿಸುವ ಜಾಲವಾಗಿ 'ಇಂಟರ್-ನೆಟ್' (ಅಥವಾ 'ನೆಟ್') ಬೆಳೆಯಿತು. ನೆಟ್ ಗೆ ಜೋಡಿಸಿದ ಕಂಪ್ಯೂಟರುಗಳ (ಅಥವಾ ಉಪಕರಣಗಳ) ಸಂಖ್ಯೆ 1992ರಲ್ಲಿ 10 ಲಕ್ಷ ಇದ್ದಿದ್ದು, 2003ರ ಹೊತ್ತಿಗೆ 50 ಕೋಟಿಯಾಗಿ, 2016ರಲ್ಲಿ 2290 ಕೋಟಿಯಾಗಿದೆ. 2020ರ ಹೊತ್ತಿಗೆ 5000 ಕೋಟಿಯಾಗಲಿದೆ ಎಂದು ಅಂದಾಜಿಸಲಾಗಿದೆ. ಇಲ್ಲಿ ಪಿಸಿ, ಮೊಬೈಲು, ಮತ್ತು ಮನುಷ್ಯರ ನೆರವಿಲ್ಲದೆ ತಾವೇ ಕೆಲಸ ಮಾಡಿ ಮಾಹಿತಿ ಕಳಿಸುವ ಸಿಸಿಟಿವಿ ಕ್ಯಾಮೆರಾ, ಗಾಳಿವೇಗ ಮಾಪಕ, ಉಷ್ಣ ಮಾಪಕ ಮುಂತಾದ ನೆಟ್ ಗೆ ಜೋಡಿಸಿದ ಎಲ್ಲ ಉಪಕರಣಗಳನ್ನೂ ಪರಿಗಣಿಸಲಾಗಿದೆ. ಆದ್ದರಿಂದ ನೆಟ್ ಅಗಾಧವಾಗಿ ಬೆಳೆಯುತ್ತಿದ್ದು, ಜಗತ್ತಿನ ಅತಿ ದೊಡ್ಡ ವ್ಯಾಪಕ ಸಂವಹನ-ಸಂಪರ್ಕ ಮಾಧ್ಯಮವಾಗಿ ನೆಟ್ ಬೆಳೆದಿದೆ. 1993ರಲ್ಲಿ ನೆಟ್ ಮೂಲಕ ಉಭಯ-ದಿಕ್ಕಿನ ಸಂವಹನದ ಕೇವಲ ಶೇ.1 ನಡೆಯುತ್ತಿದ್ದರೆ, 2000 ಹೊತ್ತಿಗೆ ಶೇ.51, 2007ರ ಹೊತ್ತಿಗೆನೇ ಶೇ.97 ನಡೆಯುತ್ತಿತ್ತು.

'ಮಾಹಿತಿ ಹುಡುಕುವ' ಸೇವೆಯಿಂದ 'ಪ್ರೇಕ್ಷಕ ಸರಕು' ಮಾರಾಟ

ಹೀಗೆ ನೆಟ್ ನಲ್ಲಿ ಅಗಾಧ ಮಾಹಿತಿ ಶೇಖರಣೆಯಾಗುತ್ತಿದ್ದು, ಹರಿಯುತ್ತಿದ್ದು ಸಂವಹನ, ಶಿಕ್ಷಣ, ವ್ಯಾಪಾರ, ವಾಣಿಜ್ಯ, ವಿಜ್ಞಾನ-ತಂತ್ರಜ್ಞಾನ ಸಹಕಾರ-ವಿನಿಮಯಗಳಿಗೆ ಬಳಕೆಯಾಗುತ್ತಿದೆ. ಮಾಹಿತಿಯ ಮತ್ತು ಅವು ಇರುವ ತಾಣಗಳ ಅಗಾಧತೆಯಿಂದಾಗಿ ನೆಟ್ ನಲ್ಲಿ 'ಮಾಹಿತಿ ಹುಡುಕುವ' ಸೇವೆ ಅವಶ್ಯಕವಾಯಿತು. ಹಲವು ಕಂಪನಿಗಳು ನೆಟ್ ನಲ್ಲಿ ಮಾಹಿತಿ ಹುಡುಕುವ 'ಸರ್ಚ್ ಇಂಜಿನ್' ಸೇವೆ ಕೊಡಲಾರಂಭಿಸಿದವು. ಹಲವು ಇಂತಹ ಕಂಪನಿಗಳಿದ್ದವು. ಗೂಗಲ್ ಅವುಗಳಲ್ಲಿ ಒಂದಾಗಿತ್ತು. ಅವುಗಳ ನಡುವಿನ ಪೈಪೋಟಿಯಲ್ಲಿ ಗೂಗಲ್ ಮುನ್ನಡೆದು, ಕ್ರಮೇಣ ಈ ಕ್ಷೇತ್ರದಲ್ಲಿ ಏಕಸ್ವಾಮ್ಯ ಸಾಧಿಸಿತು. ಆ ಸೇವೆಯಲ್ಲಿ ಗಳಿಸಿದ ಏಕಸ್ವಾಮ್ಯ, ಭಾರೀ ಸಂಖ್ಯೆಯ ಬಳಕೆದಾರರನ್ನು ಬಳಸಿ ಜಿ-ಮೈಲ್, ಗೂಗಲ್ ಡಾಕ್ಸ್, ಗೂಗಲ್ ಡ್ರೈವ್, ಗೂಗಲ್ ಮ್ಯಾಪ್, ಗೂಗಲ್ ನ್ಯೂಸ್, ವಿಡಿಯೋ ವಿತರಣೆಯ ಯೂ ಟ್ಯೂಬ್ ಮುಂತಾದ 'ಉಚಿತ ಸೇವೆ'ಗಳನ್ನು ಕೊಟ್ಟು ಇನ್ನಷ್ಟು ಅಗಾಧ ಸಂಖ್ಯೆಯ ಬಳಕೆದಾರರನ್ನು ಹೊಂದಿತು. ಈ ಉಚಿತ ಸೇವೆಗಳನ್ನು ನೀಡಲು 'ಸಾಹಸ ಬಂಡವಾಳ' ಮತ್ತು 'ಪ್ರೈವೇಟ್ ಇಕ್ವಿಟಿ' ಕಂಪನಿಗಳು ವಿಪುಲ ಬಂಡವಾಳ ಹೂಡಿದವು. ಇಂತಹ ಅಗಾಧ ಸಂಖ್ಯೆಯ ಬಳಕೆದಾರರ ವಿಶ್ವಾಸ ಗಳಿಸಿ ಅವರ ನೆಟ್-ವ್ಯವಹಾರದಿಂದ ಮತ್ತು ಅದರ ಆಧಾರದ ಮೇಲೆ, ಅವರ ಖಾಸಗಿ ಮಾಹಿತಿ ಬೇಕು-ಬೇಡಗಳು ಮತ್ತು ವಿಶೇಷ ಆಸಕ್ತಿಗಳನ್ನು ಜಾಹೀರಾತುದಾರರಿಗೆ 'ಗುರಿಯಿಟ್ಟ ಜಾಹೀರಾತು' (ಟಾರ್ಗೆಟೆಡ್ ಅಡ್ವರ್ಟೈಸಿಂಗ್) ಕಳಿಸಲು ಗೂಗಲ್ ಬಳಸಿತು. "ಯಾವುದಾದರೂ ಸೇವೆ ನಿಮಗೆ ನೆಟ್ ನಲ್ಲಿ ಉಚಿತವಾಗಿದ್ದರೆ, ನೀವೇ ಅವರ ಉತ್ಪನ್ನ ಎಂದುಕೊಳ್ಳಬೇಕು" ಗೂಗಲ್ ನ ಈ ವ್ಯವಹಾರ-ಮಾದರಿ (ಬಿಸಿನೆಸ್ ಮಾಡೆಲ್) ಯನ್ನು ಗಮನಿಸಿಯೇ ಒಬ್ಬ ವಿಶ್ಲೇಷಕ ಹೇಳಿದ್ದು! ಇದನ್ನೇ ಇನ್ನೊಬ್ಬ ವಿಶ್ಲೇಷಕ 'ಆಡಿಯೆನ್ಸ್ ಕಮೊಡಿಟಿ' (ಪ್ರೇಕ್ಷಕ ಸರಕು) ಎಂದು ಕರೆದಿದ್ದು. ಅದು ವರೆಗೆ ಎಲ್ಲಾ ಜಾಹೀರಾತುಗಳನ್ನು ಎಲ್ಲರಿಗೂ ಪ್ರಸಾರ ಮಾಡಬೇಕಾಗಿದ್ದ (ಪತ್ರಿಕೆ, ಟಿವಿ, ರೇಡಿಯೋ ಉಂತಾದ ಪ್ರಸಾರ ಮಾಧ್ಯಮಗಳ ಸ್ವರೂಪ ಮತ್ತು ಬಳಕೆದಾರರ ಆಸಕ್ತಿ-ಅವಶ್ಯಕತೆ ಹಾಗೂ ಖಾಸಗಿ ಮಾಹಿತಿಗಳ ಅಭಾವದಿಂದಾಗಿ) 'ಗುರಿಯಿಟ್ಟ ಜಾಹೀರಾತು' ವ್ಯವಸ್ಥೆ ಜಾಹೀರಾತುದಾರರಿಗೆ ಆಪ್ಯಾಯಮಾನವಾಗಿದೆ. ತನ್ನ ಎಲ್ಲಾ 'ಉಚಿತ ಸೇವೆ'ಗಳಲ್ಲಿ ಕ್ರಮೇಣ ಈ ಜಾಹೀರಾತುಗಳನ್ನು ಬಳಕೆದಾರರಿಗೆ ತಳ್ಳಿ ಹಣ ಗಳಿಸಲು ಆರಂಭಿಸಿತು. ಕೆಲವು 'ಉಚಿತ ಸೇವೆಗಳ' ಮೂಲಕ ಒಂದು ವರ್ಗದ (150 ಕೋಟಿ) ಬಳಕೆದಾರರನ್ನು ಯಾಮಾರಿಸಿ, ಅವರನ್ನು ಇನ್ನೊಂದು ವರ್ಗದ 'ಬಳಕೆದಾರ'ರಿಗೆ (40 ಲಕ್ಷ ಜಾಹೀರಾತುದಾರರಿಗೆ) ಮಾರುವುದೇ ಗೂಗಲ್ ನ ವ್ಯವಹಾರ ಯಶಸ್ಸಿನ ಗುಟ್ಟು! ಇದನ್ನು 'ಡಿಜಿಟಲ್ ಟಾರ್ಗೆಟೆಡ್ ಅಡ್ವರ್ಟೈಸಿಂಗ್' ಎಂದೂ ಕರೆಯುತ್ತಾರೆ. ಒಟ್ಟು ಜಾಹೀರಾತುದಾರರ ಜಾಹೀರಾತು ಗಳಿಕೆಯಲ್ಲಿ ಗೂಗಲ್ ನ ಪಾಲು 2008ರಿಂದ ವೇಗವಾಗಿ ಏರುತ್ತಿದ್ದು, 2016ರಲ್ಲಿ ಇತರ ಎಲ್ಲ 'ಜಾಹೀರಾತು ಮಾಧ್ಯಮ'ಗಳಿಗಿಂತ ಹೆಚ್ಚಾಗಿತ್ತು. 2020ರಲ್ಲಿ ಅದು ಅರ್ಧಕ್ಕಿಂತ ಹೆಚ್ಚು ಪಾಲನ್ನು ಪಡೆಯಲಿದೆ. ಇದೇ ಅವಧಿಯಲ್ಲಿ ಪತ್ರಿಕೆಯ ಜಾಹೀರಾತು ಪಾಲು ಅದರ ಹಿಂದಿನ ಗಳಿಕೆಯ ಅರ್ಧಕ್ಕೆ ಕುಸಿದಿದೆ. ಟಿವಿಯ ಪಾಲು ತೀರಾ ಮಂದ ಗತಿಯಲ್ಲಿದ್ದು, ರೇಡಿಯೋದ ಪಾಲು ಸ್ಥಗಿತವಾಗಿದೆ.

ಸುಮಾರು ಇದೇ ರೀತಿಯ 'ವ್ಯವಹಾರ-ಮಾದರಿ' 'ಫೇಸ್ ಬುಕ್' ಕಂಪನಿಯದ್ದು. ಬಳಕೆದಾರರು ತಮ್ಮ ಫೊಟೊ/ವಿಡಿಯೊ ವನ್ನು ತಮ್ಮ ಸ್ನೇಹಿತರು ಮತ್ತು ಸಂಬಂಧಿಕರ ಜತೆ ಹಂಚಿಕೊಳ್ಳಲು 'ಉಚಿತ ವೇದಿಕೆ' ಕೊಡುವ ಮೂಲಕ 227 ಕೋಟಿ ಜನರ ವ್ಯಾಪಕ 'ಸಾಮಾಜಿಕ ಜಾಲ' ರಚಿಸಿತು. 'ಸಾಮಾಜಿಕ ಜಾಲ'ವನ್ನು ರಚಿಸುವಲ್ಲಿ ಅದೇನೂ ಮೊದಲ ಕಂಫನಿಯಾಗಿರಲಿಲ್ಲ. ಹಲವು ಕಂಪನಿಗಳನ್ನು ಹಿಂದಿಕ್ಕಿ ಕೆಲವೇ ವರ್ಷಗಳಲ್ಲಿ ಈ ಕ್ಷೇತ್ರದಲ್ಲಿ ಏಕಸ್ವಾಮ್ಯ ಸಾಧಿಸಿದೆ. ಇದರಲ್ಲಿ ಬಳಕೆದಾರರು ಹಂಚಿಕೊಂಡ ತಮ್ಮ ಮಾಹಿತಿ, ಬೇಕು-ಬೇಡಗಳು, ತಮ್ಮ ಸ್ನೇಹಿತರ-ಸಂಬಂಧಿಕರ ಮಾಹಿತಿ, ಬೇಕು-ಬೇಡಗಳನ್ನು ಸಂಸ್ಕರಿಸಿ 'ಪ್ರೇಕ್ಷಕ ನಮೂನೆ'ಗಳನ್ನು ಪ್ರೇಕ್ಷಕರನ್ನೂ 20 ಲಕ್ಷ ಜಾಹೀರಾತುದಾರರಿಗೆ ಮಾರಿತು.

ಗೂಗಲ್ ಮತ್ತು ಫೇಸ್ ಬುಕ್ ಸೇರಿ ಜಗತ್ತಿನ ಅರ್ಧಕ್ಕಿಂತಲೂ ಹೆಚ್ಚು ಡಿಜಿಟಲ್ ಜಾಹೀರಾತು ಗಳಿಕೆಯನ್ನು, ಮತ್ತು ಜಗತ್ತಿನ ಎಲ್ಲಾ ಜಾಹೀರಾತು ಗಳಿಕೆಯ ಕಾಲು ಭಾಗವನ್ನು ಇವೆರಡೇ ಕಂಪನಿಗಳು ಬಾಚಿಕೊಳ್ಳುತ್ತವೆ. ಇವೆರಡೂ ಕಂಪನಿಗಳು 'ಒಳ್ಳೆ ಹುಡುಗರ' ಇಮೇಜ್ ಕೊಡಲು ಯತ್ನಿಸಿರುವುದರಿಂದ, ಏಕಸ್ವಾಮ್ಯವಿದ್ದರೇನಂತೆ ಅವು ಉಚಿತ ಸೇವೆ ಕೊಡುತ್ತಿವೆ ಎಂದು ಹೇಳಲಾಗುತ್ತದೆ. ಆದರೆ ಇವೆರಡೂ ಕಂಪನಿಗಳು – ಅನೈತಿಕ ಕಾನೂನು-ಬಾಹಿರ ಕ್ರಮಗಳಿಂದ ತಮ್ಮ ಪೈಪೋಟಿದಾರರನ್ನು ಮಟ್ಟ ಹಾಕಿದ, ನಾಗರಿಕರ ಖಾಸಗಿ ಮಾಹಿತಿಗಳನ್ನು ಸರಕಾರಗಳಿಗೆ ವಿದೇಶಗಳಿಗೆ ಲೀಕ್ ಮಾಡಿದ, ಕೆಲವು ಸರಕಾರ-ಸಂಸ್ಥೆಗಳ ಪರವಾಗಿ ತಮ್ಮದೇ ಬಳಕೆದಾರರ ಮೇಲೆ ಬೇಹುಗಾರಿಕೆ ನಡೆಸಿದ, ಚುನಾವಣೆಗಳಲ್ಲಿ ಮಧ್ಯಪ್ರವೇಶ ಮಾಡಿದ, ಕೆಲವು ಸರಕಾರಗಳ ವಿರುದ್ಧ ಇರುವ ಭಿನ್ನಮತೀಯ ವ್ಯಕ್ತಿ-ಸಂಸ್ಥೆಗಳನ್ನು 'ಕಪ್ಪು ಪಟ್ಟಿ'ಗೆ ಸೇರಿಸಿದ ಅಥವಾ ಸಂಪರ್ಕ ಕಡಿದು ಹಾಕಿದ, ಕೆಲವು ಸರಕಾರಗಳ ವಿರುದ್ಧ ತಾನೇ ವಿರೋಧವನ್ನು ಕೃತಕವಾಗಿ ಸೃಷ್ಟಿಸಿದ, ಆಯ್ದ (ಹೆಚ್ಚು ದುಡ್ಡು ಕೊಟ್ಟ ಎಂದರೆ ಹೆಚ್ಚು ಸರಿಯಾದೀತು) ಚುನಾವಣಾ ಅಭ್ಯರ್ಥಿಗಳ-ಪಕ್ಷಗಳ (ಮೋದಿ ಸೇರಿದಂತೆ) 'ಅಗಾಧ ಜನಪ್ರಿಯತೆ'ಯನ್ನು ಕೃತಕವಾಗಿ ಸೃಷ್ಟಿಸಿದ – ಹಲವು ಗುರುತರವಾದ ಆಪಾದನೆ-ವಿಚಾರಣೆಗಳನ್ನು ಹಲವು ದೇಶಗಳಲ್ಲಿ ಎದುರಿಸುತ್ತಿವೆ ಎಂಬುದು ಅಷ್ಟು ಜನಜನಿತವಾಗಿಲ್ಲ.

ಇ-ವ್ಯಾಪಾರದಲ್ಲಿ ಏಕಸ್ವಾಮ್ಯ

ಅಮೆಜಾನ್ 1994ರಲ್ಲಿ ಪುಸ್ತಕಗಳ ಆನ್-ಲೈನ್ ಅಥವಾ ನೆಟ್ ಮೂಲಕ ಇ-ಮಾರಾಟದಿಂದ ಆರಂಭಿಸಿ ಮೊಬೈಲ್, ಇತರ ಇಲೆಕ್ಟ್ರಾನಿಕ್ಸ ವಸ್ತುಗಳು, ಬಟ್ಟೆ ಮತ್ತು ಎಲ್ಲ ಸರಕುಗಳ ಇ-ಮಾರಾಟದ ದೈತ್ಯ ಏಕಸ್ವಾಮ್ಯ ಕಂಪನಿಯಾಗಿ ಬೆಳೆದಿದೆ. ಹಲವು ಚಿಲ್ಲರೆ ಅಂಗಡಿಗಳ ಡಿಪಾರ್ಟ್‌ಮೆಂಟ್ ಸ್ಟೋರುಗಳ ಜಾಲಗಳನ್ನು ಖರೀದಿಸಿ ಇಡೀ ಚಿಲ್ಲರೆ ವ್ಯಾಪಾರದಲ್ಲಿ ಏಕಸ್ವಾಮ್ಯ ಸಾಧಿಸುವ ಹಾದಿಯಲ್ಲಿದೆ. ಚಿಲ್ಲರೆ ಸ್ಟೋರುಗಳ ಕ್ಷೇತ್ರದಲ್ಲಿ ನಂ.1 ದೈತ್ಯ ಕಂಪನಿಯಾಗಿರುವ ವಾಲ್ ಮಾರ್ಟ್ ನ್ನು ಈಗಾಗಲೇ ಮಾರುಕಟ್ಟೆ ಮೌಲ್ಯದಲ್ಲಿ ಹಿಂದೆ ಹಾಕಿದೆ. ಜತೆಗೆ ಇ-ಬುಕ್ ಕ್ಷೇತ್ರದಲ್ಲೂ ಏಕಸ್ವಾಮ್ಯ ಸಾಧಿಸಿದೆ. ಇ-ಬುಕ್ ರೀಡರ್ ನಂತಹ ಹಲವು ತನ್ನದೇ ಉತ್ಪನ್ನಗಳನ್ನು ಸಹ ಸಿದ್ಧಪಡಿಸಿತು.

ಮೊದಲು ಪುಸ್ತಕ ಮಾರಾಟಗಾರರಿಗೆ ಮತ್ತು ಇತರ ಸರಕುಗಳ ಉತ್ಪಾದಕರಿಗೆ ಮಾರಾಟ ಮಾಡಲು ಮತ್ತು ಖರೀದಿದಾರರಿಗೆ ಖರೀದಿ ಮಾಡಲು 'ಉಚಿತ ನೆಟ್ ವೇದಿಕೆ' ಅಥವಾ ಇ-ಅಂಗಡಿಯಂತೆ ಅಮೆಜಾನ್ ಆರಂಭವಾಯಿತು. ಖರೀದಿದಾರರ ಆರ್ಡರ್ ಬಂದಾಗ ಉತ್ಪಾದಕರ ಅಥವಾ ವಿತರಕರ ಗೋದಾಮಿನಿಂದ ಖರೀದಿದಾರರಿಗೆ ಕಳಿಸುವ ವ್ಯವಸ್ಥೆ ಮಾಡಲಾಯಿತು. ಮೊದಲಿಗೆ ಖರೀದಿದಾರರನ್ನು ಆಕರ್ಷಿಸಲು ವಿಶೇಷ ಡಿಸ್ಕೌಂಟು, ಹೆಚ್ಚಿನ ಮೊತ್ತದ ಸರಕುಗಳಿಗೆ ಕಳಿಸುವ ವೆಚ್ಚ ಮಾಫಿ, ಸರಕು ಇಷ್ಟವಾಗದಿದ್ದರೆ ಬೇಶರತ್ ವಾಪಸ್ – ಮುಂತಾದ ತಂತ್ರಗಳನ್ನು ಅನುಸರಿಸಿತು. ಈ ತಂತ್ರಗಳನ್ನು ಜಾರಿ ಮಾಡಲು 'ಸಾಹಸ ಬಂಡವಾಳ' ಮತ್ತು 'ಪ್ರೈವೇಟ್ ಇಕ್ವಿಟಿ' ಕಂಪನಿಗಳು ವಿಪುಲ ಬಂಡವಾಳ ಹೂಡಿದವು. ಮಾರಾಟದ ಮೌಲ್ಯದ ಒಂದು ಭಾಗ ಅಮೆಜಾನಿನ ಆದಾಯವಾಗಿತ್ತು. ಖರೀದಿದಾರರು ಹೆಚ್ಚಿದಂತೆ ವ್ಯಾಪಾರ ಹೆಚ್ಚಿದಂತೆ ಅಮೆಜಾನಿನ ಮೂಲಕ ವ್ಯವಹಾರ ಮಾಡುವ ಉತ್ಪಾದಕರ ಮತ್ತು ವಿತರಕರ ಜಾಲ ವಿಸ್ತಾರವಾಗುತ್ತಾ ಹೋಯಿತು. ಖರೀದಿದಾರರ ಸಂಪರ್ಕ ಮತ್ತು ಹಣದ ಪಾವತಿಯ ಮೇಲೆ ಅಮೆಜಾನಿಗೆ ಮಾತ್ರ ನಿಯಂತ್ರಣ ಇದ್ದಿದ್ದರಿಂದ ಅಮೆಜಾನ್ ತನ್ನ ಪಾಲನ್ನು ಹೆಚ್ಚಿಸುತ್ತಾ ಹೋಯಿತು. ಒಂದು ಉತ್ಪನ್ನದ ಅಥವಾ ಉತ್ಪಾದಕನ ಮಾರಾಟದ ಗಾತ್ರ ದೊಡ್ಡದಾದಂತೆ ಅಮೆಜಾನ್ – ಕೆಲವು ಉತ್ಪನ್ನಗಳನ್ನು ತನ್ನ ಮೂಲಕ ಮಾತ್ರ ಮಾರಾಟ ಮಾಡಬೇಕು, ವಿಶೇಷ ಕಡಿಮೆ ಬೆಲೆ ಇಡಬೇಕು, ಇತರ ವಿಶೇಷ ಶರತ್ತುಗಳನ್ನು ಒಪ್ಪಿಕೊಳ್ಳಬೇಕು – ಇತ್ಯಾದಿ 'ಏಕಸ್ವಾಮ್ಯ' ಶರತ್ತುಗಳನ್ನು ಉತ್ಪಾದಕರ ಮತ್ತು ವಿತರಕರ ಮೇಲೆ ವಿಧಿಸುತ್ತಾ ಹೋಯಿತು. ಜತೆಗೆ ಸರಕುಗಳ ಸಂಗ್ರಹಣೆ, ವಿತರಣೆ ಮುಂತಾದ ಕೆಲಸಗಳನ್ನು ಹೊರಗುತ್ತಿಗೆ ನೀಡುತ್ತಾ ಅತಿ ಕಡಿಮೆ ವೆಚ್ಚದಲ್ಲಿ ಮಾಡಿಸಿಕೊಳ್ಳುತ್ತಾ, ಉತ್ಪಾದಕ-ವಿತರಕ, ಖರೀದಿದಾರ ಮುಂತಾದ ಎಲ್ಲರ ಮೇಲೆ "ಏಕಸ್ವಾಮ್ಯ'ದಿಂದ ತನ್ನ ಶರತ್ತುಗಳನ್ನು ಹೇರುತ್ತಾ, ಎಲ್ಲರಿಂದ ತನ್ನ 'ಕಟ್' ತೆಗೆದುಕೊಳ್ಳುತ್ತಾ ಅಮೆಜಾನ್ ಬೆಳೆದಿದೆ. ಸುಮಾರಾಗಿ ಇದನ್ನೇ ನೆಟ್ ನಿಂದ ಹೊರಗೆ ಮಾಡಿದ 'ವಾಲ್ ಮಾರ್ಟ್'ನ್ನು ಮೀರಿ ಬೆಳೆದಿದೆ. ಅದಕ್ಕೆ ತೀವ್ರ ಪೈಪೋಟಿ ಕೊಡುತ್ತಿದೆ.

ನಮ್ಮ ದೇಶದಲ್ಲೇ 'ಫ್ಲಿಪ್ ಕಾರ್ಟ್' ಇಂತಹುದೇ 'ವ್ಯವಹಾರ ಮಾದರಿ' ಕಾಪಿ ಮಾಡಿ ಬೆಳೆದಿದೆ. ಈಗ 'ಫ್ಲಿಪ್ ಕಾರ್ಟ್'ನ್ನು 'ವಾಲ್ ಮಾರ್ಟ್' ಖರೀದಿ ಮಾಡಿ 'ಅಮೆಜಾನ್'ಗೆ ಪೈಪೋಟಿ ಕೊಡಲು ಪ್ರಯತ್ನಿಸುತ್ತಿದೆ, ಎಂಬುದನ್ನು ಗಮನಿಸಬೇಕು. ಅಮೆಜಾನಿನ ಈ 'ವ್ಯವಹಾರ ಮಾದರಿ' ಹಿಂದಿನ ಚಿಲ್ಲರೆ ವ್ಯಾಪಾರದ ವ್ಯವಸ್ಥೆಯನ್ನು, ಮುಖ್ಯವಾಗಿ ಚಿಲ್ಲರೆ ವ್ಯಾಪಾರಿಗಳನ್ನು ನಾಶ ಮಾಡಿದೆ ಮಾತ್ರವಲ್ಲ. ಹಿಂದಿನ ವ್ಯವಸ್ಥೆಯಲ್ಲಿದ್ದ ಬಳಕೆದಾರರು, ಹಂಚಿಕೆದಾರರು, ವಿತರಕರು, ಉತ್ಪಾದಕರು, ಗೋದಾಮುಗಳು – ಇವರೆಲ್ಲರನ್ನೂ ಒಂದು 'ಬೇಲಿ ಹಾಕಿದ ಆವರಣ'ದಲ್ಲಿ ಕೂಡಿ ಹಾಕಿ ಅವರ ಮೇಲೆ ಏಕಸ್ವಾಮ್ಯದ ಶರತ್ತುಗಳನ್ನು ವಿಧಿಸುತ್ತದೆ. ಈ ವ್ಯವಸ್ಥೆ ಖಾಯಂ ಮಾಡುವವರೆಗೆ 'ಆವರಣದೊಳಗೆ' ಕೂಡಿಹಾಕಲು ಒಪ್ಪುವಂತೆ ಆಮಿಷ-ಬೆದರಿಕೆಗಳನ್ನು ಒಡ್ಡಲಾಗುತ್ತದೆ. ಬಳಕೆದಾರರಿಗೆ ಕಡಿಮೆ ಬೆಲೆಯ ಆಸೆ ತೋರಿಸಿ ಇತರ ಚಿಲ್ಲರೆ ವ್ಯಾಪಾರಿಗಳ ನಾಶ ಮಾಡಿದ ಮೇಲೆ ಅಮೆಜಾನ್ ಹೇಳಿದ್ದೇ ಬೆಲೆ. ಉತ್ಪಾದಕ-ವಿತರಕರರನ್ನು ದೊಡ್ಡ ಮಾರುಕಟ್ಟೆಯ ಆಸೆ ತೋರಿಸಿ, ಉಳಿದ ಚಾನೆಲುಗಳನ್ನು ಬಂದ್ ಮಾಡಿದ ಮೇಲೆ ಅಮೆಜಾನ್ ಹೇಳಿದ ಬೆಲೆ-ವೆಚ್ಚಕ್ಕೆ ಒಪ್ಪುವಂತೆ ಮಾಡಲಾಗುತ್ತದೆ. 'ಆನ್-ಲೈನ್' 'ಇ-ಅಂಗಡಿ'ಗಳ ಸ್ಥಾಪನೆಯಿಂದ ಮತ್ತು ಉತ್ಪನ್ನಗಳ ಮಾರಾಟದ ಗಾತ್ರದ ಕ್ರೋಢೀಕರಣದ ಸವಲತ್ತಿನಿಂದ ಮಾರಾಟದ ವೆಚ್ಚ ಕಡಿಮೆ ಆಗಿರುವುದರ ಪೂರ್ಣ ಪ್ರಯೋಜನ ಅಮೆಜಾನ್ ಗೆ ದಕ್ಕುತ್ತದೆ. ಉಳಿದವರೆಲ್ಲ ತಮ್ಮ ಸ್ವಾಯತ್ತತೆ ಕಳೆದುಕೊಳ್ಳುವುದಲ್ಲದೆ ಹಿಂದಿಗಿಂತ ವಿಷಮ ಸ್ಥಿತಿಗೆ ತಲುಪುತ್ತಾರೆ. ಅಮೆಜಾನ್ ಡ್ರೋನ್ ತಂತ್ರಜ್ಞಾನಗಳನ್ನು ಬಳಸಿ ವಿತರಣಾ ವ್ಯವಸ್ಥೆಯಲ್ಲಿ ಮನುಷ್ಯರೇ ಇಲ್ಲದಂತೆ ಸಹ ಮಾಡ ಹೊರಟಿದೆ.

ಭೌತಿಕ ಸರಕು/ಸೇವೆಗಳ ಉತ್ಪಾದನೆ, ವಿತರಣೆ ಮತ್ತು ಮಾರಾಟದ ವ್ಯವಸ್ಥೆಗೆ 'ಬೇಲಿ ಹಾಕಿ ಆವರಣ' ರಚಿಸಿ ಏಕಸ್ವಾಮ್ಯ ಕಲ್ಪಿಸುವ ಅಮೆಜಾನಿನ ಈ ಹೊಸ 'ಆವರಣ ಮಾದರಿ'ಯನ್ನು ಇತರ ಕೆಲವು ಹೊಸ ಡಿಜಿಟಲ್ ಕಂಪನಿಗಳು ಅನುಸರಿಸುತ್ತಿದ್ದು, ಈ ಮಾದರಿ ಏಕಸ್ವಾಮ್ಯ ಬಂಡವಾಳಶಾಹಿಯ ಬೆಳವಣಿಗೆಯ ಹೊಸ ಟ್ರೆಂಡನ್ನು ಪ್ರತಿನಿಧಿಸುವಂತೆ ಕಾಣ ಬರುತ್ತದೆ. ಉಬೇರ್ (ನಮ್ಮಲ್ಲಿ ಓಲಾ ಸಹ) ಬಾಡಿಗೆ ಸಾಗಾಣಿಕೆ (ಟ್ಯಾಕ್ಸಿ) ಕ್ಷೇತ್ರದಲ್ಲಿ, ಏರ್ ಬಿಎನ್,ಬಿ. (ನಮ್ಮಲ್ಲಿ ಓಯೋ) ತಾತ್ಕಾಲಿಕ ಬಾಡಿಗೆ ವಸತಿ (ಹೊಟೇಲ್/ಗೆಸ್ಟ್ ಹೌಸ್/ಸ್ಟೇ ಹೋಂ ಇತ್ಯಾದಿ) ಕ್ಷೇತ್ರದಲ್ಲಿ ಈ ಟ್ರೆಂಡ್ ಕಂಡುಬರುತ್ತಿದೆ. ಉಬೇರ್ ಚಾಲಕ-ರಹಿತ ಕಾರು ತಂತ್ರಜ್ಞಾನ ಬಳಸಿ ಟ್ಯಾಕ್ಸಿ ಕ್ಷೇತ್ರದಲ್ಲಿ, ಮನುಷ್ಯರೇ ಇಲ್ಲದಂತೆ ಮಾಡ ಹೊರಟಿದೆ.

ಹಾಗೆ ನೋಡಿದರೆ, ಗೂಗಲ್-ಫೇಸ್ ಬುಕ್ ಗಳದ್ದು ಸಹ 'ಬೇಲಿ ಹಾಕಿ ಆವರಣ' ರಚಿಸುವ ಮಾದರಿಯೇ. ಬಳಕೆದಾರರು, ಅವರ ಸಂವಹನ-ಸಂಪರ್ಕ, ಖಾಸಗಿ ಮಾಹಿತಿ, ಜಾಹೀರಾತುದಾರರು – ಇವರೆಲ್ಲರನ್ನೂ ಒಂದು 'ಆವರಣ'ದೊಳಗೆ ಬಂಧಿಸಿ ಇವು ತಮ್ಮ ಏಕಸ್ವಾಮ್ಯ ಸಾಧಿಸಿವೆ.

19ನೇ ಶತಮಾನದ ಇಂಗ್ಲೆಂಡಿನಲ್ಲಿ ಗೋಮಾಳ, ಗದ್ದೆ, ತೋಟಗಳಿಂದ ರೈತರು ಕೂಲಿಕಾರರನ್ನು ಓಡಿಸಿ ಶ್ರೀಮಂತರು 'ಬೇಲಿ ಹಾಕಿ ಆವರಣ' ರಚಿಸಿದ್ದರು. ಅದು ಕೃಷಿ-ಕೈಗಾರಿಕೆಗಳಲ್ಲಿ ಅತ್ಯಂತ ಬರ್ಬರ ಬಂಡವಾಳಶಾಹಿ ವ್ಯವಸ್ಥೆಗೆ ನಾಂದಿಯಾಗಿದ್ದನ್ನು 'ಬಂಡವಾಳ ಸಂಪುಟ-1'ರಲ್ಲಿ ಮಾರ್ಕ್ಸ್ ವಿವರವಾಗಿ ಚಿತ್ರಿಸುತ್ತಾರೆ. ಈಗ ಆರ್ಥಿಕದ ವಿವಿಧ ಕ್ಷೇತ್ರಗಳಲ್ಲಿ 'ಕಾಲ್ಪನಿಕ ಆವರಣ'ಗಳನ್ನು ನಿರ್ಮಿಸಲಾಗುತ್ತಿದೆ. ಇದು ಮುಂದೆ ಕಾರು, ಮುಂತಾದ ಭೌತಿಕ ವಸ್ತುಗಳ ಉತ್ಪಾದನೆಯ 'ಸ್ವಯಂ-ನಿಯಂತ್ರೀಕರಣ'ದೊಂದಿಗೆ ಹೆಚ್ಚಿನ ಕ್ಷೇತ್ರಗಳಲ್ಲಿ ಹಬ್ಬಬಹುದು. 'ಆವರಣ ಮಾದರಿ'ಯನ್ನು ಅನುಸರಿಸಿದ ಕಂಪನಿಗಳಿಗೆ ಭಾರೀ ಪ್ರಮಾಣದಲ್ಲಿ 'ಸಾಹಸ ಬಂಡವಾಳ' (ವೆಂಚರ್ ಕ್ಯಾಪಿಟಲ್) ಮತ್ತು 'ಪ್ರೈವೇಟ್ ಇಕ್ವಿಟಿ' ಕಂಪನಿಗಳ ಮೂಲಕ ಭಾರೀ ಪ್ರಮಾಣದ ಬಂಡವಾಳ ಹೂಡಿಕೆಯಾದದ್ದು ನೋಡಿದರೆ, ಇಂದಿನ ನವ-ಉದಾರವಾದಿ ಸಮಕಾಲೀನ ಬಂಡವಾಳಶಾಹಿಯು ಈ ಮಾದರಿಯನ್ನು ಸಕ್ರಿಯವಾಗಿ ಪ್ರೋತ್ಸಾಹಿಸುವಂತೆ ಕಾಣುತ್ತಿದೆ.

ಈ ಹಿನ್ನೆಲೆಯಲ್ಲಿ ದೈತ್ಯ ಡಿಜಿಟಲ್ ಕಂಪನಿಗಳ 'ಆವರಣ ಮಾದರಿ'ಯನ್ನು ಕೂಲಂಕಷವಾಗಿ ವಿಶ್ಲೇಷಿಸಬೇಕಾಗಿದೆ. ಈ ದೈತ್ಯ ಡಿಜಿಟಲ್ ಕಂಪನಿಗಳಿಗೆ ಮತ್ತು 'ಆವರಣ ಮಾದರಿ'ಗೆ ಪ್ರತಿರೋಧ ಹೂಡುವುದು ಹೇಗೆ ಎಂದು ಯೋಚಿಸಬೇಕಾಗಿದೆ. ನಮ್ಮ ಸುತ್ತಲಿನ 'ಒಯೋ', 'ಓಲಾ'ಗಳ ಪರಿಣಾಮಗಳನ್ನು ಅಧ್ಯಯನ ಮಾಡಬೇಕಾಗಿದೆ. ●



ಐಎಎಸ್ ಅಧಿಕಾರಿಗಳ ರಾಜೀನಾಮೆ ಮತ್ತು ನೈತಿಕತೆಯ ಪ್ರಶ್ನೆಗಳು

ಎರಡು ವಾರಗಳ ಅಂತರದಲ್ಲಿ ಇಬ್ಬರು ಐಎಎಸ್ ಅಧಿಕಾರಿಗಳು, ದೇಶದಲ್ಲಿ ನಡೆದಿರುವ ಕೆಲವು ವಿದ್ಯಮಾನಗಳಿಂದ ಬೇಸರ ಹೊಂದಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವುದು ಜನರ ಗಮನ ಸೆಳೆದಿದೆ. ತಾವು ನಂಬಿದ ತತ್ವ, ಸಿದ್ಧಾಂತಗಳಿಗೆ ಧಕ್ಕೆಯುಂಟಾಗಿದೆ ಎಂದು ಅವರು ತಮ್ಮ ರಾಜೀನಾಮೆಗೆ ಕಾರಣ ನೀಡಿದ್ದಾರೆ. ನಿವೃತ್ತಿಯ ಅಂಚಿನಲ್ಲಿರುವ ಅಧಿಕಾರಿಗಳು ಹೀಗೆ ರಾಜೀನಾಮೆ ನೀಡಿದ್ದರೆ, ಅವರ ಮಾತುಗಳ ಹಿಂದೆ ಬೇರೆ ಕಾರಣಗಳನ್ನು ಊಹಿಸಬಹುದಿತ್ತು. ಆದರೆ, ಅಧಿಕಾರ ತ್ಯಜಿಸಿರುವ ಇಬ್ಬರೂ ಅಧಿಕಾರಿಗಳು ಯುವಕರು ಹಾಗೂ ಕಾರ್ಯನಿರ್ವಹಣೆಯಲ್ಲಿ ದಕ್ಷರೆಂದು ಹೆಸರಾಗಿದ್ದವರು. ದಕ್ಷಿಣ ಕನ್ನಡದ ಜಿಲ್ಲಾಧಿಕಾರಿಯಾಗಿದ್ದ ಸಸಿಕಾಂತ್ ಸೆಂಥಿಲ್, 'ದೇಶದಲ್ಲಿ ನಡೆಯುತ್ತಿರುವ ವಿದ್ಯಮಾನಗಳೊಂದಿಗೆ ರಾಜಿ ಮಾಡಿಕೊಳ್ಳಲು ನಾನು ಸಿದ್ಧನಿಲ್ಲ. ನಾನು ನಂಬಿದ ತತ್ವ ಸಿದ್ಧಾಂತಗಳ ವಿಚಾರವಾಗಿ ರಾಜಿ ಮಾಡಿಕೊಳ್ಳಲು ಸಿದ್ಧನಿಲ್ಲದ ಕಾರಣಕ್ಕಾಗಿ ರಾಜೀನಾಮೆ ನಿರ್ಧಾರ ಕೈಗೊಂಡಿದ್ದೇನೆ' ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಮತ್ತೊಬ್ಬ ಐಎಎಸ್ ಅಧಿಕಾರಿ ಕಣ್ಣನ್ ಗೋಪಿನಾಥನ್ ಅವರು, ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ ಬೆಳವಣಿಗೆಯ ಹಿನ್ನೆಲೆಯಲ್ಲಿ ಅಲ್ಲಿನ ಜನರಿಗೆ ತಮ್ಮ ಅನಿಸಿಕೆ ಹೇಳಿಕೊಳ್ಳಲು ಅವಕಾಶ ನಿರಾಕರಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿ ರಾಜೀನಾಮೆ ನೀಡಿದ್ದಾರೆ. ತಮ್ಮ ಅಧಿಕಾರಕ್ಕಿಂತಲೂ ಅಭಿವ್ಯಕ್ತಿ ಸ್ವಾತಂತ್ರ್ಯವು ಅವರಿಗೆ ಮುಖ್ಯವಾಗಿ ಕಾಣಿಸಿದೆ. ಕಾಶ್ಮೀರದ ಐಎಎಸ್ ಅಧಿಕಾರಿ ಶಾ ಫೈಸಲ್ ಅವರು, ಕಾಶ್ಮೀರದಲ್ಲಿ ನಿಲ್ಲದ ಹಿಂಸಾಚಾರದ ಕಾರಣ ನೀಡಿ ಈ ವರ್ಷದ ಆರಂಭದಲ್ಲಿ ತಮ್ಮ ಸ್ಥಾನ ತ್ಯಜಿಸಿದ್ದರು. ಈ ಅಧಿಕಾರಿಗಳ ರಾಜೀನಾಮೆ, ಅಧಿಕಾರಸ್ಥರ ನೈತಿಕತೆಗೆ ಒಡ್ಡಿರುವ ಸವಾಲಿನ ರೂಪದಲ್ಲಿ ಇದೆ.

ದೇಶದ ಬಹುತ್ವ ಹಾಗೂ ಪ್ರಜಾಪ್ರಭುತ್ವದ ಆಶಯಗಳಿಗೆ ಧಕ್ಕೆಯುಂಟಾಗಿರುವ ಬಗ್ಗೆ ನಡೆಯುತ್ತಿರುವ ಚರ್ಚೆಗಳಿಗೆ ಈಗ ಐಎಎಸ್ ಹುದ್ದೆ ತ್ಯಜಿಸಿರುವ ಅಧಿಕಾರಿಗಳ ಧ್ವನಿಯೂ ಸೇರಿಕೊಂಡಿದೆ. ಉಜ್ವಲ ಭವಿಷ್ಯವಿದ್ದ ಯುವ ಅಧಿಕಾರಿಗಳು, ಅಧಿಕಾರ ತ್ಯಜಿಸಿ ಜನರ ಪ್ರತಿರೋಧದ ಕೂಗಿಗೆ ತಮ್ಮ ಧ್ವನಿಯನ್ನೂ ಸೇರಿಸಿದ್ದಾರೆ. ಇಂಥ ಸಂದರ್ಭ ಎದುರಾದಾಗ, ಅವರ ಮನವೊಲಿಸುವ ಪ್ರಯತ್ನ ಅಥವಾ ಅವರು ತಮ್ಮ ರಾಜೀನಾಮೆಗೆ ನೀಡಿರುವ ಕಾರಣಗಳ ಪರಾಮರ್ಶೆ ನಡೆಯಬೇಕಾಗಿತ್ತು. ದುರದೃಷ್ಟವಶಾತ್ ಅಂತಹ ಯಾವ ಪ್ರಯತ್ನವೂ ಕೇಂದ್ರ ಸರ್ಕಾರದ ವತಿಯಿಂದ ನಡೆದಂತಿಲ್ಲ. ಅದಕ್ಕೆ ಪ್ರತಿಯಾಗಿ, ಭಿನ್ನಮತ ಹೊಂದಿರುವ ಅಧಿಕಾರಿಗಳನ್ನು ಪಾಕಿಸ್ತಾನಕ್ಕೆ ಕಳಿಸಲು ಟೀಕಾಕಾರರು ಉತ್ಸುಕರಾಗಿದ್ದಾರೆ. ಐಎಎಸ್ ಅಧಿಕಾರಿಗಳ ರಾಜೀನಾಮೆಯು ಅವರಲ್ಲಿನ ಅಸಹಿಷ್ಣುತೆ ಹಾಗೂ ಎಡ ಮತ್ತು ಪ್ರಗತಿಪರರೊಂದಿಗೆ ಅವರು ಹೊಂದಿರುವ ಸಂಬಂಧಕ್ಕೆ ನಿದರ್ಶನವಾಗಿ ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರಿಗೆ ಕಾಣಿಸಿದೆ. ಕರ್ನಾಟಕದ ಬಿಜೆಪಿ ಸಂಸದ ಅನಂತಕುಮಾರ ಹೆಗಡೆ ಅವರಿಗಂತೂ ಸೆಂಥಿಲ್‌ರ ನಡೆ 'ರಾಜದ್ರೋಹ' ಹಾಗೂ ಸ್ವೇಚ್ಛಾಚಾರ ಎನ್ನಿಸಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಆಗ್ರಹಿಸಿದ್ದಾರೆ.

ವಿಧಾನಾತ್ಮಕವಾಗಿ ನಿರ್ಧಾರಗಳನ್ನು ಕೈಗೊಳ್ಳುವ ಜನಪ್ರತಿನಿಧಿಗಳ ನಿರ್ಧಾರವನ್ನು ಪ್ರಶ್ನಿಸುವುದು 'ರಾಜದ್ರೋಹ' ಎನ್ನುವುದು ಅವರ ವ್ಯಾಖ್ಯಾನ. ಈ ಪ್ರತಿಕ್ರಿಯೆಗಳು, ಯಾವ ಕಾರಣಗಳನ್ನು ನೀಡಿ ಸೆಂಥಿಲ್ ಹಾಗೂ ಕಣ್ಣನ್ ರಾಜೀನಾಮೆ ನೀಡಿರುವರೋ ಆ ಕಾರಣಗಳಿಗೆ ಪೂರಕವಾಗಿ ಇರುವಂತಿವೆ. ಕೇಂದ್ರದಲ್ಲಿ ಸಚಿವರೂ ಆಗಿದ್ದ ಹೆಗಡೆ ಅವರು, ತಾವು ಆಡಿರುವ ಅವೆಷ್ಟು ಮಾತುಗಳು ಸಂವಿಧಾನ ಪ್ರತಿಪಾದಿಸುವ 'ಬಹುತ್ವ'ದ ಆಶಯಗಳಿಗೆ ಪೂರಕವಾಗಿವೆ ಎಂದು ಪರಿಶೀಲಿಸಿಕೊಳ್ಳುವ ಅಗತ್ಯವಿದೆ.

ಭಿನ್ನಮತಕ್ಕೆ ಅವಕಾಶ ಕೊಡದ ಸರ್ಕಾರದ ನೀತಿ ಕೂಡ ಪ್ರಜಾಸತ್ತಾತ್ಮಕವಾದುದೇನಲ್ಲ. ಸರ್ಕಾರದ ನೀತಿಪಾಲಕರಾದ ಅಧಿಕಾರಿಗಳೇ ತಮಗೆ ಉಸಿರುಗಟ್ಟಿಸುವ ಪರಿಸ್ಥಿತಿ ಇದೆ ಎಂದು ಹೇಳುವ ಸನ್ನಿವೇಶವು ದೇಶದ ಕಾರ್ಯಾಂಗ, ಆರ್ಥಿಕತೆ ಹಾಗೂ ಪ್ರಜಾಪ್ರಭುತ್ವಕ್ಕೆ ಒಳ್ಳೆಯದಲ್ಲ. ಕೇಂದ್ರ ಸರ್ಕಾರದ ಸೇವೆಯಲ್ಲಿರುವ ಉನ್ನತ ಅಧಿಕಾರಿಗಳ ರಾಜೀನಾಮೆಯು ಪರ್ವವಾಗಿ ಬೆಳೆಯದಂತೆ ಸರ್ಕಾರ ಎಚ್ಚರ ವಹಿಸಬೇಕಾಗಿದೆ. ಆಡಳಿತದ ಚುಕ್ಕಾಣಿ ಹಿಡಿದವರು ವಿನಯ, ವಿಮರ್ಶೆಯ ಮಾರ್ಗ ಅನುಸರಿಸಬೇಕು. ತನ್ನ ನೀತಿಗೆ ಸಹಮತ ವ್ಯಕ್ತಪಡಿಸದವರನ್ನೆಲ್ಲ ನಿರಾಕರಿಸುವ ಇಲ್ಲವೇ ಹತ್ತಿಕ್ಕುವ ಧೋರಣೆ ಸರಿಯಲ್ಲ.

ಕೃಪೆ: ಪ್ರಜಾವಾಣಿ ●

ಹೊನವಾಡ ರೈತರ ಪ್ರತಿಭಟನೆ

ವಿಜಯಪುರ : ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್) ಹೊನವಾಡ ಘಟಕ ವತಿಯಿಂದ ವಿವಿಧ ಬೇಡಿಕೆಗಳ ಒತ್ತಾಯಿಸಿ ಜಂಟಿ ಕೃಷಿ ನಿರ್ದೇಶಕರಾದ ಎಚ್.ಬಿ. ಪಡಸಲಗಿ ಹಾಗೂ ಕೃಷಿ ನಿರ್ದೇಶಕರು ವಿಜಯಪುರ ಅವರಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸ್ವೀಕರಿಸಿ ಪಡಸಲಗಿ ಮಾತನಾಡಿ, ಕೇಂದ್ರ ಬೀಜ ವಿತರಣಾ ಹಾಗೂ ಕೃಷಿ ಹೊಂಡ ತೆಗೆಯಲಾಗುವುದು ಎಂದು ಆಶ್ವಾಸನೆ ನೀಡಿದರು.

ತಾಲೂಕಾ ಪಂಚಾಯತಿ ಕಾರ್ಯನಿರ್ವಾಹಕ ಬಿ.ಆರ್. ರಾಠೋಡ ಮಾತನಾಡಿ, ಮನವಿಪತ್ರಗಳಲ್ಲಿನ ಆಧಾರ ಕಾರ್ಡ್ ಕೇಂದ್ರ ಸ್ಥಾಪನೆ, ಹಗಲತ್ತಿನಲ್ಲಿ ಬೀದಿ ದೀಪಗಳು ಉರಿಯುವ ಕುರಿತು, ಗ್ರಾಮದ ಸ್ವಚ್ಛತೆ ಸಲುವಾಗಿ ಪ್ರತಿಯೊಂದು ವಾಣಿಜ್ಯ ಕಟ್ಟಡಗಳ (ಕಿರಾಣಿ ಅಂಗಡಿ, ಪಾನಶಾಪ್, ಡಾಬಾ ಹೊಟೇಲ್, ಇನ್ನು ಮುಂತಾದ) ಕಡೆ ಹಾಗೂ ಪ್ರಮುಖ ಬೀದಿಗಳಲ್ಲಿ ಕಸದ ತೊಟ್ಟಿ ಇಟ್ಟಿರುವುದಿಲ್ಲ. ಬಾಪೂಜಿ ಸೇವಾ ಕೇಂದ್ರದಲ್ಲಿ ನೀಡಲಾಗುವ ಎಲ್ಲಾ ಸೇವೆಗಳನ್ನು ಒದಗಿಸುವ ಮತ್ತು ಅವುಗಳ ವೆಚ್ಚ ಬಗ್ಗೆ ಹಾಗೂ ಅವುಗಳನ್ನು ಒದಗಿಸಲು ಇರುವ ಕಾಲಮಿತಿ ಪಟ್ಟಿ ಮಾಡಿ ಸಾರ್ವಜನಿಕರಿಗೆ ಎದ್ದು ಕಾಣುವಂತೆ ಬೋರ್ಡ್ ಅಳವಡಿಸಿರುವುದಿಲ್ಲ ನಳಗಳಲ್ಲಿ ಸುಮಾರು ತಿಂಗಳಿಂದ ನೀರು ಬರುತಿಲ್ಲ ನಿಯಮಿತವಾಗಿ ನೀರು ಬಿಡುತ್ತಿಲ್ಲ. ಗ್ರಾಮದಿಂದ ಗ್ರಾಮಕ್ಕೆ ಇರುವ ರಸ್ತೆ ಬದಿಯ ಜಂಗಲ್ ಕಡಿದಿರುವುದಿಲ್ಲ ಇವುಗಳ ಕುರಿತು ಕ್ರಮ ಕೈಗೊಳ್ಳುತ್ತೇನೆ. ಹಾಗೂ ಹೊನವಾಡ ಗ್ರಾಮದ ಪಿಡಿಓ ಅವರ ಮೇಲೆ ಕ್ರಮ ಕೈಗೊಳ್ಳುತ್ತೇನೆ ಹಾಗೂ ಚೆಕ್ ಡ್ಯಾಂ ಯೋಜನೆ ತಯಾರು ಮಾಡಿಕೊಂಡರೆ ಅದನ್ನು ನಾನು ಈಡೇರಿಸುತ್ತೇನೆ ಎಂದು ಲಿಖಿತವಾಗಿ ಭರವಸೆ ನೀಡಿದರು.

ಕೆ.ಎಸ್.ಆರ್.ಟಿ.ಸಿ ಹೊನವಾಡಗ್ರಾಮಕ್ಕೆ ಬಸ್ ಬಿಡುಗಡೆ ಗೊಳ್ಳಿಸಿದ್ದಕ್ಕೆ ಅಭಿನಂದನೆ ಸಲ್ಲಿಸಿದರು. ಹೊನವಾಡದಿಂದ ತಿಕಾಟಾವರೆಗೆ ಟಿಕೆಟ್ ದರ 25 ಇರುತ್ತದೆ. ಅದನ್ನು 15 ವರೆಗೆ ಇಳಿಸಬೇಕು ಎಂದು ಕೆ.ಎಸ್. ಆರ್.ಟಿ.ಸಿ. ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಭೀಮಶಿ ಕಲಾದಗಿ, ಹೊನವಾಡ ಘಟಕದ ಅಧ್ಯಕ್ಷ ಧರೆಪ್ಪ ಗುಗ್ಗರಿ, ಉಪಾಧ್ಯಕ್ಷ ಈರಪ್ಪ ತೇಲಿ ನೇತೃತ್ವ ವಹಿಸಿದ್ದರು. ಶ್ರೀಮಂತ ಚೌರಿ, ಮಲ್ಲಿಕಾರ್ಜುನ ಗುಗ್ಗರಿ, ವಿವೇಕಾನಂದ ಮಾಲಗಾರ, ಅರುಣಬಾಶ್ಯಾ ಹೆಳಕರ, ಬಸು ಕಾತ್ರಾಳ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

●





ಕೆರೆ ಕಟ್ಟೆಗಳಿಗೆ ನೀರು ತುಂಬಿಸಲು ಪ್ರಾಂತ ರೈತ ಸಂಘದಿಂದ ಪ್ರತಿಭಟನೆ

ಮಳವಳ್ಳಿ ತಾಲೂಕಿನ ಬಿಜಿ ಪುರ ಹೋಬಳಿಯ ಕೆರೆ ಕಟ್ಟೆಗಳಿಗೆ ನೀರು ತುಂಬಿಸಬೇಕೆಂದು ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಬಿಜಿ ಪುರ ಹೋಬಳಿ ನೀರಾವರಿ ಹೋರಾಟ ಸಮಿತಿ ವತಿಯಿಂದ ತಹಶಿಲ್ದಾರ ಕಛೇರಿ ಮುಂದೆ ಹೋರಾಟ ನಡೆಸಲಾಯಿತು.

ನಿರತ ಸ್ಥಳಕ್ಕೆ ನೀರಾವರಿ ನಿಗಮದ ಎಕ್ಸಿಕ್ಯುಟಿವ್ ಇಂಜಿನಿಯರ್ ರಾಮಕೃಷ್ಣ. ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೃಷ್ಣಯ್ಯ ಬನ್ನೂರು. ನಾಗರಾಜ್ ತಳಗವಾದಿ ವಿಭಾಗ ಸಣ್ಣ ನೀರಾವರಿ AEE. ಪ್ರಕಾಶ DP ನವೀನ್ ಜೆಇ. ತಹಸೀಲ್ದಾರ್ ಚಂದ್ರಮೌಳಿ ಸಮಸ್ಯೆಗಳನ್ನು ಚರ್ಚಿಸಿ ಇಂದಿನಿಂದಲೆ ಕೆರೆಗಳಿಗೆ ನೀರು ಬಿಡಲು ಪ್ರಾರಂಭಿಸಿದರು ಮತ್ತು ನಂಜಾಪುರ ಏತ ನೀರಾವರಿಯ ಒಂದು ಪಂಪ್ ಇಂದಿನಿಂದ ಚಲಿಸುತ್ತಿದೆ ಉಳಿದ ಎರಡನೆ ಪಂಪ್ ಹತ್ತು ದಿನದೊಳಗೆ ಹಾಗೂ ಇನ್ನೆರಡು ಪಂಪ್‌ಗಳನ್ನು ಒಂದು ತಿಂಗಳ ಒಳಗೆ ಚಲಿಸುವಂತೆ ಮಾಡಿ ನೀರು ಕೊಡುತ್ತೆವೆಂದು ಭರವಸೆ ನೀಡಿದರು. ಅದೇ ರೀತಿ ಮಲ್ಲಿ ಕ್ಯಾತನಹಳ್ಳಿಯ ಏತ ನೀರಾವರಿಗೆ ಹೊಸ ಪಂಪ್‌ಗಳ ಅಳವಡಿಸುವ ಭರವಸೆ ನೀಡಿದರು. ತಹಸೀಲ್ದಾರ್ ರವರಿಗೆ ಮನವಿ ಸಲ್ಲಿಸಲಾಯಿತು ಮತ್ತು ಇಂಜಿನಿಯರ್‌ಗಳ ಸಭೆ ನಡೆಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಎನ್.ಎಲ್. ಭರತ್‌ರಾಜ್, ಕಾರ್ಯದರ್ಶಿ ಎನ್ ಲಿಂಗರಾಜಮೂರ್ತಿ, ಶಿವಶಂಕರ್ ನಟರಾಜ್ ಆನಂದಸ್ವಾಮಿ ಮಹೇಶ್ ಗುರುಸ್ವಾಮಿ ಕೃಷ್ಣರಾಜೇ ಅರಸ್ಸು. ರವಿ ಸತೀಶ್ ಸಾಲೂರು ಸ್ವಾಮಿ, ಸುಶೀಲಾ ರೇಖಾ ಮುಂತಾದವರು ಭಾಗವಹಿಸಿದ್ದರು.

ರಾಬರ್ಟ್ ಮುಗಾಬೆ ನಿಧನ



ಜಿಂಬಾಬ್ವೆಯ ಅಪ್ರತಿಮ ನಾಯಕರಾಗಿದ್ದ ರಾಬರ್ಟ್ ಮುಗಾಬೆ ಸೆಪ್ಟೆಂಬರ್ 6, ರಂದು, ಸಿಂಗಪುರದ ಆಸ್ಪತ್ರೆ ಯಲ್ಲಿ ನಿಧನ ಹೊಂದಿದ್ದಾರೆ. ಇವರಿಗೆ 96 ವರ್ಷ ವಯಸ್ಸಾಗಿತ್ತು.

1980 ರಿಂದ 1987 ರ ವರೆವಿಗೂ, ಜಿಂಬಾಬ್ವೆ ಯ ಪ್ರಧಾನ ಮಂತ್ರಿ ಯಾಗಿ, ಹಾಗೂ 1987 ರಿಂದ 2017 ರ ವರೆವಿಗೂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಜಿಂಬಾಬ್ವೆ ಯ ಆಫ್ರಿಕನ್ ನ್ಯಾಷನಲ್ ಯೂನಿಯನ್ ಅಧ್ಯಕ್ಷ ರಾಗಿ1975 ರಿಂದ 1980 ರ ವರೆಗೆ ದುಡಿದಿದ್ದಾರೆ. ಸೈದ್ಧಾಂತಿಕ ವಾಗಿ ಇವರು ಆಫ್ರಿಕನ್ ನ್ಯಾಷನಲಿಸ್ಟ್ ಹೋರಾಟದ ಮುಗಾಬೆ.

ಆದಾಗ್ಯೂ, ಇವರು 1970 ರಿಂದ 1980 ರ ವರೆವಿಗೂ "ಮಾರ್ಕ್ಸಿಸ್ಟ್-ಲೆನಿನ್ಸ್" ಎಂದು ಗುರುತಿಸಿಕೊಂಡಿದ್ದರು.

ಸುಮಾರು ನಾಲ್ಕು ದಶಕಗಳಲ್ಲಿ ಜಿಂಬಾಬ್ವೆ ರಾಜಕೀಯದಲ್ಲಿ ಪ್ರಾಬಲ್ಯ ಹೊಂದಿದ್ದರು. ಜಿಂಬಾಬ್ವೆಯನ್ನು ಬ್ರಿಟಿಷ್ ವಸಾಹತುಶಾಹಿ, ಸಾಮ್ರಾಜ್ಯಶಾಹಿ ಮತ್ತು ಬಿಳಿ ಅಲ್ಪಸಂಖ್ಯಾತ ಆಡಳಿತದಿಂದ ಮುಕ್ತಗೊಳಿಸಲು ಸಹಾಯ ಮಾಡಿದ ಆಫ್ರಿಕನ್ ವಿಮೋಚನಾ ಕ್ರಾಂತಿಕಾರಿ ವೀರನಾಗಿದ್ದರು

ಕೇಂದ್ರ ಮಂತ್ರಿಗಳ ಓಲಾ-ಉಬರ್, ಗಣಿತ-ಐನ್‌ಸ್ಟೈನ್ ತರ್ಕಗಳು

100 ದಿನಗಳ ಟ್ರೇಲರ್ ಮಾತ್ರ – "ಫಿಲಮ್ ಅಭೀ ಬಾಕೀ ಹೈ"

100 ದಿನಗಳನ್ನು 'ಯಶಸ್ವಿ'ಯಾಗಿ ಪೂರೈಸಿರುವ ಮೋದಿ 2.0 ಸರಕಾರ "100 ದಿನಗಳ ಧೀರ ಉಪಕ್ರಮಗಳು ಮತ್ತು ನಿರ್ಣಾಯಕ ಕ್ರಿಯೆಗಳು" ಎಂಬ ದಸ್ತಾವೇಜನ್ನು ಬಿಡುಗಡೆ ಮಾಡಿದೆ. ಆದರೆ ಅದೇಕೋ ಆರ್ಥಿಕ ಪರಿಸ್ಥಿತಿ ಈ ಸರಕಾರದ ಮಂತ್ರಿಗಳಿಂದ ವಿಲಕ್ಷಣ ಹೇಳಿಕೆಗಳನ್ನು ಹೊಮ್ಮಿಸುತ್ತಿರುವಂತೆ ಕಾಣುತ್ತದೆ.

ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಿಗಳು ಕಳೆದ ನೂರು ದಿನಗಳಲ್ಲಿ ಮಾಡಿದ ಪ್ರಾಚೀನ ವಿಜ್ಞಾನದ ಅದ್ಭುತವಾದ ಪ್ರವಚನಗಳ ನಂತರ, ಹಣಕಾಸು ಮಂತ್ರಿಗಳು ಕಾರುಗಳ ಮಾರಾಟ ಇಳಿಕೆಗೆ ಓಲಾ-ಉಬರ್‌ಗಳನ್ನು ಹೊಣೆ ಮಾಡಿ, ಟ್ವಿಟರಿಗರು ಅದರಿಂದ ಚೇತರಿಸಿಕೊಳ್ಳುತ್ತಿರುವಷ್ಟರಲ್ಲಿ ಹಂಗಾಮಿ ಹಣಕಾಸು ಮಂತ್ರಿಗಳಾಗಿದ್ದ ಈಗಿನ ವಾಣಿಜ್ಯ&ರೈಲ್ವೆ ಮಂತ್ರಿಗಳು ನ್ಯೂಟನ್ ಸಂಶೋಧನೆಯಾದ ಗುರುತ್ವಾಕರ್ಷಣೆಯನ್ನು ಅವರಿಂದ ಕಿತ್ತುಕೊಂಡು ಎರಡು ಶತಮಾನಗಳ ನಂತರ ಬಂದ ಐನ್‌ಸ್ಟೈನ್ ಮಡಿಲಿಗೆ ಹಾಕಿ ಅದಕ್ಕೆ ಅವರಿಗೆ ಗಣಿತದ ನೆರವೇನೂ ಬೇಕಾಗಿರಲಿಲ್ಲ, ಜಿಡಿಪಿ ದರಗಳ ಗಣಿತದ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ ಎನ್ನುತ್ತ ಮತ್ತೆ ತಲೆಕಡಿಸಿಕೊಳ್ಳುವಂತೆ ಮಾಡಿದ್ದಾರೆ.

ಈ ನಡುವೆ 100 ದಿನಗಳ ನಿರ್ಣಾಯಕ ಯಶಸ್ಸನ್ನು ಸಾರುತ್ತಿರುವ ಪ್ರಧಾನಿಗಳು, ಈ ಟ್ವಿಟರಿಗರ ಪರಿಸ್ಥಿತಿಯ ಪರಿವೆಯೇ ಇಲ್ಲದೆ, "ಯೇ ತೊ ಬಸ್ ಟ್ರೇಲರ್ ಹೈ, ಫಿಲಂ ಅಭೀ ಬಾಕೀ ಹೈ" ಎಂದು ಹೇಳಿ ಅವರನ್ನು ಮತ್ತಷ್ಟು ಗಾಬರಿಗೊಳಿಸಿದ್ದಾರೆ. ನಿಜ, ಅವರು ಇದನ್ನು ಹೇಳಿದ್ದು ಝಾರ್ಖಂಡ್‌ನ ರಾಜಧಾನಿ ರಾಂಚಿಯಲ್ಲಿ-ಒಂದು ಚುನಾವಣಾ ರ್‍ಯಾಲಿಯಲ್ಲಿ, ಹಲವು ಕಲ್ಯಾಣ ಸ್ಕೀಮುಗಳನ್ನು ಆರಂಭಿಸುತ್ತ.



ಮೋದಿ 1.0 ಸರಕಾರದ ನೋಟು ರದ್ದತಿ ಮತ್ತು ಜಿಎಸ್‌ಟಿಯಿಂದಾಗಿ ಅನೌಪಚಾರಿಕ ವಲಯ ಮತ್ತು ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳ ವಲಯದಲ್ಲಿ ಆಗಿರುವ ಅಲ್ಲೋಲ-ಕಲ್ಲೋಲದಿಂದ ತಲೆಕೆಡಿಸಿಕೊಂಡಿರದ ನಮ್ಮ ಹೊಸ ಹಣಕಾಸು ಮಂತ್ರಿಗಳು ತಮ್ಮ ಬಜೆಟಿನಲ್ಲಿ 2024ರ ವೇಳೆಗೆ ಭಾರತ 5 ಟ್ರಿಲಿಯನ್ ಡಾಲರುಗಳ ಬೃಹತ್ ಆರ್ಥಿಕ ವ್ಯವಸ್ಥೆಯನ್ನು ಹೊಂದುವಂತೆ ಮಾಡಲಾಗುತ್ತದೆ ಎಂದು ಆಶ್ವಾಸನೆ ನೀಡಿದ್ದರು. ಆದರೆ ಕಳೆದ ಕೆಲವು ವಾರಗಳಿಂದ ವಾಹನೋದ್ಯಮ, ಜವಳಿ ಉದ್ಯಮ, ಬಿಸ್ಕಿಟ್ ಮುಂತಾದ ಸುಮಾರಾಗಿ ಎಲ್ಲ ದಿನಬಳಕೆಯ ಸರಕುಗಳ ಉದ್ಯಮಗಳು ಬಿಕ್ಕಟ್ಟು ಎದುರಿಸುತ್ತಿರುವ, ಲಕ್ಷ-ಲಕ್ಷ ಸಂಖ್ಯೆಯಲ್ಲಿ ಆ ಉದ್ಯಮಗಳಲ್ಲಿ ದುಡಿಯುತ್ತಿರುವವರು ಕೆಲಸ ಕಳೆದುಕೊಳ್ಳುತ್ತಿರುವ ಸುದ್ದಿ 'ಮುಖ್ಯಧಾರೆ'ಯ ಮಾಧ್ಯಮಗಳಲ್ಲೂ ಬರಲಾರಂಭಿಸಿದಾಗ ತಲೆಕಡಿಸಿಕೊಳ್ಳಬೇಕಾಗಿ ಬಂದಂತೆ ಕಾಣುತ್ತದೆ.

ವಾಹನಗಳ ಮಾರಾಟ ಕುಸಿತ-ಹಣಕಾಸು ಮಂತ್ರಿಗಳ ವ್ಯಾಖ್ಯಾನ

ವಾಹನ ತಯಾರಿಕಾ ಉದ್ಯಮದಲ್ಲಿ ಸತತ ಹತ್ತನೇ ತಿಂಗಳು ಕಳೆದ ಆಗಸ್ಟ್‌ಗೆ ಹೋಲಿಸಿದರೆ ಈ ಆಗಸ್ಟನಲ್ಲೂ 31.57% ದಷ್ಟು ಇಳಿಕೆಯಾಗಿದೆ, 2.87 ಲಕ್ಷದಿಂದ 1.97 ಲಕ್ಷಕ್ಕೆ ಇಳಿದಿದೆ ಎಂಬ ಸುದ್ದಿಯೊಂದಿಗೆ ವಾಹನ ತಯಾರಿಕಾ ಕಂಪನಿಗಳು ಉತ್ಪಾದನೆಯನ್ನು ಕಡಿತಗೊಳಿಸುತ್ತಿರುವ ಸುದ್ದಿಯೂ ಬಂದಿದೆ. ಇದಕ್ಕೆ ತಮ್ಮ ಸರಕಾರದ ಧೋರಣೆಗಳನ್ನು ಬಿಟ್ಟು ಬೇರಾವ ಕಾರಣಗಳನ್ನು ಕೊಡಬಹುದು ಎಂದು ಯೋಚಿಸಿದಾಗ ಬಹುಶಃ ಅವರಿಗೆ ಕಂಡದ್ದು ಓಲ ಮತ್ತು ಉಬರ್ ಕ್ಯಾಬ್‌ಗಳು. ತಮ್ಮ ಸರಕಾರದ "100 ದಿನಗಳ ಧೀರ ಉಪಕ್ರಮಗಳು ಮತ್ತು ನಿರ್ಣಾಯಕ ಕ್ರಿಯೆಗಳು"ನ್ನು ಪ್ರಚುರಪಡಿಸುವ ಚೆನ್ನೈನ ಒಂದು ಪತ್ರಿಕಾಗೋಷ್ಠಿಯಲ್ಲಿ ದೇಶದ ನವಯುವಕರು ಈ ಓಲ-ಉಬರ್ ಕ್ಯಾಬ್‌ಗಳಿಂದಾಗಿ ಹೊಸ ಕಾರುಗಳನ್ನು ಕೊಳ್ಳಲು ಮನಸ್ಸು ಮಾಡುತ್ತಿಲ್ಲ, ಇದು ಆಟೊಮೊಬೈಲ್ ವಲಯದಲ್ಲಿ ಮಾರಾಟ ಕುಸಿಯಲು ಒಂದು ಪ್ರಮುಖ ಕಾರಣ ಎಂಬ ಅಮೋಘ ವಿಚಾರವನ್ನು ವ್ಯಕ್ತಪಡಿಸಿದರು.

ಆದರೆ ವಾಣಿಜ್ಯ ವಾಹನಗಳ ಮಾರಾಟದಲ್ಲೂ ಕಳೆದ ಆಗಸ್ಟ್‌ಗೆ ಹೋಲಿಸಿದರೆ ಈ ಆಗಸ್ಟನ ಮಾರಾಟದಲ್ಲಿ 38.71ಶೇ. ಇಳಿಕೆಯಾಗಿದೆ ಎಂಬ ಸುದ್ದಿಯೂ ಬಂದಿದೆಯಲ್ಲಾ.

ಅಲ್ಲದೆ ಇತ್ತೀಚಿನ ಒಂದು ಸರ್ವೆಯ ಪ್ರಕಾರ ನವಯುವಕರಲ್ಲಿ 84% ತಮ್ಮದೇ ಕಾರುಗಳನ್ನು ಹೊಂದಬೇಕೆಂದು ಬಯಸಿದ್ದಾರೆ, 10.8% ಮಾತ್ರ ಓಲ-ಉಬರ್ ಕ್ಯಾಬ್‌ಗಳಿಂದ ಸಂತುಷ್ಟರಾಗಿದ್ದಾರೆ ಎಂಬ ಸುದ್ದಿಯೂ ಬಂದಿದೆ.

ಜತೆಗೆ ಓಲ-ಉಬರ್ ಕೂಡ ಬಿಕ್ಕಟ್ಟು ಎದುರಿಸುತ್ತಿವೆ ಎಂಬ ಸುದ್ದಿಯೂ ಬಂದಿದೆ.

ಈ ಹಿನ್ನೆಲೆಯಲ್ಲಿ ಹಣಕಾಸು ಮಂತ್ರಿಗಳ ವ್ಯಾಖ್ಯಾನಕ್ಕೆ ಸಾಮಾಜಿಕ ಮಾಧ್ಯಮದಲ್ಲಿ ಬಂದ ಪ್ರತಿಕ್ರಿಯೆಗಳಲ್ಲಿ ಕೆಲವನ್ನು ನೋಡಿ:


- ಸಿಟಿಮಂದಿ ಓಲ ಬಳಸುವುದರಿಂದ ಕಾರುಗಳ ಮಾರಾಟ ಇಳಿದಿದೆ-ಟ್ರಕ್ ಡ್ರೈವರ್‌ಗಳು ಓಲ-ಉಬರ್ ಡ್ರೈವರುಗಳಾಗುತ್ತಿರುವುದರಿಂದ ಟ್ರಕ್ ಮಾರಾಟ ಕುಸಿಯುತ್ತಿದೆ-ಅತ್ತ ಹೆಚ್ಚಿರುವ ಓಲ-ಉಬರ್ ಕ್ಯಾಬ್‌ಗಳ ಆನಂದ ಪಡೆಯಲು ರೈತರು ನಗರಗಳತ್ತ ಹೋಗುತ್ತಿರುವುದರಿಂದ ಟ್ರಾಕ್ಟರುಗಳ ಮಾರಾಟ ಕುಸಿಯುತ್ತಿದೆ.
- ದೇಶದ ಭಾರವನ್ನೆಲ್ಲ ಮೋದೀಜಿ ತಮ್ಮ ಹೆಗಲ ಮೇಲೆ ಹೊತ್ತುಕೊಂಡಿರುವುದರಿಂದಾಗಿ ಭಾರೀ ವಾಣಿಜ್ಯ ವಾಹನಗಳ ಮಾರಾಟ ಕುಸಿದಿದೆ. #ಸೇಇಟ್‌ಲೈಕ್ ನಿರ್ಮಲಾತಾಯಿ (ನಿರ್ಮಲಮ್ಮನಂತೆ ಹೇಳಿ)
- 21ನೇ ಶತಮಾನದ ನವಯುವಕರ ನಕಾರಾತ್ಮಕ ಮನೋಭಾವದಿಂದಾಗಿ ವಿವಿಧ ಉದ್ಯಮಗಳು ಕುಸಿಯುತ್ತಿವೆ. ಇದು ಜವಳಿ, ಬಿಸ್ಕಿಟ್ ಇತ್ಯಾದಿ ಉದ್ದಿಮೆಗಳನ್ನು ಹೇಗೆ ತಟ್ಟುತ್ತಿದೆ ಎಂದು ತಿಳಿಸಿ. #ಬಾಯ್‌ಕಾಟ್‌ಮಿಲೆನಿಯಲ್ಸ್ ಪ್ರಚಾರದಲ್ಲಿ ಭಾಗವಹಿಸಿ. ಮೇಡಂ ನಿರ್ಮಲಾ ಇದನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ.
- 21ನೇ ಶತಮಾನದ ನವಯುವಕರು ಹೊಸ ನೆಹರುಗಳು...
- 21ನೇ ಶತಮಾನದ ನವಯುವಕರು ರಾಷ್ಟ್ರ-ವಿರೋಧಿಗಳು. ಅವರನ್ನು ಪಾಕಿಸ್ತಾನಕ್ಕೆ ಕಳಿಸಬೇಕು. ಅನಂತಕುಮಾರ ಹೆಗ್ಡೆ ಪಾಕಿಸ್ತಾನಕ್ಕೆ ಟಿಕೆಟ್‌ಗಳನ್ನು ಕೊಡಿಸುತ್ತಾರೆ. ಇತ್ಯಾದಿ ಇತ್ಯಾದಿ,

ಜಿಡಿಪಿ ಬೆಳವಣಿಗೆ ದರ ಕುಸಿತ- ವಾಣಿಜ್ಯಮಂತ್ರಿಗಳ ಸೂಪರ್ ಡೈಲಾಗ್

ಜಿಡಿಪಿ ಬೆಳವಣಿಗೆ ದರವನ್ನೇ ಅಭಿವೃದ್ಧಿಯ ಏಕೈಕ ಸೂಚಕವಾಗಿ ಆತುಕೊಂಡಿದ್ದ ಆಳುವ ಮಂದಿಗೆ, ಅದರಲ್ಲೂ ಪ್ರಸಕ್ತ ಮಂದಿಗೆ, ಎಪ್ರಿಲ್-ಜೂನ್2019ರ ತ್ರೈಮಾಸಿಕದಲ್ಲಿ ಕಳೆದ 6 ವರ್ಷಗಳಲ್ಲಿ, ಅಂದರೆ ಅಚ್ಛೇದಿನ್‌ಗಳಲ್ಲೇ ಅತಿಕಡಿಮೆ ಮಟ್ಟವಾದ 5%ಕ್ಕೆ ಇಳಿದಿರುವುದು ಸಹಜವಾಗಿಯೇ ಬಹಳ ಮುಜುಗರ ಉಂಟುಮಾಡಿದೆ. ಆದರೆ ಇದಕ್ಕೆ ಕೇಂದ್ರ ವಾಣಿಜ್ಯ&ರೈಲ್ವೆ ಮಂತ್ರಿಗಳ ಟಿಪ್ಪಣಿ ಇದೀಗ ಹಣಕಾಸು ಮಂತ್ರಿಗಳ ವ್ಯಾಖ್ಯಾನವನ್ನೂ ಮೀರಿಸಿ ಹೊಸ ದಾಖಲೆ ಸೃಷ್ಟಿಸಿದೆ.

ಅವರು ವ್ಯಾಪಾರಮಂಡಳಿ ಸಭೆಯಲ್ಲಿ ಮಾತಾಡುತ್ತ "ಟೆಲಿವಿಷನ್‌ಗಳಲ್ಲಿ ತೋರಿಸುವ ಲೆಕ್ಕಾಚಾರಗಳಿಗೆ ಹೋಗಬೇಡಿ.. ನೀವು 5ಟ್ರಿಲಿಯನ್ ಡಾಲರ್ ಆರ್ಥಿಕದತ್ತ ನೋಡುತ್ತಿದ್ದರೆ, ದೇಶ 12% ದಲ್ಲಿ ಬೆಳೆಯಬೇಕು, ಇಂದು ಅದು 6-7ಶೇ.ದಲ್ಲಿ ಬೆಳೆಯುತ್ತಿದೆ. ಆ ಗಣಿತದಲ್ಲಿ ಸಿಲುಕಬೇಡಿ. ಆ ಗಣಿತ ಎಂದೂ ಐನ್‌ಸ್ಟೈನ್‌ಗೆ ಗುರುತ್ವಾಕರ್ಷಣೆಯನ್ನು ಕಂಡು ಹಿಡಿಯಲು ನೆರವಾಗಲಿಲ್ಲ" ಎಂದು ಉದ್ಗರಿಸಿದ್ದಾಗಿ ವರದಿಯಾಗಿದೆ.

ಆರ್ಥಿಕ ಪರಿಸ್ಥಿತಿಯನ್ನು ಗಂಭೀರವಾಗಿ ಪರಾಮರ್ಶಿಸುವ ಬದಲು ಏನೇನೋ ಸಮಜಾಯಿಷಿ ಕೊಡುವ ಇತ್ತೀಚಿನ ಆಳುವ ಮಂದಿಯ




ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಇಂತಹ ಪ್ರವೃತ್ತಿ ಸಹಜವಾಗಿಯೇ ಕಟು ವ್ಯಂಗ್ಯಕ್ಕೆ ಒಳಗಾಗುತ್ತಿದೆ. ಇಂತಹ ವ್ಯಂಗ್ಯೋಕ್ತಿಗಳಿಗೆ ಮಂತ್ರಿಗಳು, ಬಾಯಿ ತಪ್ಪಿಯೋ, ಅಥವ ಅಜ್ಞಾನದಿಂದಲೋ, ನ್ಯೂಟನ್ ಬದಲಿಗೆ ಐನ್‌ಸ್ಟೈನ್ ಹೆಸರು ಹೇಳಿದ್ದಷ್ಟೇ ಕಾರಣವಲ್ಲ. ಆದ್ದರಿಂದ ಅವರು ನಂತರ ತಕ್ಷಣ ನೀಡಿದ 'ಸ್ಪಷ್ಟೀಕರಣ'ದಿಂದ ಏನೂ ಪ್ರಯೋಜನವಾಗಿಲ್ಲ. ಕೆಲವು ಟ್ವಿಟರ್ ಪ್ರತಿಕ್ರಿಯೆಗಳನ್ನು ನೋಡಿ:

- 'ಇತ್ನಾ ಗಲತ್ ಕೈಸೇ ಹೋ ಸಕ್ತಾ ಹೈ ಭಾಯ್?" (ಇಷ್ಟೊಂದು ತಪ್ಪು ಹೇಗೆ ಸಾಧ್ಯವಣ್ಣಾ?)
- ಬಿಜೆಪಿ ನ್ಯೂಟನ್ ಹೆಸರನ್ನೂ ಬದಲಿಸಿ ಐನ್‌ಸ್ಟೈನ್ ಮಾಡಿದೆಯೇ?
- ಐನ್‌ಸ್ಟೈನ್ ಗುರುತ್ವಾಕರ್ಷಣೆಯನ್ನು ಸಂಶೋಧಿಸಿದರು, ಅದೂ ಗಣಿತವಿಲ್ಲದೆ, ಮತ್ತು ನ್ಯೂಟನ್ ಅದನ್ನು ಮಾಡುವುದನ್ನು ಮತ್ತು ತನ್ನ ವಿಚಾರವನ್ನು ಕದ್ದದ್ದನ್ನು ನೋಡುತ್ತ ಇದ್ದರು.
- ಮಂತ್ರಿಗಳು ಐನ್‌ಸ್ಟೈನ್‌ಗೆ ಗಣಿತದ ನೆರವು ಬೇಕಾಗಿರಲಿಲ್ಲ ಎಂದು ಹೇಳಿರುವುದು ಸರಿಯಾಗಿಯೇ ಇದೆಯಲ್ಲಾ. ಏಕೆಂದರೆ ಅವರು ಗುರುತ್ವಾಕರ್ಷಣೆಯನ್ನು ಕಂಡುಹಿಡಿಯಲಿಲ್ಲ.
- ಎಲ್ಲಾ ಕೀರ್ತಿ ನಿರ್ಮಲಾ ಅವರಿಗೆ ಮಾತ್ರವೇ ಏಕೆ? ಪೀಯೂಷ್ ಜೀ ಸೂಪರ್ ಡೈಲಾಗ್ ಹೊಡೆದಿದ್ದಾರೆ.
- 21ನೇ ಶತಮಾನದ ನವಯುವಕರು ಮತ್ತು ಗಣಿತ ಕಾರಣ, ಮೋದಿ ಸರಕಾರ ಕಾರಣವಲ್ಲ, ತಿಳಿಯಿತೇ?

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಈ ಮಂತ್ರಿಗಳ ಉದ್ಗಾರಕ್ಕೆ ಪ್ರತಿಕ್ರಿಯಿಸುತ್ತ, **ಆರ್ಥಿಕ ವ್ಯವಸ್ಥೆಯ ಗಣಿತ(ಲೆಕ್ಕಾಚಾರ)ವೆಲ್ಲ ಹೊಲಬುಗೆಟ್ಟಿದೆ ಎಂದು ತಿಳಿಯಲು, ನ್ಯೂಟನ್‌ಗೆ ಆದಂತೆ ತಲೆಯ ಮೇಲೆ ಒಂದು ಸೇಬು ಬೀಳುವ ವರೆಗೆ ಸರಕಾರ ಕಾಯಬೇಕಿಲ್ಲ, ದೂರದ ಕನಸುಗಳ ಮೇಲೆ ಗಮನ ಕೇಂದ್ರೀಕರಿಸುವ ಬದಲು ಮಂತ್ರಿಗಳು ಇಂದಿನ ವಾಸ್ತವತೆಯ ಮೇಲೆ ಗಮನ ಕೇಂದ್ರೀಕರಿಸುವುದು ಒಳ್ಳೆಯದು ಎಂದು ಹೇಳಲು ಒಬ್ಬ ಐನ್‌ಸ್ಟೈನ್(ನ್ಯೂಟನ್‌ರವರ ಕ್ಷಮೆಯಿರಲಿ) ಏನೂ ಬೇಕಿಲ್ಲ ಎಂದಿದ್ದಾರೆ.**

ಗುಜರಾತಿನ ಬಿಜೆಪಿ ಸರಕಾರ ಸಪ್ಟಂಬರ್ 1ರಿಂದ ಕೇಂದ್ರ ಬಿಜೆಪಿ ಸರಕಾರ ಜಾರಿಗೊಳಸಿದ್ದ ತಿದ್ದುಪಡಿಗೊಂಡ ಮೋಟಾರು ವಾಹನಗಳ ಕಾಯ್ದೆಯಲ್ಲಿ ನಮೂದಿಸಿರುವ ದಂಡಗಳನ್ನು ತಿದ್ದುಪಡಿ ಮಾಡಿದೆ. 25% ದಿಂದ 90% ದಷ್ಟು ದರಗಳನ್ನು ಇಳಿಸಲಾಗಿದೆ. ಈ ಕಾಯ್ದೆಯ ತಿದ್ದುಪಡಿಗೆ ಬಹಳ ವರ್ಷಗಳಿಂದ ತೀವ್ರ ವಿರೋಧವಿದ್ದರೂ, ಬಿಜೆಪಿ ಸರಕಾರ ಈ ಬಾರಿ ತನ್ನ ಭಾರೀ ಬಹುಮತವನ್ನು ಬಳಸಿ ಅದನ್ನು ಪಾಸು ಮಾಡಿಸಿಕೊಂಡಿತ್ತು. ವಿಪರೀತ ದಂಡದ ದರಗಳು ವಿರೋಧಕ್ಕೆ ಒಂದು ಕಾರಣವಾಗಿತ್ತು. ಉತ್ತರಾಖಂಡ ಮತ್ತು ಕರ್ನಾಟಕದ ಬಿಜೆಪಿ ಸರಕಾರಗಳೂ ಈಗ ಇದನ್ನು ಅನುಸರಿಸುತ್ತವೆ ಎಂದು ನಿರೀಕ್ಷಿಸಲಾಗಿದೆ.-ಸುದ್ದಿ



ವ್ಯಂಗ್ಯಚಿತ್ರ: ಮಂಜುಲ್, ಮಿಡ್ ಡೇ

"ಸುಪ್ರಿಂ ಕೋರ್ಟ್ ನಮ್ಮದೆ" ಎಂದರೆ.....

"ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ ನಮ್ಮ ನಿರ್ಧಾರ. ಸುಪ್ರಿಂ ಕೋರ್ಟ್ ನಮ್ಮದೆ. ಈ ದೇಶ ಮತ್ತು ಮಂದಿರವೂ ನಮ್ಮದು" ಎಂದು ಉತ್ತರಪ್ರದೇಶದ ಸಹಕಾರಿ ಮಂತ್ರಿಗಳು ಮಾಧ್ಯಮದವರೊಂದಿಗೆ ಮಾತಾಡುತ್ತ ಬಹಿರಂಗವಾಗಿಯೇ ಹೇಳಿದರು ಎಂದು ವರದಿಯಾಗಿದೆ. ನಾವು ಅಭಿವೃದ್ಧಿಯ ಹೆಸರಲ್ಲಿ ಅಧಿಕಾರಕ್ಕೆ ಬಂದರೂ ರಾಮಮಂದಿರ ಕಟ್ಟಿಯೇ ಕಟ್ಟುತ್ತೇವೆ, ಏಕೆಂದರೆ ನಮ್ಮ ಪಕ್ಷ ದೃಢನಿರ್ಧಾರ ಮಾಡಿದೆ ಎಂದು ಅವರು ಮುಂದುವರೆದು ಹೇಳಿದರಂತೆ.

ಸುಪ್ರಿಂ ಕೋರ್ಟ್‌ನ ಸಂವಿಧಾನ ಪೀಠ ಈ ಮೊಕದ್ದಮೆಯ ದೈನಂದಿನ ವಿಚಾರಣೆ ನಡೆಸುತ್ತಿರುವ ವೇಳೆಗೆ ಮಂತ್ರಿಯೊಬ್ಬರ ಇಂತಹ ಉದ್ಗಾರ ವಿವಾದ ಸೃಷ್ಟಿಸಿದಾಗ ಈಗ ವಾಡಿಕೆಯಾಗಿರುವಂತೆ "ಸ್ಪಷ್ಟೀಕರಣ'ವೂ ಬಂತು- ನಮ್ಮದು ಎಂದರೆ ಈ ದೇಶದ ನಿವಾಸಿಗಳದ್ದು, ನಮ್ಮ ಸರಕಾರದ್ದು ಎಂದೇನೂ ಹೇಳಿಲ್ಲ!

ಸುಪ್ರಿಂ ಕೋರ್ಟ್ ಮುಖ್ಯ ನ್ಯಾಯಾಧೀಶರು, ನ್ಯಾಯಾಲಯ ಇಂತಹ ಹೇಳಿಕೆಗಳನ್ನು ಖಂಡಿಸುತ್ತದೆ, ಈ ವಿವಾದದ ಎರಡೂ ಪಕ್ಷಗಳ ವಾದಗಳನ್ನು ನ್ಯಾಯಯುತವಾಗಿ, ಮುಕ್ತವಾಗಿ ಕೇಳಲಾಗುವುದು ಎಂದು ಸಪ್ಟಂಬರ್ 12ರಂದು ವಿಚಾರಣೆಯ ವೇಳೆಯಲ್ಲಿ ಹೇಳಿದ್ದಾರೆ.

ಆದರೂ ಮಂತ್ರಿಗಳಂತ ಜವಾಬ್ದಾರಿಯುತ ಸ್ಥಾನಗಳಲ್ಲಿರುವವರೂ ಬಹಿರಂಗವಾಗಿಯೇ ಇಂತಹ ಹೇಳಿಕೆಗಳನ್ನು ನೀಡುವಂತಹ ವಾತಾವರಣ ಸೃಷ್ಟಿಯಾಗಿದೆಯೇ, ಆಗಿದ್ದರೆ ಏಕೆ ಎಂಬ ಪ್ರಶ್ನೆ ಏಳುವುದು ಸಹಜ. ಇಂತಹ ಸಂದರ್ಭದಲ್ಲಿ ಎರಡು ದಿನಗಳ ನಂತರ ಅದೇ ರಾಜ್ಯದಿಂದ ಮಾತಾಡುತ್ತ ಪ್ರಧಾನ ಮಂತ್ರಿಗಳ ಗೋವು ಮತ್ತು ಓಂ ಪದ ಕೇಳಿದರೇ ಕೆಲವರಿಗೆ ವಿದ್ಯುತ್ ಬಡಿದಂತಾಗುತ್ತದೆ ಎಂಬ ಗೇಲಿ ಮಾತು ಮತ್ತು ಇತ್ತೀಚೆಗೆ ಕಾಶ್ಮೀರದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ದಮನವಾಗುತ್ತಿದೆ ಎಂದ ಅರ್ಜಿಯ ಬಗ್ಗೆ "ಕಾದು ನೋಡೋಣ" ಎಂದು ಸುಪ್ರಿಂ ಕೋರ್ಟ್ ಹೇಳಿದ್ದು ನೆನಪಾಗದೇ ಇರದು.

ಕಲ್ಲಿದ್ದಲು ವಲಯದಲ್ಲಿ ವಿದೇಶಿ ನೇರ ಹೂಡಿಕೆ 'ರಾಷ್ಟ್ರವಾದಿ' ಸರಕಾರದ ರಾಷ್ಟ್ರ-ವಿರೋಧಿ ನಡೆ



ಕಲ್ಲಿದ್ದಲು ಗಣಿಗಾರಿಕೆಯನ್ನು ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಮುಕ್ತಗೊಳಿಸುವ ನೀತಿಗೆ ಯಾವುದೇ ವಸ್ತುನಿಷ್ಠ ಕಾರಣಗಳಿಲ್ಲ. ಈ ನೀತಿಯು ಅವಶ್ಯಕತೆಯ ಆಧಾರದ ಮೇಲೆ ನಿರ್ಧರಿಸಿದ್ದಲ್ಲ. ತನ್ನ "ರಾಷ್ಟ್ರವಾದ"ವನ್ನು ಗಂಟಲು ಬಿರಿಯುವಂತೆ ಘೋಷಿಸುವ ಮತ್ತು ಸಣ್ಣ-ಸಣ್ಣ ನೆಪಗಳ ಮೇಲೂ ಜನರಿಗೆ "ರಾಷ್ಟ್ರ-ವಿರೋಧಿ" ಎಂಬ ಹಣೆ ಪಟ್ಟಿ ಹಚ್ಚಿ ಅವರನ್ನು ಹಿಂಸಿಸುವ ಒಂದು ಸರ್ಕಾರವು, ಹಿಂದಿನ ಎಲ್ಲ ನೀತಿಗಳನ್ನು ತಿರುಗು ಮುರುಗು ಮಾಡಿ, ರಾಷ್ಟ್ರದ ಸಂಪನ್ಮೂಲಗಳನ್ನು ವಿದೇಶಿ ಬಹು ರಾಷ್ಟ್ರೀಯ ಕಂಪೆನಿಗಳಿಗೆ ಹಸ್ತಾಂತರಿಸಲು ಅಷ್ಟೊಂದು ಉತ್ಸುಕವಾಗಿರುವುದು ಒಂದು ವಿಡಂಬನೆಯೇ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ತಯಾರಿಕಾ ವಲಯದಲ್ಲಿ ಆಗುವ ವಿದೇಶಿ ನೇರ ಹೂಡಿಕೆಗೂ ಮತ್ತು ಖನಿಜ ಮುಂತಾದ ಬರಿದಾಗುವ ಸಂಪನ್ಮೂಲಗಳ ವಲಯದಲ್ಲಿ ಮಾಡುವ ವಿದೇಶಿ ನೇರ ಹೂಡಿಕೆಗೂ ಇರುವ ಮೂಲಭೂತ ವ್ಯತ್ಯಾಸದ ಬಗ್ಗೆ ಪ್ರಖ್ಯಾತ ಅರ್ಥಶಾಸ್ತ್ರಜ್ಞೆ ಜೋನ್ ರಾಬಿನ್ಸನ್, ಗಮನ ಸೆಳೆದಿದ್ದರು. ಈ ವ್ಯತ್ಯಾಸವನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಬಹುದು.

ತಯಾರಿಕೆ ಮತ್ತು ಗಣಿಗಾರಿಕೆ ಈ ಎರಡೂ ವಲಯಗಳಲ್ಲಿ ಕಾರ್ಯನಿರ್ವಹಿಸುವ ಒಂದು ವಿದೇಶಿ ಕಂಪೆನಿಯು ಪ್ರತಿ ವರ್ಷವೂ 100 ರೂಗಳ ಲಾಭವನ್ನು ಸ್ವದೇಶಕ್ಕೆ ಕಳಿಸುತ್ತದೆ ಎಂದಿಟ್ಟುಕೊಳ್ಳೋಣ; ಗಣಿಯ ಆಯಸ್ಸು 10 ವರ್ಷಗಳು ಎಂದಿಟ್ಟುಕೊಳ್ಳೋಣ. ಹತ್ತು ವರ್ಷಗಳ ನಂತರ, ಈ ಹತ್ತು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷವೂ 100 ರೂಗಳ ಲಾಭವನ್ನು ಸ್ವದೇಶಕ್ಕೆ ಕಳಿಸಿದ ನಂತರವೂ, ಆತಿಥೇಯ ದೇಶದಲ್ಲಿ ತಯಾರಿಕಾ ಘಟಕವು ಯಾವ ಹಾನಿಗೂ ಒಳಗಾಗದೆ ಇದ್ದ ಹಾಗೆಯೇ ಇರುತ್ತದೆ. ಆದರೆ, ಇದ್ದ ಬದ್ದ ಅದಿರನ್ನೆಲ್ಲಾ ಹೊರತೆಗೆದ ಪರಿಣಾಮವಾಗಿ ಗಣಿಯಲ್ಲಿ ಏನೂ ಉಳಿದಿರುವುದಿಲ್ಲ. ಗಣಿ ಸಂಪೂರ್ಣವಾಗಿ ಬರಿದಾಗಿರುತ್ತದೆ.

ತಯಾರಿಕಾ ವಲಯದಲ್ಲಿ ವಿದೇಶಿ ನೇರ ಹೂಡಿಕೆಯನ್ನು ಅನಾಮತ್ತಾಗಿ ಸ್ವಾಗತಿಸಬೇಕು ಎಂಬುದು ಈ ಮಾತಿನ ಅರ್ಥವಲ್ಲ. ಕೆಲವು ಪರಿಸ್ಥಿತಿಗಳಲ್ಲಿ (ಅಂದರೆ, ತಯಾರಿಕೆಯ ಮೂಲಕ ವಿದೇಶಿ ವಿನಿಮಯ ಗಳಿಸುವ ಪರಿಸ್ಥಿತಿಯಲ್ಲಿ) ತಯಾರಿಕಾ ವಲಯದಲ್ಲಿ ವಿದೇಶಿ ನೇರ ಹೂಡಿಕೆಯ ಅಗತ್ಯವಿರುತ್ತದೆ ಎಂಬುದಷ್ಟೇ ಈ ಮಾತಿನ ಅರ್ಥ. ಆದರೆ, ನಮಗೆ ಖನಿಜ ಸಂಪತ್ತನ್ನು ಒದಗಿಸುವ ಗಣಿಗಾರಿಕಾ ವಲಯದಲ್ಲಿ ವಿದೇಶಿ ನೇರ ಹೂಡಿಕೆಯನ್ನು ಯಾವ ಕಾರಣಕ್ಕೂ ಸ್ವಾಗತಿಸುವಂತಿಲ್ಲ.

ಮೇಲಾಗಿ, ಬರಿದಾಗಬಹದಾದ ಸಂಪನ್ಮೂಲಗಳ ಗಣಿಗಾರಿಕೆಯನ್ನು ಸಾರ್ವಜನಿಕ ವಲಯದಲ್ಲೇ ಉಳಿಸಿಕೊಳ್ಳಬೇಕು ಎಂಬ ಅಭಿಪ್ರಾಯವೂ ಈ ಮಾತಿನಲ್ಲಿದೆ. ಈ ಸಂಪನ್ಮೂಲಗಳು ಬರಿದಾಗುವುದು ನಿಶ್ಚಿತ ಎನ್ನುವ ನಿರ್ದಿಷ್ಟ ಕಾರಣದಿಂದಾಗಿಯೇ ಅವುಗಳನ್ನು ಹಿತ-ಮಿತವಾಗಿ ಬಳಸಿಕೊಳ್ಳಬೇಕು ಮಾತ್ರವಲ್ಲ, ಅಂತಹ ಪ್ರತಿ ಹಿಡಿ ಸಂಪನ್ಮೂಲಗಳ ಮಾರಾಟದಿಂದ ಬರುವ ಬಿಡಿ ಕಾಸನ್ನೂ ಸಾಮಾಜಿಕವಾಗಿ ಅಪೇಕ್ಷಣೀಯ ಎಂದು ಪರಿಗಣಿಸಿದ ಉದ್ದೇಶಗಳಿಗೆ ಬಳಸಿಕೊಳ್ಳಬೇಕು. ಇದು ಈಡೇರಬೇಕು ಎಂದಾದರೆ, ಅಂತಹ ಸಂಪನ್ಮೂಲಗಳ ಮೇಲೆ ಸಾಮಾಜಿಕ ನಿಯಂತ್ರಣ ಇರಬೇಕಾಗುತ್ತದೆ. ಹಾಗಾಗಿ, ಇಂತಹ ಸಂಪನ್ಮೂಲಗಳು ಸಾರ್ವಜನಿಕ ವಲಯದಲ್ಲೇ ಉಳಿಯುವುದು ಅವಶ್ಯವಾಗುತ್ತದೆ.

ಕಲ್ಲಿದ್ದಲು ವಲಯದಲ್ಲಿ ವಿದೇಶಿ ನೇರ ಹೂಡಿಕೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಇಂತಹ ಒಂದು ಚಿಂತನೆಯೇ ಬಹಳ ಕಾಲದಿಂದಲೂ ಆದ್ಯತೆ ಪಡೆದಿತ್ತು ಮತ್ತು ಅದು ಸರ್ಕಾರದ ನೀತಿಯೂ ಆಗಿತ್ತು. ಇಂಧನ ಉತ್ಪಾದಿಸುವ, ಸಿಮೆಂಟ್, ಕಬ್ಬಿಣ ಮತ್ತು ಉಕ್ಕು ತಯಾರಿಸುವ ಖಾಸಗಿ ಮತ್ತು ಸಾರ್ವಜನಿಕ ವಲಯದ ಘಟಕಗಳು ತಮಗೆ ಮಾತ್ರ ಬೇಕಾಗುವಷ್ಟು ಕಲ್ಲಿದ್ದಲು ಗಣಿಗಾರಿಕೆ ಮಾಡಲು ಈ ನೀತಿಯನ್ನು ಸಡಿಲಿಸಲಾಗಿತ್ತು ಎಂಬುದು ನಿಜ. ಅವರು ಕಲ್ಲಿದ್ದಲನ್ನು ಬೇರೆಯವರಿಗೆ ಮಾರುವಂತಿರಲಿಲ್ಲ. ಆದರೆ, ಈಗ ಇದೆಲ್ಲಾ ಬದಲಾಗಿದೆ. ಮೋದಿ ಸರ್ಕಾರವು, ಇನ್ನು ಮುಂದೆ ಕಲ್ಲಿದ್ದಲು ಗಣಿಗಾರಿಕೆ ಮಾಡಲು ನೂರಕ್ಕೆ ನೂರರಷ್ಟು ಖಾಸಗಿ ಹೂಡಿಕೆ ಮಾತ್ರವಲ್ಲ, ಅನುಮತಿಯ ಅಗತ್ಯವಿಲ್ಲದೆ (ಆಟೋಮ್ಯಾಟಿಕ್ ಮಾರ್ಗ) ನೂರಕ್ಕೆ ನೂರರಷ್ಟು ವಿದೇಶ ನೇರ ಹೂಡಿಕೆಯನ್ನೂ ಮಾಡಬಹುದು. ಅಂದರೆ, ಈ ವರೆಗೆ ದೇಶದ ಒಟ್ಟು ಉತ್ಪಾದನೆಯ ಶೇ.83 ರಷ್ಟು ಕಲ್ಲಿದ್ದಲು ಹೊರ ತೆಗೆಯುತ್ತಿದ್ದ ಮತ್ತು ಗಣಿಗಾರಿಕೆಯಲ್ಲಿ ಏಕಸ್ವಾಮ್ಯತೆ ಹೊಂದಿದ್ದ ಸಾರ್ವಜನಿಕ ವಲಯದ ಕೋಲ್ ಇಂಡಿಯಾದ ಆಧಿಪತ್ಯ ಕೊನೆಗೊಳ್ಳುತ್ತದೆ.

ಈ ಕೃತ್ಯವನ್ನು ಸಮರ್ಥಿಸಿಕೊಳ್ಳಲು ಎಲ್ಲ ರೀತಿಯ ಕಪಟ ವಾದಗಳನ್ನು ಮಂಡಿಸಲಾಗುತ್ತಿದೆ. ಎಲ್ಲಕ್ಕಿಂತ ಮುಖ್ಯವಾಗಿ, ಇಂತಹ ವಾದಗಳು ಎಷ್ಟು ನಗೆಪಾಟಲಿನ ಅಂಶಗಳಿಂದ ಕೂಡಿವೆ ಎಂಬುದಕ್ಕೆ ಒಂದು ಉದಾಹರಣೆ: "ನಾವು 5 ಟ್ರಿಲಿಯನ್ ಡಾಲರ್ ಗಾತ್ರದ ಅರ್ಥವ್ಯವಸ್ಥೆಯ ಗುರಿ ಮುಟ್ಟಲು ಈ ಕ್ರಮ ಸಹಾಯವಾಗುತ್ತದೆ" ಎಂಬುದು. ಇದ್ದಕ್ಕಿದ್ದಂತೆಯೇ ನಿರ್ಧರಿಸಿದ ಒಂದು ಗುರಿಯನ್ನು– ಅದು ಸಾಧ್ಯವೋ ಇಲ್ಲವೋ ಎಂಬುದನ್ನು ಲೆಕ್ಕಿಸದೆ "ಹೇಗಾದರೂ ಸರಿ" ಸಾಧಿಸುತ್ತೇವೆ ಎನ್ನುವ ಹಠ ಸಾಧನೆಗೆ "ಹೇಗಾದರೂ ಸರಿ" ಕ್ರಮಗಳು ಸಮರ್ಥನೀಯವೇ ಅಲ್ಲ.

ಇದು, ಕಲ್ಲಿದ್ದಲು ವಲಯದಲ್ಲಿ "ಸ್ಪರ್ಧಾತ್ಮಕತೆ" ಹೆಚ್ಚಿಸುತ್ತದೆ ಎಂಬುದು ಮತ್ತೊಂದು ಹುಸಿ ವಾದ. ಈ ವಲಯದಲ್ಲಿ "ಸ್ಪರ್ಧಾತ್ಮಕತೆ" ಇಲ್ಲದ್ದು ದೇಶದ ಜನತೆಯ ಮೇಲೆ ಯಾವ ರೀತಿಯ ಅಡ್ಡ ಪರಿಣಾಮ ಬೀರಿತ್ತು ಎಂಬುದನ್ನು ಈ ವಾದ ಮಂಡಿಸುವವರು ವಿವರಿಸುವುದೇ ಇಲ್ಲ. ಕೋಲ್ ಇಂಡಿಯಾ ಹೇಳಿ ಕೇಳಿ ಒಂದು ಸಾರ್ವಜನಿಕ ವಲಯದ ಕಂಪೆನಿ: ತನ್ನನ್ನು ಬಿಟ್ಟರೆ ಬೇರೆ ಯಾರೂ ಇಲ್ಲ ಎನ್ನು ಪರಿಸ್ಥಿತಿಯಲ್ಲಿಯೂ ಅದು ಬೆಲೆಗಳನ್ನು ವಿಪರೀತವಾಗಿ ಏರಿಸಲಿಲ್ಲ. ಹಾಗಾಗಿ, "ಸ್ಪರ್ಧಾತ್ಮಕತೆ" ಹೆಚ್ಚಿಸಬೇಕು ಎಂಬುದರ ಅರ್ಥವೇನು?

ಕಲ್ಲಿದ್ದಲು ವಲಯದಲ್ಲಿ ವಿದೇಶಿ ನೇರ ಹೂಡಿಕೆಯ ಸಮರ್ಥನೆಯಾಗಿ ಮುಂದಿಡುವ ಕಪಟ ವಾದಗಳಲ್ಲಿ ಮೂರನೆಯದು, "ದಕ್ಷತೆ" ಹೆಚ್ಚಿಸುತ್ತದೆ ಎಂಬುದು. ಅದರೆ, ಕಲ್ಲಿದ್ದಲು ಹೊರ ತೆಗೆಯುವ "ದಕ್ಷತೆ"ಯನ್ನು ಅಳೆಯುವ ಯಾವುದೇ ಒಂದು ಸೂಚ್ಯಂಕ ಅಥವಾ ಮಾಪನ ಇಲ್ಲದಿರುವಾಗ, ಕಲ್ಲಿದ್ದಲು ವಲಯದಲ್ಲಿ "ದಕ್ಷತೆ" ಇಲ್ಲ ಎಂಬುದನ್ನು ಹೇಗೆ ತೀರ್ಮಾನಿಸಲಾಗಿದೆ? ಪ್ರತಿ ಯೂನಿಟ್ ಕಲ್ಲಿದ್ದಲು ಉತ್ಪಾದನೆಗೆ ಎಷ್ಟು ಖರ್ಚು ಬರುತ್ತದೆ ಎಂಬ ಒಂದು ಅಸ್ಪಷ್ಟ ಉಲ್ಲೇಖವನ್ನು ಮಾತ್ರ ಮಾಡಲಾಗಿದೆ. ಅಲ್ಲದೆ, ಉತ್ಪಾದನಾ ವೆಚ್ಚ ಕಡಿಮೆ ಇದೆ ಎಂದ ಮಾತ್ರಕ್ಕೆ ಅಲ್ಲಿ "ದಕ್ಷತೆ" ಇದೆ ಎಂದೇನೂ ಅಲ್ಲ. ಕಲ್ಲಿದ್ದಲು ವಲಯದ ಉತ್ಪಾದನೆಯ ಒಟ್ಟು ವೆಚ್ಚದಲ್ಲಿ, ವಾಸ್ತವವಾಗಿ, ಕೂಲಿಯ ಅಂಶವೇ ಬಹು ದೊಡ್ಡ ಭಾಗವಾಗಿರುವಾಗ, ಖಾಸಗಿ ವಲಯದ ಉತ್ಪಾದನೆಯಲ್ಲಿ ಉತ್ಪಾದನಾ ವೆಚ್ಚ ಕಡಿಮೆಯಾಗಿರುವುದು ಕಂಡುಬಂದರೆ ಅದಕ್ಕೆ ಎರಡು ಕಾರಣಗಳಿರುತ್ತವೆ: ಮೊದಲನೆಯದು ಕಡಿಮೆ ಕೂಲಿ, ಅದೆಷ್ಟು ಕಡಿಮೆ ಎಂದರೆ ಕೋಲ್ ಇಂಡಿಯಾ ಅದೇ ಕೆಲಕ್ಕೆ ಕೊಡುವ ಕೂಲಿಯ ಮೂರನೆಯ ಒಂದರಷ್ಟು. ಎರಡನೆಯದು ಗಣಿಗಾರರ ಸುರಕ್ಷತೆಯ ಬಗೆಗಿನ ಅತಿ ಕಡಿಮೆ ಕಾಳಜಿ.

ಈ ಸಂದರ್ಭದಲ್ಲಿ ಒಂದು ವಾಸ್ತವಾಂಶವನ್ನು ಹೇಳುವುದಾದರೆ, ಗಣಿಗಾರರಿಗೆ ಸುರಕ್ಷತೆ ಒದಗಿಸಿರುವಲ್ಲಿ ಕೋಲ್ ಇಂಡಿಯಾ ಸಾಧಿಸಿರುವ ದಾಖಲೆಯನ್ನು ಚೀನಾ ದೇಶವೂ ಸೇರಿದಂತೆ ಹಲವಾರು ದೇಶಗಳು ಸರಿಗಟ್ಟಲಾಗಿಲ್ಲ. ಆದರೂ, ನಮ್ಮ ಈ ಸುರಕ್ಷತಾ ದಾಖಲೆ ಇನ್ನೂ ಉತ್ತಮಗೊಳ್ಳಬೇಕು. ಹೆಚ್ಚು ಕಲ್ಲಿದ್ದಲು ಉತ್ಪಾದಿಸುವ ಮತ್ತು ಕಲ್ಲಿದ್ದಲು ಗಣಿಗಾರಿಕೆಯನ್ನು ಖಾಸಗೀಕರಣಗೊಳಿಸಿರುವ ಚೀನಾ ಮತ್ತು ಇಂಡೊನೇಷಿಯಾ ಈ ಎರಡೂ ದೇಶಗಳೂ ಪ್ರತಿ ದಶಲಕ್ಷ ಟನ್ ಉತ್ಪಾದಿಸುವಾಗ ಗಣಿಗಳಲ್ಲಿ ದುರ್ಮರಣಕ್ಕೀಡಾಗುವವರ ಸರಾಸರಿ ದರಕ್ಕಿಂತ ಅತಿ ಕಡಿಮೆಯ ಸರಾಸರಿ ದರ ಭಾರತದಲ್ಲಿದೆ. ಮನುಷ್ಯರನ್ನು ಬಲಿಕೊಟ್ಟು "ಉತ್ಪಾದನಾ ವೆಚ್ಚ ತಗ್ಗಿಸುವ" ಸಾಧನೆಯ ಗುರಿಯನ್ನು ನಾವು ಹೊಂದಬಾರದು."

ಈ ಎಲ್ಲ ಅಂಶಗಳೂ ಪ್ರಧಾನವಾಗಿ ಉಲ್ಲೇಖಿಸಲಾಗುತ್ತಿರುವ ಎರಡು ವಾದಗಳತ್ತ ನಮ್ಮನ್ನು ಕೊಂಡೊಯ್ಯುತ್ತವೆ. ಮೊದಲನೆಯದು, ಕಲ್ಲಿದ್ದಲು ವಲಯದಲ್ಲಿ ವಿದೇಶಿ ನೇರ ಹೂಡಿಕೆಯು ಭಾರತದ ಕಲ್ಲಿದ್ದಲು ಗಣಿಗಾರಿಕಾ ವಲಯಕ್ಕೆ ಉತ್ತಮ ತಂತ್ರಜ್ಞಾನವನ್ನು ತರುತ್ತದೆ ಎಂಬುದು. ಈ ವಾದವನ್ನು ಒಪ್ಪಿಕೊಂಡರೂ ಸಹ, ಉತ್ತಮ ತಂತ್ರಜ್ಞಾನವನ್ನು ಪಡೆದುಕೊಳ್ಳುವ ಮೂಲಕ ಕೋಲ್ ಇಂಡಿಯಾದ ಗಣಿಗಾರಿಕೆಯ ತಾಂತ್ರಿಕತೆಯನ್ನೇ ಏಕೆ ಉನ್ನತೀಕರಿಸಲಿಲ್ಲ ಎಂಬ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಮತ್ತು, ಕಲ್ಲಿದ್ದಲು ಗಣಿಗಾರಿಕೆಯಲ್ಲಿ ಅನುಮತಿಯ ಅಗತ್ಯವಿಲ್ಲದೆ ನೂರಕ್ಕೆ ನೂರರಷ್ಟು ವಿದೇಶ ನೇರ ಹೂಡಿಕೆಗೆ ಅನುವು ಮಾಡಿಕೊಡುವ ಅಗತ್ಯವೇನಿತ್ತು ಎಂಬ ಪ್ರಶ್ನೆಯನ್ನೂ ಕೇಳಬೇಕಾಗುತ್ತದೆ. ವಾಸ್ತವವಾಗಿ, ನೂರಕ್ಕೆ ನೂರರಷ್ಟು ವಿದೇಶ ನೇರ ಹೂಡಿಕೆಗೆ ಅನುವು ಮಾಡಿಕೊಟ್ಟಿರುವ ತೀರ್ಮಾನವನ್ನು ಬಿಟ್ಟರೆ, ಉತ್ತಮ ತಂತ್ರಜ್ಞಾನವನ್ನು ಪಡೆದುಕೊಳ್ಳಲು ಸರ್ಕಾರವು ಯಾವತ್ತಾದರೂ ಯಾವುದೇ ಗಂಭೀರ ಪ್ರಯತ್ನ ಮಾಡಿತ್ತೇ ಎನ್ನುವ ಬಗ್ಗೆ ಯಾವ ಪುರಾವೆಯೂ ಇಲ್ಲ.

ಪದೇ ಪದೇ ಹೇಳುವ ಎರಡನೆಯ ವಾದವೆಂದರೆ, ಕಲ್ಲಿದ್ದಲಿನ ಆಂತರಿಕ (ದೇಶೀಯ) ಉತ್ಪಾದನೆಯು ನಮ್ಮ ಬಳಕೆಗೆ ಸಾಲುತ್ತಿಲ್ಲ ಎಂಬ ಕಾರಣದ ಮೇಲೆ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಲಾಗುತ್ತಿದೆ ಮತ್ತು ಆಮದಿನ ಪ್ರಮಾಣವೂ ದಿನೇ ದಿನೇ ಹೆಚ್ಚುತ್ತಿದೆ. ಆದ್ದರಿಂದ, ನಮ್ಮ ಆಂತರಿಕ ಉತ್ಪಾದನೆಯನ್ನು ವೇಗವಾಗಿ ಹೆಚ್ಚಿಸಿಕೊಳ್ಳುವ ಸಲುವಾಗಿ ಕಲ್ಲಿದ್ದಲು ಗಣಿಗಾರಿಕೆಯಲ್ಲಿ ವಿದೇಶಿ ಕಂಪೆನಿಗಳೂ ಸೇರಿದಂತೆ ಖಾಸಗಿಯವರನ್ನು ತೊಡಗಿಸಿಕೊಳ್ಳಬೇಕಾಗುತ್ತದೆ. ಈ ವಾದದಲ್ಲಿರುವ ಒಂದು ಲೋಪವೆಂದರೆ, ನಮಗೆ ಬೇಕಾದಷ್ಟು ಕಲ್ಲಿದ್ದಲನ್ನು ಹೊರ ತೆಗೆಯುವುದು ಕೋಲ್ ಇಂಡಿಯಾಗೆ ಆಗುವುದಿಲ್ಲವೇ ಎಂಬುದನ್ನು ಅವರು ವಿವರಿಸುವುದೇ ಇಲ್ಲ. 2018–19ರಲ್ಲಿ 40 ದಶ ಲಕ್ಷ ಟನ್‌ಗಳಷ್ಟು ಕಲ್ಲಿದ್ದಲನ್ನು ಕೋಲ್ ಇಂಡಿಯಾ ಅಧಿಕವಾಗಿ ಉತ್ಪಾದಿಸಿದ ದಾಖಲೆ ಇದೆ. ಅಷ್ಟು ಉತ್ತಮವಾಗಿ ತನ್ನ ದಕ್ಷತೆಯನ್ನು ಪ್ರದರ್ಶಿಸಿರುವ ಸಂಸ್ಥೆಯನ್ನು, ಮುಂಬರುವ ವರ್ಷಗಳಲ್ಲಿ ಆಮದುಗಳನ್ನು ಸಂಪೂರ್ಣವಾಗಿ ಕೈಬಿಡುವಷ್ಟು ಪ್ರಮಾಣದ ಕಲ್ಲಿದ್ದಲನ್ನು ಉತ್ಪಾದಿಸುವಂತೆ ಮಾಡಬಹುದಿತ್ತಲ್ಲವೇ ಎಂಬುದನ್ನು ಅವರು ವಿವರಿಸುವುದೇ ಇಲ್ಲ.

ಕರೆಯುವ ಹಸುವನ್ನು ಹೆಚ್ಚು ಹಿಂಡಬಾರದು ಎನ್ನುವ ಮಾತಿನಂತೆ ಕೋಲ್ ಇಂಡಿಯಾದ ಮೇಲೆ "ಅತಿಯಾದ ಅಪೇಕ್ಷೆ" ಇಡುವುದು ತರವಲ್ಲ ಎಂಬುದಾಗಿ ಸೂಚಿಸಲಾಗುತ್ತಿದೆ. ಈ ಸೂಚನೆಯ ಅರ್ಥ ಏನೆಂಬುದೂ ಸಹ ಸ್ಪಷ್ಟವಾಗುತ್ತಿಲ್ಲ. ತಮ್ಮ ಉತ್ಪಾದನೆಗಳಿಗೆ ಸಾಕಷ್ಟು ಬೇಡಿಕೆ ಇದೆ ಎಂದು ಗೊತ್ತಾದ ಕೂಡಲೇ ಅದನ್ನು ಪೂರೈಸಲು ಬೇಕಾಗುವ ಚಾಕಚಕ್ಯತೆ ಅಥವಾ ಛಾತಿಯನ್ನು ದೊಡ್ಡ ದೊಡ್ಡ ಕಂಪೆನಿಗಳು ಹೊಂದಿವೆ ಎಂಬುದು ಸಾಮಾನ್ಯ ಜ್ಞಾನ. ಅಂತಹ ಚಾಕಚಕ್ಯತೆ–ಛಾತಿ ಕೋಲ್ ಇಂಡಿಯಾಗಿಲ್ಲವೇ ಎಂಬುದು ಬುದ್ಧಿಗೆ ನಿಲುಕದ ಆಶ್ಚರ್ಯವೇ. ಕೋಲ್ ಇಂಡಿಯಾ ಅಧಿಕವಾಗಿ ಉತ್ಪಾದಿಸುವ ಹೊರೆ ಹೊರುವಲ್ಲಿ ಒಂದು ವೇಳೆ ಅಕಸ್ಮಾತ್ತಾಗಿ ಕೆಲವು ತೊಡರುಗಳು ಎದುರಾಗಿವೆ ಎಂದುಕೊಂಡರೂ, ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳನ್ನು ಆಹ್ವಾನಿಸುವುದರ ಬದಲಾಗಿ, ಕೋಲ್ ಇಂಡಿಯಾದಂತಹ ಇನ್ನೊಂದು ಸಾರ್ವಜನಿಕ ಸಂಸ್ಥೆಯನ್ನು ಸರ್ಕಾರ ಸ್ಥಾಪಿಸಬಹುದಿತ್ತು.

ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳನ್ನು ಆಹ್ವಾನಿಸುವ ಮೂಲಕ ನಮ್ಮ ಕಲ್ಲಿದ್ದಲಿನ ಆಂತರಿಕ ಉತ್ಪಾದನೆಯನ್ನು ಹೆಚ್ಚಿಸಿಕೊಂಡು "ಅಮೂಲ್ಯ ವಿದೇಶಿ ವಿನಿಮಯ"ವನ್ನು ಉಳಿಸಿಕೊಳ್ಳಬಹುದು ಎಂಬ ಅಂಶವನ್ನು ಈ ಸನ್ನಿವೇಶದಲ್ಲಿ ಸ್ವಲ್ಪ ಅತಿಯಾಗಿಯೇ ಪ್ರಸ್ತಾಪಿಸಲಾಗುತ್ತಿದೆ. ಆದರೆ, ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳು ಗಳಿಸಿದ ಲಾಭವನ್ನು ತಮ್ಮ ದೇಶಗಳಿಗೆ ಕಳಿಸುವುದರಿಂದ ಸಾಕಷ್ಟು "ಅಮೂಲ್ಯ ವಿದೇಶಿ ವಿನಿಮಯ" ಹೊರ ಹೋಗುತ್ತದೆ ಎಂಬ ಅಂಶವನ್ನು ಈ ಮಂದಿ ಗಮನಿಸುವುದೇ ಇಲ್ಲ.

ಕೋಲ್ ಇಂಡಿಯಾಗೆ "ಅತಿಯಾದ ಹೊರೆ"ಯಾಗುತ್ತದೆ ಎಂಬ ಕಾರಣದ ಮೇಲೆ ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳನ್ನು ಆಹ್ವಾನಿಸಬೇಕು ಎಂದು ಸೂಚಿಸುವವರು, ತತ್‌ಕ್ಷಣದಲ್ಲೇ, ಭೂ ಸ್ವಾಧೀನದ ಸಮಸ್ಯೆಗಳು, ಕಲ್ಲಿದ್ದಲಿನ ಬೆಲೆ ನಿಗದಿ ಮತ್ತು ಕಲ್ಲಿದ್ದಲು ಗಣಿ ತುಂಡು–ಪ್ರದೇಶಗಳ(ಬ್ಲಾಕ್) ಗುತ್ತಿಗೆ ಹರಾಜು ಮುಂತಾದ ಸಮಸ್ಯೆಗಳಿಂದಾಗಿ ಬಹುರಾಷ್ಟ್ರೀಯ ಕಂಪೆನಿಗಳು ಅಷ್ಟು ಸಲೀಸಾಗಿ ಇಲ್ಲಿಗೆ ಬರುವುದಿಲ್ಲ ಎಂದು ಹೇಳುವುದು ವಿಡಂಬನಾತ್ಮಕವಾಗಿ ತೋರುತ್ತದೆ. ಇವರು ವಾಸ್ತವವಾಗಿ ಸೂಚಿಸುವುದು ಏನೆಂದರೆ, ಬಹುರಾಷ್ಟ್ರೀಯ ಕಂಪೆನಿಗಳು ಇಲ್ಲಿಗೆ ಬರುವುದನ್ನು ಸುಗಮಗೊಳಿಸಲು ಈ ಎಲ್ಲಾ ನಿರ್ಬಂಧಗಳನ್ನು ತೆಗೆದುಹಾಕಬೇಕು ಎಂಬುದೇ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಕಲ್ಲಿದ್ದಲು ಉತ್ಪಾದಿಸಲು ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳು ಇಲ್ಲಿಗೆ ಬರಬೇಕು ಮಾತ್ರವಲ್ಲ, ರತ್ನಗಂಬಳಿ ಹಾಸಿ ಅವರನ್ನು ಬರಮಾಡಿಕೊಳ್ಳಬೇಕು. ಅಷ್ಟೇ ಅಲ್ಲ, ದೇಶದ ನೀತಿಗಳು ಅವರ ಬೇಡಿಕೆಗೆ ಅಡಿಯಾಳಾಗಿ ಬದಲಾಗಬೇಕು. ಇದೆಲ್ಲವೂ ಕೋಲ್ ಇಂಡಿಯಾ "ಅತಿಯಾದ ಹೊರೆ" ಹೊರಲಾರದು ಎಂಬ ಅಸ್ಪಷ್ಟ ಕಾರಣದ ಮೇಲೆ ನಡೆಯುತ್ತಿದೆ.

ಕಲ್ಲಿದ್ದಲು ಗಣಿಗಾರಿಕೆಯನ್ನು ವಿದೇಶಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಮುಕ್ತಗೊಳಿಸುವ ನೀತಿಗೆ ಯಾವುದೇ ವಸ್ತುನಿಷ್ಠ ಕಾರಣಗಳಿಲ್ಲ ಎಂಬ ಅಭಿಪ್ರಾಯಕ್ಕೆ ಬರುವುದು ಅನಿವಾರ್ಯವಾಗುತ್ತದೆ. ಈ ನೀತಿಯು ಅವಶ್ಯಕತೆಯ ಆಧಾರದ ಮೇಲೆ ನಿರ್ಧರಿಸಿದ್ದಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ಇಡೀ ಪ್ರಕ್ರಿಯೆಯಲ್ಲಿ ಕಲ್ಲಿದ್ದಲಿನ ಬೆಲೆ ಏರಬಹುದು ಮತ್ತು ಗುಡ್ಡಗಾಡು ಜನತೆಯನ್ನು ಅಪಾರ ಕಷ್ಟ ನಷ್ಟಗಳಿಗೆ ಈಡು ಮಾಡಿ (ಭೂಸ್ವಾಧೀನವನ್ನು ಸುಗಮಗೊಳಿಸುವುದು ಎಂಬುದರ ಅರ್ಥ ಇದೇ ಆಗಿದೆ) ಬಂಡವಾಳದ ಆದಿಮ ಶೇಖರಣೆಯಾಗಬಹುದು. ಆದರೂ, ವಿದೇಶಿ ಬಂಡವಾಳಕ್ಕೆ ವಸ್ತುತಃ ಅವಕಾಶ ನೀಡುವುದು ಅಪೇಕ್ಷಣೀಯ ಎನ್ನುವುದೇ ಈ ಇಡೀ ನೀತಿಯ ಉದ್ದೇಶ.

ತನ್ನ "ರಾಷ್ಟ್ರವಾದ"ವನ್ನು ಗಂಟಲು ಬಿರಿಯುವಂತೆ ಘೋಷಿಸುವ ಮತ್ತು ಸಣ್ಣ-ಸಣ್ಣ ನೆಪಗಳ ಮೇಲೂ ಜನರಿಗೆ "ರಾಷ್ಟ್ರ-ವಿರೋಧಿ" ಎಂಬ ಹಣೆ ಪಟ್ಟಿ ಹಚ್ಚಿ ಅವರನ್ನು ಹಿಂಸಿಸುವ ಒಂದು ಸರ್ಕಾರವು, ಹಿಂದಿನ ಎಲ್ಲ ನೀತಿಗಳನ್ನು ತಿರುಗು ಮುರುಗು ಮಾಡಿ, ರಾಷ್ಟ್ರದ ಸಂಪನ್ಮೂಲಗಳನ್ನು ವಿದೇಶಿ ಬಹು ರಾಷ್ಟ್ರೀಯ ಕಂಪೆನಿಗಳಿಗೆ ಹಸ್ತಾಂತರಿಸಲು ಅಷ್ಟೊಂದು ಉತ್ಸುಕವಾಗಿರುವುದು ಒಂದು ವಿಡಂಬನೆಯೇ.

ಹರಪನಹಳ್ಳಿಯಲ್ಲಿ ಬಂಡಾಯ ಸಾಹಿತ್ಯ ವಿಚಾರ ಸಂಕಿರಣ.............. ಪುಟ 16 ರಿಂದ

ನಾಸ್ತಿಕವಾದಿಯಾದ ಗೋರಾನ ವಿಚಾರಧಾರೆಯನ್ನು ಗಾಂಧೀಜಿ ಒಪ್ಪಿಕೊಂಡಿದ್ದರು. ತನ್ನ ರಾಜಕೀಯ ಎದುರಾಳಿಯಾದ ಲೋಹಿಯಾರವರನ್ನು, ನೆಹರು ಗೌರವಿಸುತ್ತಿದ್ದರು. ಲೋಹಿಯಾ ಇಲ್ಲದ ಲೋಕಸಭೆ ಅಪೂರ್ಣವಾಗಿದೆ ಎಂದು ನೆಹರೂ ಹೇಳಿದ ಮಾತುಗಳು ಅರ್ಥಪೂರ್ಣವಾಗಿವೆ. ಇದೇ ನಿಜವಾದ ಪ್ರಜಾಪ್ರಭುತ್ವದ ಸೌಂದರ್ಯವಾಗಿದೆ. ಆದರೆ ಮೋದಿ ಸರ್ಕಾರ ಇಂದು ಭಿನ್ನಮತವನ್ನು ಸಂಪೂರ್ಣ ನಾಶಮಾಡಲು ಹೊರಟಿದೆ. ದಮನಕಾರಿ ನೀತಿಯನ್ನು ಅನುಸರಿಸುತ್ತಿದೆ. ಇಂದು ಅಘೋಷಿತ ತುರ್ತುಪರಿಸ್ಥಿತಿಯಲ್ಲಿ ನಾವಿದ್ದೇವೆ ' ಎಂದರು.

'ಪಂಚೇಂದ್ರಿಯ ವಂಚಿತ ಪ್ರಜಾಪ್ರಭುತ್ವದಲ್ಲಿ ನಾವು ಬದುಕುತ್ತಿದ್ದೇವೆ. ನಮ್ಮ ದೃಷ್ಠಿ, ಆಲೋಚನೆ, ಸ್ಪರ್ಶಗಳೆಲ್ಲವನ್ನೂ ಬೇರೆಯವರು ನಿರ್ಧರಿಸುತ್ತಿದ್ದಾರೆ. ದೇಶದಲ್ಲಿ 1,78,286 ಜನ ಕೈಯಲ್ಲಿ ಮಲ ಎತ್ತುತ್ತಿದ್ದಾರೆ. ಅವರನ್ನು ನಾವು ಮುಟ್ಟುತ್ತಿಲ್ಲ. ಇದು ಸ್ವಚ್ಛ ಭಾರತದ ವ್ಯಂಗ್ಯವಾಗಿದೆ. ವೈವಿಧ್ಯತೆಯನ್ನು ಕಾಯ್ದುಕೊಳ್ಳುವುದೇ ನಿಜವಾದ ರಾಷ್ಟ್ರವಾಗಿದೆ. ಆದರೆ ಧಾರ್ಮಿಕ ಮೂಲಭೂತವಾದವನ್ನೇ ರಾಷ್ಟ್ರವಾದ ಎಂದು ಅಪವ್ಯಖ್ಯಾನ ಮಾಡಲಾಗುತ್ತಿದೆ. ಆರ್ಥಿಕ ಖಾಸಗೀಕರಣ ಧರ್ಮದ ಬೀದೀಕರಣ ನಡೆದಿದೆ. ನಕಲಿ ದೇವರು ಹುಟ್ಟಿಕೊಂಡಿದ್ದಾರೆ. ಮೂಲದೇವರು ಶೋಷಿತನಾಗಿದ್ದಾನೆ. ಮೂಲದೇವರು ಧ್ವನಿಯಿಲ್ಲದವನಾಗಿದ್ದಾನೆ. ಪರಧರ್ಮ, ಪರ ವಿಚಾರವನ್ನುಸಹಿಸಿಕೊಳ್ಳುವುದೇ ಕಸವರಂ(ಬಂಗಾರ) ಎಂದು ಪ್ರತಿಪಾದಿಸಿರುವ ನಮ್ಮ ಪರಂಪರೆಯನ್ನು ನಾವು ಜತನದಿಂದ ಕಾಪಾಡಿಕೊಳ್ಳಬೇಕು. ಮೆಕ್ಕಾ, ಜೆರುಸಲೇಂ, ಕಾಶಿಯಲ್ಲಿ ದೇವರು ಕಾಣಲಿಲ್ಲ. ಹೃದಯವನ್ನು ನೋಡಿಕೊಂಡಾಗ ದೇವರು ಕಂಡನು ಎಂಬ ಜಲಾಲುದ್ದೀನ್‌ನ ಮಾತುಗಳನ್ನು ಉದ್ಧರಿಸಿದ ಅವರು ಗೋಡ್ಸೆ–ಗಾಂಧಿ, ಬಿನ್‌ಲಾಡೆನ್–ಪೈಗಂಬರ್, ಬೆನ್ನಿಹಿನ್, ಮದರ್‌ಥೆರೆಸಾ ಇವರಲ್ಲಿ ಯಾರನ್ನು ಆಯ್ಕೆ ಮಾಡಿಕೊಳ್ಳುತ್ತೀರಿ. ಆಯಾ ಧರ್ಮದವರು ಈ ಬಗ್ಗೆ ಯೋಚಿಸಬೇಕು' ಎಂದರು.

'ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಗುಂಪು ಹಲ್ಲೆಗಳು ನಡೆದಿವೆ. ಬಂದೂಕು ಬಾಯಿಗಳು–ಬಾಯಿ ಬಂದೂಕುಗಳು ಸದ್ದು ಮಾಡುತ್ತಿವೆ. ಕುತಂತ್ರವೇ ಕಾರ್ಯತಂತ್ರಗಳಾಗಿವೆ. ಇಂತಹ ಸಂದರ್ಭದಲ್ಲಿ ನಮ್ಮ ಕಾರ್ಯತಂತ್ರಗಳು ಏನು? ಸಾಂಸ್ಕೃತಿಕ ಕ್ಷೇತ್ರಕ್ಕೆ ಮಾತ್ರ ಸ್ವತಂತ್ರ ಅಭಿವ್ಯಕ್ತಿಯನ್ನು ರೂಪಿಸಯವ ಶಕ್ತಿ ಇದೆ. 1979ರ ಸ್ಥಿತಿಯನ್ನು ಇಂದು ಬಂಡಾಯ ಸಾಹಿತ್ಯ ನಿರ್ಮಾಣ ಮಾಡಬೇಕು. ವಿಶಾಲ ವ್ಯಾಪ್ತಿಯ ಪ್ರಜಾಪ್ರಭುತ್ವ ವೇದಿಕೆ ನಿರ್ಮಾಣವಾಗಬೇಕು. ಎಡ–ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗೂಡಬೇಕು' ಎಂದು ಕರೆ ನೀಡಿದ ಬರಗೂರರು ಅಬ್ರಹಾಂ ಲಿಂಕನ್ ಹೇಳಿದ ತೋಳ ಮತ್ತು ಕುರಿ ಕಥೆಯನ್ನು ಉಲ್ಲೇಖಿಸಿ, ತೋಳದ ತಿನ್ನುವ ಸ್ವಾತಂತ್ರ್ಯಬೇಕೆ? ಕುರಿಯ ಬದುಕುವ ಸ್ವಾತಂತ್ರ್ಯ ಬೇಕೆ?' ಎಂಬ ಪ್ರಶ್ನೆಯನ್ನು ಸಭಿಕರ ಮುಂದಿಟ್ಟರು.

ಸಭೆಯ ಅಧ್ಯಕ್ಷತೆ ವಹಿಸಿ, ಮಾತನಾಡಿದ ಚಿಂತಕ ಡಾ.ರಾಜಪ್ಪ ದಳವಾಯಿಯವರು ಸತ್ಯ ಯಾವುದು, ಸುಳ್ಳು ಯಾವುದು ಎಂದು ತಿಳಿಯದೇ ಮರುಳಾದೆ ಎಂಬ ಪಂಪನ ಮಾತುಗಳನ್ನು ಉಲ್ಲೇಖಿಸಿ, ಪಂಪನ ಕಾಲದ ಸ್ಥಿತಿ ಇಂದಿಗೂ ಇದೆ ಎಂದರು. ಸಂವಿಧಾನ ಬೇಡವೆನ್ನುವವರಿಗೆ ತಮ್ಮದೇ ಆದ ಸಂವಿಧಾನ(ಮನುಸ್ಮೃತಿ)ವೊಂದಿದೆ. ಹಾವನೂರು ಕಮಿಷನ್ ವರದಿಯನ್ನು ತಿರುಚಲಿಕ್ಕೆ ಏನೆಲ್ಲಾ ಕುತಂತ್ರಗಳು ನಡೆದವು. ಅದಾನಿ, ಅಂಬಾನಿಗಳಿಗಿರುವ ಬೆಲೆ ದುಡಿಯುವ ಜನರ ಭಾವನೆಗೆ ಇಲ್ಲವಾಗಿದೆ. ಪರಂಪರೆಯ ತಿಳುವಳಿಕೆಯನ್ನು ಜತನದಿಂದ ಕಾಪಾಡಿಕೊಳ್ಳೋಣ. ಹಿಂದುಳಿದ ವರ್ಗಗಳು ಎಚ್ಚೆತ್ತುಕೊಳ್ಳಬೇಕು. ಜಾತಿಯ ಕೆಳಚಲನೆ, ಮಾನವೀಯ ವಿವೇಕ ಅಗತ್ಯವಾಗಿದೆ ಎಂದರು. ವೇದಿಕೆಯಲ್ಲಿ ಹೊಸಳ್ಳಿ ಮಲ್ಲೇಶ್, ಎಂ.ಪಿ.ವೀಣಾ, ಉಪಸ್ಥಿತರಿದ್ದರು. ಪ್ರೊ॥ಎಂ ತಿಮ್ಮಪ್ಪ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅಂಜಿನಪ್ಪ ಸ್ವಾಗತಿಸಿದರು. ಶಿಕಾರಿ ಬಾಲಪ್ಪ ಕಾರ್ಯಕ್ರಮವನ್ನು ನಿರ್ವಹಿಸಿದರು ಮಾದಿಹಳ್ಳಿ ಮಂಜುನಾಥ ವಂದಿಸಿದರು. ಭಾರತೀಯ ಜನಕಲಾ ಸಮಿತಿಯ ಅಂಜಿನಪ್ಪ ಲೋಕೆಕೆರೆ, ಐರಣಿ ಚಂದ್ರು, ಎ.ಡಿ.ದ್ವಾರಕೇಶ್ ಜಾಗೃತಿ ಗೀತೆಗಳನ್ನು ಹಾಡುವ ಮೂಲಕ ಕಾರ್ಯಕ್ರಮಕ್ಕೆ ಮೆರಗು ನೀಡಿದರು.

ಗೋಷ್ಠಿ–1

'ಚಳುವಳಿಗಳು ಅಂದು–ಇಂದು–ನಾಳೆ' ವಿಷಯ ಕುರಿತು ಕುವೆಂಪು ಅಧ್ಯಯನ ಕೇಂದ್ರ ಕುಪ್ಪಳ್ಳಿ–ನಿರ್ದೇಶಕರಾದ ಡಾ.ಬಿ.ಎಂ.ಪುಟ್ಟಯ್ಯ ಮಾತನಾಡಿದರು. 'ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ವ್ಯಕ್ತಿ ಮುಖ್ಯವಲ್ಲ ವಿಚಾರ ಮುಖ್ಯ. ಹೋರಾಟಕ್ಕೆ ಕಾವು ಮುಖ್ಯ ಎಂದು ಮಾತು ಪ್ರಾರಂಭಿಸಿದ ಪುಟ್ಟಯ್ಯ ಅವರು ಎಸ್. ಎಸ್.ಹಿರೇಮಠ್‌ರವರ ವಿದ್ವತ್ತಿಗೆ ಸಿಗಬೇಕಾದ ಮನ್ನಣೆ ಸಿಗಲಿಲ್ಲ ಎಂದು ನೋವಿನಿಂದ ನುಡಿದರು. ಇಂದು ಕರ್ನಾಟಕ ಮಾತ್ರವಲ್ಲ ಭಾರತದ ಎಲ್ಲಾ ಪ್ರಜಾಸತಾತ್ಮಕ ಹೋರಾಟದ ವಿಮರ್ಶೆಯ ಕಾಲವಾಗಿದೆ. ಜನರ ಬೆವರಿನಿಂದ ಚಳುವಳಿ ಹುಟ್ಟಬೇಕು' ಎಂದರು.

'ಹೋರಾಟದ ನೆಲೆಯಾಗಿದ್ದ ಫ್ರೀಡಂ ಪಾರ್ಕನ್ನು ಲೂಟಿಕೋರರು ಆಕ್ರಮಿಸಿದ್ದಾರೆ. ಚಳುವಳಿಯನ್ನು ಹೇಗೆ ವಿಮರ್ಶೆ ಮಾಡಬೇಕು ಎನ್ನುವುದನ್ನು ವಿಶದೀಕರಿಸಿದರು. 80ರ ದಶಕದ ಹೋರಾಟದ ಜ್ಞಾನ ಈಗ ಇಲ್ಲವಾಗಿದೆ. ಹೋರಾಟದ ಹಾಡುಗಳು ಇಂದು ಸುಗಮ ಸಂಗೀತವಾಗಿವೆ. ಹೋರಾಟಗಾರ ಪ್ರಭುತ್ವಕ್ಕೆ ಮುಖಮುಖಿಯಾಗಿರಬೇಕು. ಆದರೆ ಇಂದು ಕೆಲವರು ಪ್ರಭುತ್ವದೊಂದಿಗೆ ರಾಜಿ ಮಾಡಿಕೊಂಡಿದ್ದಾರೆ. ಮತ್ತೆ ಕೆಲವರು ಬೆನ್ನು ತೋರಿಸುತ್ತಿದ್ದಾರೆ. ಕೆಲವರು ನಾಡನ್ನು ಬಿಟ್ಟು ಹೋರಾಟಕ್ಕೆ ಕಾಡಿಗೆ ಹೋಗಿದ್ದಾರೆ. ಈ ನಡೆಗಳು ಚಳುವಳಿಯ ವೈಫಲ್ಯಕ್ಕೆ ಕಾರಣವಾಗಿವೆ ಎಂದರು. ಪರಿಸರದ ಹೋರಾಟವನ್ನು ಭೂ ಹೋರಾಟವಾಗಿ ಬದಲಾಯಿಸಬೇಕು. ಹಾಗಾದಾಗ ಮಾತ್ರ ಪರಿಸರವನ್ನು ಉಳಿಸಲು ಸಾಧ್ಯ. ಪರಿಸರದ ಬಗ್ಗೆಯೂ ಅಪವ್ಯಾಖ್ಯಾನಗಳು ನಡೆದಿವೆ ಎಂದರು.

ಅತಿಥಿ ಭಾಷಣ ಮಾಡಿದ ಎಂ.ಪಿ.ವೀಣಾ (ದಿ.ಎಂ.ಪಿ.ಪ್ರಕಾಶ್‌ರವರ ಮಗಳು) 'ವಿದ್ಯಾರ್ಥಿಗಳು ಪ್ರಶ್ನೆ ಮಾಡುವ ಗುಣವನ್ನು ಕಳೆದುಕೊಂಡಿದ್ದಾರೆ. ಟಿ.ವಿ.ಧಾರಾವಾಹಿಗಳು ಹೆಣ್ಣುಮಕ್ಕಳು ಆಲೋಚನೆ ಮಾಡುವುದನ್ನೇ ತಡೆಹಿಡಿದಿವೆ. ಅವರಲ್ಲಿ ಮಾನಸಿಕ ಕ್ಷೋಭೆಯನ್ನು ಉಂಟುಮಾಡುತ್ತಿವೆ. ಸೀರಿಯಲ್ ಸಂತೆಗಳಿಗೆ ಸೇರುವ ಜನ ಹೋರಾಟಕ್ಕೆ ಬರುತ್ತಿಲ್ಲ. ಜನಪ್ರತಿನಿಧಿಗಳಿಗೆ ಜನಹಿತವೇ ಬೇಡವಾಗಿದೆ. ಸಂವಿಧಾನ ಬೇಡ ಎನ್ನುವವರು ಮನುವಾದ ತರಲು ಹವಣಿಸುತ್ತಿದ್ದಾರೆ. ಇದರಿಂದ ಮೊದಲು ಶೋಷಣೆಗೊಳಗಾಗುವುದು ಹೆಣ್ಣುಮಕ್ಕಳು. ದಿಕ್ಕು ತಪ್ಪುತ್ತಿರುವ ಯುವಪೀಳಿಗೆಯನ್ನು ಹೋರಾಟಕ್ಕೆ ಅಣಿನೆರೆಸುವ ಮೂಲಕ ಸರಿದಾರಿಗೆ ತರಬೇಕಿದೆ' ಎಂದು ಎಚ್ಚರಿಸಿದರು.

ಗೋಷ್ಠಿ–2:

'ಬಹುತ್ವ ಭಾರತದ ಸಾಂಸ್ಕೃತಿಕ ಬಿಕ್ಕಟ್ಟುಗಳ' ಕುರಿತು ವಿಚಾರವಾದಿ ಎ.ಬಿ.ರಾಮಚಂದ್ರಪ್ಪ ವಿಷಯ ಮಂಡಿಸಿದರು. ಭಾರತದ ಜೀವವಿರುವುದೇ ಬಹುತ್ವದಲ್ಲಿ ಆದರೆ ಈಗ ಬಹುತ್ವಕ್ಕೆ ಭಂಗ ಬಂದಿದೆ. ಸರ್ವಾಧಿಕಾರದ ಧೋರಣೆಗಳು ಬೀಜಾಂಕುರವಾಗಿವೆ. ನಮ್ಮಲ್ಲಿನ ವೈವಿಧ್ಯತೆಗಳು ಒಂದನ್ನೊಂದು ಗರ್ಭೀಕರಿಸಿಕೊಂಡು ಬಾಳಿಬದುಕಿವೆ. ಸಂವಿಧಾನ ಬಹುತ್ವದ ನೆಲೆಗಳನ್ನು ತನ್ನ ಆಶಯವಾಗಿ ಹೊಂದಿದೆ. ಪ್ರಭುತ್ವ ಬಹುಸಂಸ್ಕೃತಿಯ ಅನನ್ಯತೆಯನ್ನು ಒಗ್ಗೂಡದ ಹಾಗೆ ನೋಡಿಕೊಳ್ಳುತ್ತಿದೆ. ಧರ್ಮದ ಅಫೀಮನ್ನು ನೀಡಿ ಜನರನ್ನು ಹೊಡೆದಾಡಿಕೊಳ್ಳುವಂತೆ ತಂತ್ರ ಹೆಣೆಯುತ್ತಿದೆ. ಧರ್ಮದ ನಡುವಿನ ಸಂಘರ್ಷಕ್ಕೆ ಹೆಣ್ಣು ಬಲಿಯಾಗುತ್ತಿದ್ದಾಳೆ. ತಳಸಮುದಾಯಗಳ ಅಸ್ಮಿತೆ ನಾಶವಾಗುತ್ತಿದೆ. ಈಗ ನಾವು ಎದುರಿಸುತ್ತಿರುವ ಬಿಕ್ಕಟ್ಟು ಚರಿತ್ರೆಯಲ್ಲಿರಲಿಲ್ಲ. ಪ್ರಶ್ನೆ ಮಾಡುವುದು, ಪ್ರಜಾಸತ್ತಾತ್ಮಕವಾಗಿ ಮಾತನಾಡುವುದು ಅಪರಾಧವಾಗಿದೆ. ಏಕಧರ್ಮ, ಏಕಕಾನೂನು ಬಹುತ್ವದ ನೆಲೆಯನ್ನೇ ನಾಶಪಡಿಸುತ್ತದೆ. ತಳಸಮುದಾಯದಲ್ಲಿ ಸ್ವಾಭಿಮಾನವನ್ನು ಬಿತ್ತುವುದೇ ಇಂದು ಅಪರಾಧವಾಗಿದೆ. ನಮ್ಮ ಆಲೊಚನೆಯನ್ನು ಪ್ರಭುತ್ವ ನಿಯಂತ್ರಿಸುತ್ತದೆ. ಹಸು ಪ್ರಭುತ್ವದ ರಾಜಕೀಯ ಅಸ್ತ್ರವಾಗಿದೆ. ದನದ ಮಾಂಸವನ್ನು ವಿದೇಶಕ್ಕೆ ಮಾರುತ್ತಿರುವವರು(ಬ್ರಾಹ್ಮಣರು) ಗೋಸಂರಕ್ಷಣೆಯ ಹೆಸರಿನಲ್ಲಿ ಗಲಭೆ ಸೃಷ್ಠಿಸಿ ಅಲ್ಪಸಂಖ್ಯಾತರು ಮತ್ತು ದಲಿತರ ಮೇಲೆ ದಾಳಿ ನಡೆಸುತ್ತಿದ್ದಾರೆ. ಈ ಸಂಕಟಕ್ಕೆ ನಾವು ಮುಖಾಮುಖಿಯಾಗಬೇಕಿದೆ. ಹಸುವನ್ನು ತಿನ್ನಬೇಡಿ ಎಂದು ನಾನು ಮುಸಲ್ಮಾನರಿಗೆ ಹೇಳುತ್ತೇನೆ. ಅವರು ಒಪ್ಪದಿದ್ದರೆ ನಾನು ಮುಸಲ್ಮಾನರ ಪರವಾಗಿರುತ್ತೇನೆ ಎಂಬ ಗಾಂಧೀಜಿಯ ನಿಲುವು ನಮಗೆ ಮಾದರಿಯಾಗಿದೆ ಎಂದರು.

ಇತ್ತೀಚೆಗೆ ಅಕ್ಷರಸ್ಥರ ನಡುವೆ ಹೆಚ್ಚು ಮೌಢ್ಯಗಳು ನೆಲೆಗೊಂಡಿವೆ. ಸನಾತನ ವ್ಯವಸ್ಥೆಯ ಪಥ್ಯಗಳೇ ಪರಮಸತ್ಯವೆಂದು ನಾವು ತಿಳಿದಿದ್ದೇವೆ. ಅನ್ಯ ಸಂಸ್ಕೃತಿಯೊಂದು ನಮ್ಮಲ್ಲಿ ಪ್ರವೇಶ ಆದಾಗ ಬಿಕ್ಕಟ್ಟುಗಳು ಉಂಟಾಗುತ್ತವೆ. ನಮ್ಮ ವರ್ತಮಾನ ವರ್ತಮಾನವಾಗಿ ಉಳಿದಿಲ್ಲ. ಭೂತಕಾಲದ ಹಳಸಿದ ಅನ್ನಕ್ಕೆ ಕೈಚಾಚುತ್ತಿದ್ದೇವೆ. ರಾಷ್ಟ್ರೀಯ ಹೋರಾಟದ ಸಂಕೇತವಾಗಿದ್ದ ಗಣೇಶನ ಹಬ್ಬವನ್ನು ಗಲಭೆ ಸೃಷ್ಠಿಸಲು ಬಳಸಿಕೊಳ್ಳಲಾಗುತ್ತಿದೆ. ಸಂಘಟನೆಯಲ್ಲಿ ಇದ್ದವರು ಇಂದು ಮಾರಾಟವಾಗುತ್ತಿದ್ದಾರೆ. ಮತಮಾನ್ಯಗಳ ದಾಸರಾಗುತ್ತಿದ್ದಾರೆ. ಗೋಡ್ಸೆಯನ್ನು ದೇಶಭಕ್ತ ಎಂದು ಬಿಂಬಿಸಲಾಗುತ್ತಿದೆ. ಹುಸಿ ರಾಷ್ಟ್ರೀಯತೆ ವಿಜೃಂಭಿಸುತ್ತಿದೆ. ಈ ದೇಶದ ನಿಜವಾದ ಕಸ ಜಾತಿ ವ್ಯವಸ್ಥೆಯಾಗಿದೆ. ಅದನ್ನು ಗುಡಿಸುವ ಕೆಲಸವನ್ನು ಬುದ್ಧ, ಬಸವ ಮಾಡಿದರು. ವೈದಿಕ ಪರಂಪರೆಯಲ್ಲಿಯೇ ಭ್ರಷ್ಟಾಚಾರದ ಬೇರುಗಳಿವೆ. ಅಣ್ಣಾ ಹಜಾರೆಯ ಭ್ರಷ್ಟಾಚಾರ ವಿರೋಧಿ ಹೋರಾಟದಲ್ಲಿ ಭ್ರಷ್ಟರು ವಿಜೃಂಭಿಸಿದ್ದು ಮಹಾವ್ಯಂಗ್ಯವಾಗಿದೆ. ಸಾಂಸ್ಕೃತಿಕ ಬಿಕ್ಕಟ್ಟುಗಳು ಮತಮಾನ್ಯಗಳ ನಡವಳಿಕೆಗಳಲ್ಲಿ ಅಡಗಿವೆ ಎಂದು ಎ.ಬಿ.ರಾಮಚಂದ್ರಪ್ಪ ವಿವರಿಸಿದರು.

ಲೇಖಕ ಡಾ.ಅರುಣ್ ಜೋಳದ ಕೂಡ್ಲಿಗಿಯವರು ಸಹ ಸ್ಪಂದನೆಯ ಮಾತುಗಳನ್ನಾಡಿದರು. 'ಭಾರತವು ಬಲಪಂಥದ ಕಡೆಗೆ ದಾಪುಗಾಲು ಇಡುತ್ತಿದೆ. ಫ್ಯಾಸಿಸ್ಟ್ ಶಕ್ತಿಗಳು ವ್ಯವಸ್ಥಿತವಾಗಿ ಜನರನ್ನು ತಮ್ಮ ಕಾರ್ಯತಂತ್ರಕ್ಕೆ ಬಳಸಿಕೊಳ್ಳುತ್ತಿವೆ. ಭಾರತದಾದ್ಯಂತ ಭೀತಿಯನ್ನು ಭಿತ್ತಲಾಗುತ್ತಿದೆ. ಭಯ ಬಹುತ್ವದ ಶಕ್ತಿಯನ್ನು ಕುಂದಿಸುತ್ತಿದೆ. ಮೂಲಭೂತವಾದವನ್ನು ಹಿಮ್ಮೆಟ್ಟಿಸಲು ಸನ್ನದ್ಧರಾಗುವ ಮೊದಲು ನಾವು ನಮ್ಮ ಆತ್ಮಾವಲೋಕನ ಮಾಡಿಕೊಳ್ಳಬೇಕು. ಆಶಾವಾದಿಗಳಾಗಬೇಕು. ಬಹುತ್ವದ ಒಳಗಿರುವ ವೈರುಧ್ಯಗಳನ್ನು ಗುರುತಿಸಿಕೊಳ್ಳಬೇಕು. ಅದಕ್ಕೆ ತಕ್ಕ ಕಾರ್ಯಾಚರಣೆಯನ್ನು ನಾವು ರೂಪಿಸಬೇಕು' ಎಂದರು.. ವೇದಿಕೆಯಲ್ಲಿ ಡಿ.ರಾಮನ್‌ಮಲಿ, ಜೆ.ಕಲೀಂಭಾಷಾ, ಪಿ.ಆರ್.ವೆಂಕಟೇಶ್ ಉಪಸ್ಥಿತರಿದ್ದರು.

ಸಮಾರೋಪದ ಮಾತುಗಳನ್ನಾಡಿದ ಡಾ.ಸಿದ್ದನಗೌಡ ಪಾಟೀಲ್‌ರವರು ಭಾರತ ಇಂದು ಆತಂಕದ ಸನ್ನಿವೇಶದಲ್ಲಿದೆ. ಖಡ್ಗವಾಗಲಿ ಕಾವ್ಯ–ದುಡಿವ ಜನರ ಪ್ರಾಣಮಿತ್ರ ಎಂದು ನಾವು ಹೇಳುತ್ತಿರುವಾಗಲೇ ಜನರ ಮಧ್ಯೆ ಅಂತರ ಸಂಬಂಧ ನಿಂತು ಹೋಗಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಗೌರಿ, ಕಲ್ಬುರ್ಗಿ ಹತ್ಯೆ ಸಂದರ್ಭದಲ್ಲಿ ವ್ಯಾಪಕವಾದ ಪ್ರತಿರೋದ ಮೂಡಿಬರಲಿಲ್ಲ ಎಂದು ನೋವಿನಿಂದ ನುಡಿದರು. ಚಿಂತನೆಯಿಲ್ಲದ ಚಟುವಟಿಕೆ ಚಟುವಟಿಕೆಯಿಲ್ಲದ ಚಿಂತನೆ ಕುರುಡುತನವಾಗುತ್ತದೆ. ಜಾಗತೀಕರಣ ಪ್ರಕ್ರಿಯೆ ಇಡೀ ವಿಶ್ವವನ್ನೇ ವ್ಯಾಪಿಸಬೇಕೆಂಬ ಬಂಡವಾಳಶಾಹಿ ಸಂಘರ್ಷ 1991ರಲ್ಲಿ ಬೃಹತ್ ರೂಪ ಪಡೆಯಿತು. ಆರ್.ಎಸ್.ಎಸ್ ಪ್ರಾರಂಭದಿಂದಲೂ ಭಾರತದ ಸಂವಿಧಾನ ಮತ್ತು ತ್ರಿವರ್ಣ ಧ್ವಜವನ್ನು ವಿರೋಧಿಸುತ್ತಾ ಬಂದಿದೆ. ಭಗವಾನ್ ಧ್ವಜ ರಾಷ್ಟ್ರ ಧ್ವಜವಾಗಬೇಕೆಂದು ಅದು ಪ್ರತಿಪಾದಿಸುತ್ತಿದೆ. ಭಾರತವನ್ನು ಒಂದುಮಾಡುವ, ಒಳಗೊಳ್ಳುವ ಕೆಲಸವನ್ನು ನಮ್ಮ ಸಂವಿಧಾನ ಮಾಡಿದೆ. ಅನೇಕ ವೈರುಧ್ಯಗಳ ನಡುವೆ ಒಕ್ಕೂಟ ವ್ಯವಸ್ಥೆ ರೂಪುಗೊಂಡಿತು. ಆದರೆ ಆರ್.ಎಸ್.ಎಸ್ ಅದನ್ನು ಒಪ್ಪಲಿಲ್ಲ. ಮುಷ್ಕರ ಕಾರ್ಮಿಕರ ಜನ್ಮಸಿದ್ಧ ಹಕ್ಕು ಎಂದು ಅಂಬೇಡ್ಕರ್ ಪ್ರತಿಪಾದಿಸಿದರು. ಫ್ರಾನ್ಸ್‌ಕ್ರಾಂತಿಯ ಮೂರು ತತ್ವಗಳನ್ನು (ಸ್ವಾತಂತ್ರ್ಯ,ಪ್ರಜಾಪ್ರಭುತ್ವ, ಸಮಾನತೆ) ನಮ್ಮ ಸಂವಿಧಾನದ ನಿರ್ದೇಶಕ ತತ್ವಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಫ್ಯಾಸಿಸ್ಟ್ ಶಕ್ತಿಗಳು ವ್ಯಕ್ತಿಯನ್ನು ಒಪ್ಪಿಕೊಂಡು ವ್ಯಕ್ತಿತ್ವವನ್ನು ನಾಶಮಾಡುತ್ತಿವೆ. ಅಂಬೇಡ್ಕರ, ಭಗತ್‌ಸಿಂಗ್, ವಿವೇಕಾನಂದರ ವಿಚಾರಗಳನ್ನು ನಾಶಮಾಡಲು ಅವರನ್ನು ಒಪ್ಪಿಕೊಂಡಂತೆ ನಟಿಸಲಾಗುತ್ತಿದೆ. ಇಂದು ಓಟು ಹಾಕುವುದು ಸಹ ರಾಜಕೀಯ ಸ್ವಾತಂತ್ರ್ಯವಾಗಿ ಉಳಿದಿಲ್ಲ. ಓಟು ಮಾರಾಟವಾಗುತ್ತಿವೆ. ಕಾರ್ಪೋರೇಟ್ ಕಂಪನಿಗಳು ಪಾರ್ಲಿಮೆಂಟಿಗೆ ನಿರ್ದೇಶನ ಮಾಡುತ್ತಿವೆ. ಸಣ್ಣ, ಮಧ್ಯಮ ಕಾರ್ಖಾನೆಗಳನ್ನು ನಾಶಮಾಡಿ ಕಾರ್ಪೋರೇಟ್ ಕಂಪನಿಗಳನ್ನು ಬೆಳೆಸಲಾಗುತ್ತಿದೆ. ಆದ್ದರಿಂದ ಮೋದಿ ಆರ್ಥಿಕ ಕುಸಿತದ ಬಗ್ಗೆ ಮಾತನಾಡುತ್ತಿಲ್ಲ ಎಂದು ಖಾರವಾಗಿ ನುಡಿದರು.

ಕವಿ ಹುಲಿಕಟ್ಟಿ ಚನ್ನಬಸಪ್ಪ ಮಾತನಾಡಿ 'ವರ್ತಮಾನದ ತಲ್ಲಣಗಳಿಗೆ ನಾವು ಮುಖಾಮುಖಿಯಾಗದಿದ್ದರೆ ಕಾಲ ನಮ್ಮನ್ನು ಕ್ಷಮಿಸುವುದಿಲ್ಲ ಎಂದರು. ಬಾಂಬೆ ಹೈಕೋರ್ಟಿನ ನ್ಯಾಯಾಧೀಶರೊಬ್ಬರು ಟಾಲ್‌ಸ್ಟಾಲ್ ಬರೆದಿರುವ 'ಯುದ್ಧ ಮತ್ತು ಶಾಂತಿ' ನಿಷೇಧಿತ ಕೃತಿ ಎಂದು ಘೋಷಿಸಿರುವುದು ದಿಗ್ಭ್ರಮೆ ಮೂಡಿಸಿದೆ. ಈ ಘಟನೆ ನ್ಯಾಯಾಂಗದ ಮೇಲಿನ ವಿಶ್ವಾಸವನ್ನು ಕುಸಿಯುವಂತೆ ಮಾಡಿದೆ. ಫ್ಯಾಸಿಸ್ಟ್ ಸ್ವರೂಪದ ದಾಳಿಗಳನ್ನು ಹಿಮ್ಮೆಟ್ಟಿಸಲು ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಬೇಕು' ಎಂದರು.

ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರೊ॥ಡಿ.ಬಿ.ಬಡಿಗೇರ್ ಸಾಹಿತಿಯಾದವನು ಸಮಾಜಮುಖಿಯಾಗಿರಬೇಕು. ಜನಪರವಾಗಿ ಬರೆಯಬೇಕು ಎಂದರು. ಸಾಹಿತ್ಯ ಸೃಷ್ಠಿಗೆ ಧಾತುವನ್ನು ಒದಗಿಸುವುದು ಈ ಸಮಾಜ. ಸಮಾಜದಿಂದ ಪಡೆದ್ದದನ್ನು ಸಮಾಜಕ್ಕೆ ಮರಳಿಕೊಡಬೇಕು. ಬದುಕಿಗಾಗಿ ಕಲೆ ಎಂದು ನಂಬಿರುವ ಜನ ನಾವು. ಹೋರಾಟಕ್ಕೆ ಕ್ರಾಂತಿಕಾರಿ ಚಳುವಳಿಗೆ ಪೂರಕವಾದ ಸಾಹಿತ್ಯ ರಚನೆಯಲ್ಲಿ ತೊಡಗಬೇಕು. ಕ್ರಾಂತಿಯ ಚಕ್ರಕ್ಕೆ ಹಲ್ಲುಗಳು, ಸ್ಕ್ರೂಗಳು ಸಾಹಿತ್ಯವಾಗಿದೆ ಎಂಬ ಲೆನಿನ್ ಮಾತುಗಳನ್ನು ಉಲ್ಲೇಖಿಸಿ, ಸಾಹಿತಿಗಳ ಮುಂದಿರುವ ಜವಾಬ್ದಾರಿಯ ಬಗ್ಗೆ ತಿಳಿಸಿದರು. ಸಮಾರೋಪ ಸಮಾರಂಭದ ವೇದಿಕೆಯಲ್ಲಿ ಸಾಹಿತಿಗಳಾದ ಇಸ್ಮಾಯಿಲ್ ಯಲಿಗಾರ್, ಪ್ರಾಧ್ಯಾಪಕ ಎಂ.ಗಂಗಪ್ಪ ಉಪಸ್ಥಿತರಿದ್ದರು. ವಿಚಾರ ಸಂಕಿರಣದಲ್ಲಿ ಸುಮಾರು ಇನ್ನೂರು ಜನ ಭಾಗವಹಿಸಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ನಾಲ್ಕು ನೂರಕ್ಕೂ ಹೆಚ್ಚು ಜನ ಭಾಗವಹಿಸಿದ್ದನ್ನು ಕಂಡು ಹೊಸ ಭರವಸೆ, ಹೊಸ ಸ್ಫೂರ್ತಿಯನ್ನು ಪಡೆದೆವು. ●

ಬ್ರಿಟನ್ ಪ್ರಧಾನಿ ಜಾನ್ಸನ್ ಗೆ ಮುಖಭಂಗ

'ನೋ ಡೀಲ್ ಬ್ರೆಕ್ಸಿಟ್' ಮತ್ತು 'ವಿಸರ್ಜನೆ'ಗೆ ಪಾರ್ಲಿಮೆಂಟ್ ನಿರಾಕರಣೆ



ಬ್ರಿಟನ್ನಿನ ಪ್ರಮುಖ ಎರಡು ರಾಜಕೀಯ ಪಕ್ಷಗಳಾದ ಕನ್ಸರ್ವೇಟಿವ್ ಮತ್ತು ಲೇಬರ್ ಪಕ್ಷಗಳ ನಡುವೆ ಯುರೋಪಿಯನ್ ಒಕ್ಕೂಟದಿಂದ (ಇ.ಯು) ಬ್ರಿಟನ್ ಹೊರಬರುವ (ಬ್ರೆಕ್ಸಿಟ್) ವಿಷಯದಲ್ಲಿ ಬಿಕ್ಕಟ್ಟು ತೀವ್ರಗೊಂಡು ಬ್ರಿಟನ್ ನಲ್ಲಿ ಮತ್ತೆ ರಾಜಕೀಯ ಅಸ್ಥಿರತೆ ಉಂಟಾಗಿದೆ. ಇದರ ಪರಿಣಾಮವು ಈಗಾಗಲೇ ಕನ್ಸರ್ವೇಟಿವ್ ಪಕ್ಷದ ಪ್ರಧಾನಿ ತೆರೇಸಾ ಮೇ ಯವರನ್ನು ಬಲಿ ತೆಗೆದುಕೊಂಡಿದೆ. ಅವರು, ಬ್ರೆಕ್ಸಿಟ್ ಒಪಂದಕ್ಕೆ ನೀಡಿದ್ದ ಗಡುವಿನ ಒಳಗೆ ತನ್ನ ಯೋಜನೆಗಳ–ರೂಪುರೇಷೆಗಳನ್ನು ಸಮರ್ಥಿಸಿ ಕೊಳ್ಳಲು ಸಾಧ್ಯವಾಗಲಿಲ್ಲ. ಪಕ್ಷದೊಳಗಿನ ತನ್ನ ಸಂಸದರನ್ನು ಒಳಗೊಂಡಂತೆ, ಟೋರಿ ಬಂಡಾಯಗಾರರು ಹಾಗೂ ಪ್ರಮುಖ ಪ್ರತಿಪಕ್ಷ ಲೇಬರ್ ಪಕ್ಷ ದೊಂದಿಗೆ, ಸುಮಾರು ಎರಡು ವರ್ಷಗಳ ಕಾಲ ನಡೆಸಿದ ಚರ್ಚೆಯಲ್ಲಿ ವಿಫಲವಾಗಿ, ಕೊನೆಗೆ ಪಾರ್ಲಿಮೆಂಟ್ ನಲ್ಲಿ ಒಪ್ಪಿಸಿ ಅನುಮೋದನೆ ಪಡೆಯುವಲ್ಲಿಯೂ ಸೋತು ಸುಣ್ಣವಾದರು. ಬಳಿಕ ಅನಿವಾರ್ಯವಾಗಿ ಮೇ 25, 2019 ರಂದು ರಾಜೀನಾಮೆ ನೀಡಬೇಕಾಯಿತು.

ಆನಂತರ, ಮೇ ಯವರ ಉತ್ತರಾಧಿಕಾರಿಯಾಗಿ ಬೋರಿಸ್ ಜಾನ್ಸನ್ ಪ್ರಧಾನ ಮಂತ್ರಿ ಪಟ್ಟಕ್ಕೇರಿದರು. ಬ್ರೆಕ್ಸಿಟ್ ಪ್ರಕ್ರಿಯೆಗಳನ್ನು ಯಾವುದೇ "ಒಪ್ಪಂದ ಇಲ್ಲದೆ" (ನೋ–ಡೀಲ್), ಪುನಃ ನಿಗದಿ ಪಡಿಸಿದ್ದ ಅಕ್ಟೋಬರ್ 31 ರ ಗಡುವಿನೊಳಗೆ ಪೂರ್ಣ ಗೊಳಿಸಿ, ಬ್ರಿಟನ್ ಅನ್ನು ಯುರೋಪಿಯನ್ ಒಕ್ಕೂಟದಿಂದ ಹೊರತರುವುದಾಗಿ ಕೊಚ್ಚಿಕೊಂಡಿದ್ದರು. ಆದರೆ, ಇವರ ನೋ ಡೀಲ್ ಒಪ್ಪಂದವು ಬ್ರಿಟನಿನ ಆರ್ಥಿಕತೆಯ ಮೇಲೆ ಘೋರ ಪರಿಣಾಮ ಬೀರುತ್ತದೆ ಎಂದು ಬ್ರೆಕ್ಸಿಟ್ ವಿರೋಧಿಸುವ ಆರ್ಥಿಕ ಮತ್ತು ಕಾನೂನು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಈ ಹಿನ್ನೆಲೆಯಲ್ಲಿ ಎಲ್ಲಾ ಪ್ರತಿಪಕ್ಷಗಳು "ನೋ ಡೀಲ್" ಒಪ್ಪಂದವನ್ನು ಪಾರ್ಲಿಮೆಂಟ್ ನಲ್ಲಿಯೂ ತಿರಸ್ಕರಿಸಿದ್ದಾರೆ. ಯುನೈಟೆಡ್ ಕಿಂಗ್ಡಮ್ ನ ನಿಗದಿತ ಅವಧಿ ಕಾಯಿದೆಯ ಅನ್ವಯ 650 ಸಂಸದರನ್ನು ಹೊಂದಿರುವ ಪಾರ್ಲಿಮೆಂಟ್ ನಲ್ಲಿ, ಮೊದಲ ಹಂತದಲ್ಲಿ 329–300 ಮತಗಳಿಂದ, ಎರಡನೆ ಹಂತದಲ್ಲಿ ಅಂತಿಮವಾಗಿ 327–299 ಮತಗಳಿಂದ ತಿರಸ್ಕರಿಸಲಾಯಿತು. ಇದರಿಂದಾಗಿ, ಪ್ರಧಾನಿ ಜಾನ್ಸನ್ ರು, ಬಹುಮತಕ್ಕೆ ಅಗತ್ಯವಿದ್ದ ಮತಗಳನ್ನು ಪಡೆಯಲು ವಿಫಲವಾದ್ದರಿಂದ, ಸಾರ್ವತ್ರಿಕ ಚುನಾವಣೆಯನ್ನು ಅಕ್ಟೋಬರ್ 15 ರಂದು ಕ್ಷಿಪ್ರವಾಗಿ ನಡೆಸಲು ಅನುವು ಮಾಡಿಕೊಡುವ ಮಸೂದೆಯನ್ನು ಮಂಡಿಸಿದರು. ಇದರಲ್ಲಿ, ಲೇಬರ್ ಪಕ್ಷ ಗೈರು ಹಾಜರಾತಿ ಯಿಂದಾಗಿ "ಕ್ಷಿಪ್ರ ಸಾರ್ವತ್ರಿಕ ಚುನಾವಣಾ ಮಸೂದೆ"ಯು ಸಹ ತಿರಸ್ಕರಿಸಲ್ಪಟ್ಟಿತು. ಈ ಮಸೂದೆ ಕಾನೂನು ಬಾಹಿರ ಕ್ರಮವೆಂದು ಸ್ಕಾಟಿಶ್ ಉಚ್ಚ ನ್ಯಾಯಾಲಯ ವು ಹೇಳಿದೆ. ಇದರಿಂದಾಗಿ ಬೋರಿಸ್ ಗೆ ಎರಡನೇ ಬಾರಿಯೂ ಮುಖಭಂಗವಾಯಿತು.

ಬ್ರಿಟನ್ ಜನರಿಗೆ ಶೀಘ್ರದಲ್ಲಿ ಚುನಾವಣೆ ಬೇಕಾಗಿಲ್ಲ, ಆದಾಗ್ಯೂ, ಪಾರ್ಲಿಮೆಂಟ್ ನಲ್ಲಿ ಬ್ರೆಕ್ಸಿಟ್ ಗೆ ಸಂಬಂದಿಸಿದಂತೆ 'ನೋ ಡೀಲ್' ಒಪ್ಪಂದ ಬಿದ್ದು ಹೋದ ಮೇಲೆ, ಅನಿವಾರ್ಯವಾಗಿ ಜನರೇ ಮುಂದಿನ ಪ್ರಧಾನಿ ಯಾರೆಂದು ನಿರ್ಧಾರ ಮಾಡುವ ಸಲುವಾಗಿಯೇ, ಈ ಕ್ಷಿಪ್ರ ಚುನಾವಣಾ ಮಸೂದೆಯನ್ನು ಮಂಡಿಸಲಾಯಿತು ಎಂದು ಸಮರ್ಥಿಸಿ ಕೊಂಡರು. ಆದರೆ, ಸಂಸತ್ತು ಚುನಾವಣೆ ನಡೆಸುವುದು ತಿರಸ್ಕರಿಸಿರುವಾಗ, ಇದೀಗ ಅನಿವಾರ್ಯವಾಗಿ ಮುಂದಿನ ಅಕ್ಟೋಬರ್17–18 ರಂದು ನಡೆಯುವ ಯುರೋಪಿಯನ್ ಒಕ್ಕೂಟದ ಶೃಂಗಸಭೆಯಲ್ಲಿ, ಬ್ರೆಕ್ಸಿಟ್ ಒಪ್ಪಂದ ದ ಅಂತಿಮ ಗಡುವು ವಿಸ್ತರಣೆಗೆ ಪ್ರಯತ್ನಿಸಬೇಕು ಎಂದು ಹೇಳಿದ್ದಾರೆ. ಒಟ್ಟಿನಲ್ಲಿ, ಸಂಸತ್ತಿನಲ್ಲಿ ಚರ್ಚಿಸಿ ಒಮ್ಮತಕ್ಕೆ ಬರುವವರೆಗೂ, ನೋ ಡೀಲ್ ಬ್ರೆಕ್ಸಿಟ್ ಒಪ್ಪಂದವನ್ನು ವಿಳಂಬ ಮಾಡುವ ತಂತ್ರಗಾರಿಕೆ ಇದಾಗಿದೆ ಎಂದು ರಾಜಕೀಯ ವಿಶ್ಲೇಷಣೆಕಾರರು ಹೇಳಿದ್ದಾರೆ.

ಜುಲೈ ನಲ್ಲಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಜಾನ್ಸನ್ ರ ಆಗಮನವನ್ನು ಹಲವು ನಗರಗಳಲ್ಲಿ ಭಾರೀ ಪ್ರತಿಭಟನೆಗಳ ಮೂಲಕ ಸ್ವಾಗತಿಸಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಏನಿದು ಬ್ರೆಕ್ಸಿಟ್, ನೋ ಡೀಲ್?

"ಬ್ರಿಟನ್" ಮತ್ತು " ಎಕ್ಸಿಟ್" ಎರಡು ಪದಗಳ ವ್ಯಾಕರಣದ "ಗುಣ ಸಂಧಿ" ಯೇ ಈ ಬ್ರೆಕ್ಸಿಟ್ ಆಗಿ ರೂಪುಗೊಂಡಿದೆ. ಸರಳವಾದ ಅರ್ಥದಲ್ಲಿ ಹೇಳುವುದಾದರೆ, ಯುರೋಪಿಯನ್ ಒಕ್ಕೂಟ (ಇ.ಯು) ದಿಂದ ಬ್ರಿಟನ್ ಅನ್ನು ಬೇರ್ಪಡಿಸುವುದೇ ಇದರ ಮೂಲಾರ್ಥ. ಇದರಿಂದ ಬ್ರಿಟನ್ ನಿನ ವಾಣಿಜ್ಯ, ಭದ್ರತೆ ಮತ್ತು ವಲಸೆ ನೀತಿಗಳನ್ನು ಬದಲಾಯಿಸಿ ಕೊಳ್ಳಲು ಸಾಧ್ಯವಾಗುತ್ತದೆ ಎಂಬುದು ಬ್ರೆಕ್ಸಿಟ್ ಪರ ರಾಜಕೀಯ ವಿಶ್ಲೇಷಣೆ ಯಾಗಿದೆ.

1972 ರಲ್ಲಿ ಯುನೈಟೆಡ್ ಕಿಂಗ್ಡಮ್ ಯುರೋಪಿಯನ್ ಆರ್ಥಿಕ ಸಮುದಾಯಕ್ಕೆ ಸೇರಿತು. 1975 ರಲ್ಲಿ ಮೊದಲು ನಡೆದ ಸದಸ್ಯತ್ವದ ಜನಮತ ಸಂಗ್ರಹಣೆಯಲ್ಲಿ, ಶೇ.67 ರಷ್ಟು ಮತಗಳು, ಯುರೋಪಿಯನ್ ಒಕ್ಕೂಟದ ಜೊತೆಗಿರಲು ಅನುಮೋದನೆ ನೀಡಿತ್ತು. ಆನಂತರ 2013 ರಲ್ಲಿ ಇ.ಯು ಸದಸ್ಯತ್ವ ದಲ್ಲಿ ಉಳಿಯ ಬೇಕೋ ಅಥವಾ ಬೇಡವೋ ? ನಿರ್ಣಯಿಸಲು ಪ್ರಯತ್ನಿಸುವುದಾಗಿ ಅಂದಿನ ಪ್ರಧಾನ ಮಂತ್ರಿ ಡೇವಿಡ್ ಕ್ಯಾಮೆರಾನ್ ಮತ್ತೆ ರಾಷ್ಟ್ರೀಯ ಜನ ಮತ ಸಂಗ್ರಹಣೆ ಮಾಡುವುದಾಗಿ ಭರವಸೆ ನೀಡಿದ್ದರು. ಆದರೆ, ಕ್ಯಾಮೆರಾನ್ ಇ.ಯು ಜೊತೆಗೆ ಸದಸ್ಯತ್ವ ಹೊಂದಿರುವುದು ಬ್ರಿಟನಿನ ಆರ್ಥಿಕ ತೆಯ ದೃಷ್ಟಿಯಿಂದ ಉತ್ತಮ ವೆಂದು ತಮ್ಮ ನಿಲುವನ್ನು ಸ್ಪಷಗೊಳಿಸಿದ್ದರು.

ಜೂನ್ 23, 2016 ರಂದು ನಡೆದ ಜನ ಮತ ಸಂಗ್ರಹಣೆಯಲ್ಲಿ ಶೇ.52 ರಷ್ಟು ಮತಗಳು ಬ್ರೆಕ್ಸಿಟ್ ಪರವಾಗಿತ್ತು. ಅಂದರೆ, ಇಂಗ್ಲೆಂಡ್ ಮತ್ತು ವೇಲ್ಸ್ ನಲ್ಲಿ ಮಾತ್ರ, ಬ್ರೆಕ್ಸಿಟ್ ಪರ ಹೆಚ್ಚಿನ ಜನರು ಮತ ಹಾಕಿದ್ದರು. ಪ್ರಮುಖ ವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಸಣ್ಣ ನಗರಗಳಲ್ಲಿ, ಯುರೋಪಿಯನ್ ಒಕ್ಕೂಟದ ಜೊತೆಯಲ್ಲಿ ಇರಬೇಕೆಂದು, ಲಂಡನ್ ನಗರ, ಸ್ಕಾಟ್ ಲ್ಯಾಂಡ್ ಮತ್ತು ಉತ್ತರ ಐರ್ ಲ್ಯಾಂಡ್ ನಲ್ಲಿ ಬಹುತೇಕರು ಬ್ರೆಕ್ಸಿಟ್ ವಿರುದ್ಧ ಮತ ಚಲಾಯಿಸಿದ್ದರು. ಅದರಲ್ಲಿಯೂ ಹೆಚ್ಚಾಗಿ ಯುವಕರು ಬ್ರೆಕ್ಸಿಟ್ ವಿರುದ್ಧ ಹಾಗೂ ಹಿರಿಯರು ಬ್ರೆಕ್ಸಿಟ್ ಪರ ಮತದಾನ ಮಾಡಿದ್ದರು. ಇವೆಲ್ಲಾ ಕಾರಣಗಳು ಬ್ರೆಕ್ಸಿಟ್ ಒಪ್ಪಂದವನ್ನು ಅನುಷ್ಠಾನಕ್ಕೆ ತರಲು ತಡೆಯೊಡ್ಡಿವೆ ಎನ್ನಲಾಗಿದೆ.

ಇನ್ನು, 'ನೋ ಡೀಲ್ ಬ್ರೆಕ್ಸಿಟ್' ನಿಂದ ಆರ್ಥಿಕ ತೆಯ ಮೇಲೆ ಘೋರ ದುಷ್ಪರಿಣಾಮ ಬೀರುತ್ತದೆ ಎಂಬುದರಲ್ಲಿ ವಾಸ್ತವತೆಯಿದೆ. ಇತ್ತೀಚೆಗೆ ಬಿಡುಗಡೆಯಾದ ಆಪರೇಷನ್ ಯೆಲ್ಲೋ ಹ್ಯಾಮರ್ ನ ಅಂದಾಜಿನಂತೆ, ಬ್ರಿಟನ್ ಕೆಟ್ಟ ಸನ್ನಿವೇಶವನ್ನು ಎದುರಿಸ ಬೇಕಾಗುತ್ತದೆ. ಅವುಗಳೆಂದರೆ, ಸರಕು ಸಾಗಣೆಯ ಲಾರಿಗಳು ಎರಡು ದಿನಗಳ ಕಾಲ ತಡವಾಗಿ ಬ್ರಿಟನ್ ತಲುಪುತ್ತವೆ. ಇದರ ಪರಿಣಾಮ ಆಹಾರ ಮತ್ತು ಇಂಧನಗಳ ಬೆಲೆ ಏರಿಕೆಯಾಗುತ್ತದೆ. ಇದು ಕಡಿಮೆ ಆದಾಯ ಹೊಂದಿರುವವರ ಮೇಲೆ ನೇರ ಪರಿಣಾಮ ಬೀರುತ್ತದೆ. ಸುಮಾರು ಆರು ತಿಂಗಳ ಕಾಲ ಔಷದಿಗಳ ಕೊರತೆ ತೀವ್ರ ಸ್ವರೂಪ ಮುಟ್ಟುತ್ತದೆ. ಒಟ್ಟಾರೆಯಾಗಿ ಜನರ ಸಂಕಷ್ಟಗಳು ವಿಪರೀತವಾಗುತ್ತದೆ. ಇದರಿಂದಾಗಿ, ಬ್ರೆಕ್ಸಿಟ್ ಪರ ಮತ್ತು ವಿರುದ್ದದ ಎರಡು ಕಡೆಗಳಿಂದ ಪ್ರತಿಭಟನೆಗಳು ನಡೆಯುವ ಸಂಭವವಿರುತ್ತದೆ.

ಈ ಬಿಕ್ಕಟ್ಟನ್ನು ಪರಿಹರಿಸುವುದು ಹೇಗೆ ಎಂಬ ಪ್ರಶ್ನೆಗೆ ಜಾನ್ಸನ್ ತನ್ನದೇ ಆದ ಕಾರಣ ನೀಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಎಂಟು ವಾರಗಳ ಕಾಲ ಸಂಸತ್ತಿನ ಕಾಲಾಪಗಳನ್ನು ಸಸ್ಪೆಂಡ್ ಮಾಡಲಾಗಿದೆ. ಬ್ರೆಕ್ಸಿಟ್ ಒಪ್ಪಂದವನ್ನು ಜಾರಿಗೊಳಿಸಲು ಮತ್ತಷ್ಟು ಕಾಲ ವ್ಯಯ ಮಾಡುವುದು ಜಾನ್ಸನ್ ನ ತಂತ್ರವಾಗಿದೆ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ರಷ್ಯಾ ಪ್ರಾದೇಶಿಕ ಚುನಾವಣೆ

ಕಮ್ಯೂನಿಸ್ಟ್ ಪಾರ್ಟಿಗೆ ಗಮನಾರ್ಹ ವಿಜಯ



ಸೆಪ್ಟೆಂಬರ್ 8 ರಂದು ರಷ್ಯಾದಲ್ಲಿ ನಡೆದ ಪ್ರಾದೇಶಿಕ ಚುನಾವಣೆ ಗಳಲ್ಲಿ ಕಮ್ಯೂನಿಸ್ಟ್ ಪಾರ್ಟಿ ಆಫ್ ರಷ್ಯನ್ ಫೆಡರೇಷನ್ (ಕೆ.ಪಿ.ಆರ್.ಎಫ್) ಗಮನಾರ್ಹ ವಿಜಯ ಸಾಧಿಸಿದೆ. ಪ್ರಮುಖ ವಾಗಿ ಮಾಸ್ಕೊ ಸಿಟಿಯ ಡುಮಾ ದಲ್ಲಿ ತಮ್ಮ ಸ್ಥಾನಗಳನ್ನು 5 ರಿಂದ 13 ಕ್ಕೆ ಹೆಚ್ಚಿಸಿಕೊಂಡಿದೆ. ಈ ಮದ್ಯೆ ಪ್ರಸ್ತುತ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ನೇತೃತ್ವದ ಯುನೈಟೆಡ್ ರಷ್ಯಾ ಪಕ್ಷವು ಹಲವಾರು ಪ್ರದೇಶಗಳಲ್ಲಿ ಕಳಪೆ ಪ್ರದರ್ಶನದ ಮೂಲಕ ತೀವ್ರವಾಗಿ ಮತಗಳ ಕುಸಿತವನ್ನು ಅನುಭವಿಸಿದೆ.

ಮಾಸ್ಕೊ ಸಿಟಿಯ ಡ್ಯೂಮದಲ್ಲಿ ಕೆ.ಪಿ.ಆರ್. ಎಫ್. 13 ಸ್ಥಾನ ಗಳನ್ನು ಗಳಿಸಿದ್ದರೆ, ಪುಟಿನ್ ರ ಆಡಳಿತ ಪಕ್ಷ 25 ಸ್ಥಾನ ಗಳನ್ನು ಗಳಿಸಿಕೊಂಡಿದೆ. ಅದು ಹಿಂದಿನ ಚುನಾವಣೆಗೆ ಹೋಲಿಸಿದರೆ, 13 ಸ್ಥಾನ ಗಳನ್ನು ಕಳೆದು ಕಳೆದುಕೊಂಡಿದೆ. ಅದರಲಿ, ಎಂಟು ಸ್ಥಾನಗಳನ್ನು ಕಮ್ಯೂನಿಸ್ಟ್ ಪಕ್ಷ ತನ್ನ ತೆಕ್ಕೆಗೆ ಹಾಕಿಕೊಂಡಿದೆ. ಕಮ್ಯೂನಿಸ್ಟ್ ಪಕ್ಷದ ಈ ಮುನ್ನಡೆಯನ್ನು ಗಮನಾರ್ಹ ಸಾಧನೆ ಎಂದು ಗುರುತಿಸಲಾಗಿದೆ. ಚುನಾವಣೆಗೆ ಮುನ್ನಾ ಆಗಸ್ಟ್ ತಿಂಗಳಲ್ಲಿ ನಾಮಪತ್ರ ಸಲ್ಲಿಕೆ ಮತ್ತು ಪರಿಶೀಲನೆ ಸಂದರ್ಭದಲ್ಲಿ ಅಕ್ರಮಗಳು ಮತ್ತು ತಾರತಮ್ಯಗಳು ನಡೆದಿದ್ದವು. ಇದರ ವಿರುದ್ಧ ಪ್ರತಿಭಟನೆಗಳು ಭುಗಿಲೆದಿದ್ದವು. ಇದರಲ್ಲಿ ಬಾರಿ ಜನಸ್ತೋಮ ಪಾಲ್ಗೊಂಡಿತ್ತು. ಈ ಪ್ರತಿಭಟನೆಗಳ ನೇತೃತ್ವ ವನ್ನು ಕೆ.ಪಿ.ಆರ್.ಎಫ್. ವಹಿಸಿತ್ತು.

ಗಮನಿಸ ಬೇಕಾದ ಅಂಶವೆಂದರೆ, ಪುಟಿನ್ ಪ್ರತಿನಿಧಿಸುವ ಮತದಾನದ ಕ್ಷೇತ್ರದಲ್ಲಿಯೂ ಸಹಾ, ಕಮ್ಯೂನಿಸ್ಟ್ ಪಕ್ಷದ ಅಭ್ಯರ್ಥಿ ನಿಕೊಲಾಸ್ ಗುಬೆಂಕೊ, ತನ್ನ ಪ್ರತಿ ಸ್ಪರ್ಧಿ, ರಷ್ಯಾದ ಒಕ್ಕೂಟದ ಪುತಿನ್ ಬೆಂಬಲಿತ ಅಭ್ಯರ್ಥಿಗಿಂತ ಶೇ 58.29 ರಷ್ಟು ಮತಗಳನ್ನು ಹೆಚ್ಚು ಗಳಿಸಿದ್ದಾರೆ ಎಂದು ವರದಿಯಾಗಿದೆ.

2014 ರ ಚುನಾವಣೆ ಗೆ ಹೋಲಿಸಿದರೆ, ಕೆ.ಪಿ.ಆರ್.ಎಫ್. ಗೆ ಉತ್ತಮ ಫಲಿತಾಂಶಗಳು ಬಂದಿವೆ. ಕಮ್ಯೂನಿಸ್ಟ್ ಪಕ್ಷದ ಕೇಂದ್ರೀಯ ಸಮಿತಿಯ ಸಭೆಯ ನಂತರ, ಅದರ ಅಧ್ಯಕ್ಷ ರಾದ, ಗೆನ್ನಡಿ ಜೈಗಾನೋವ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ, ರಷ್ಯಾದಲ್ಲಿ ಕಮ್ಯೂನಿಸ್ಟ್ ಪಕ್ಷವು ತನ್ನ ಅಸ್ತಿತ್ವ ವನ್ನು ಉಳಿಸಿಕೊಂಡಿದೆ ಮತ್ತು ಈ ಚುನಾವಣಾ ಫಲಿತಾಂಶ ಗಳು ಎಲ್ಲಾ ಸ್ಥಳೀಯ ಸಂಸತ್ತು ಗಳಲ್ಲಿ ಕೆ.ಪಿ.ಆರ್.ಎಫ್. ತನ್ನ ಸ್ಥಾನಗಳನ್ನು ಬಲಪಡಿಸಿಕೊಂಡಿದೆ ಎಂದು ಹೇಳಿದ್ದಾರೆ.

ಹರಪನಹಳ್ಳಿಯಲ್ಲಿ ಬಂಡಾಯ ಸಾಹಿತ್ಯ ವಿಚಾರ ಸಂಕಿರಣ

‘21ನೇ ಶತಮಾನ ಚೀರಾಟದ ಶತಮಾನವಾಗಿದೆ’

ನಾಡೋಜ ಬರಗೂರು ರಾಮಚಂದ್ರಪ್ಪ

ಹುಲಿಕಟ್ಟಿ ಚನ್ನಬಸಪ್ಪ

‘ಸಮಕಾಲೀನ ಸಂದರ್ಭದಲ್ಲಿ ಸಂವಿಧಾನ ಮತ್ತು ಚಳುವಳಿಗಳು’ ಆಶಯದೊಂದಿಗೆ ಹರಪನಹಳ್ಳಿ ಬಂಡಾಯ ಸಾಹಿತ್ಯ ಸಂಘಟನೆಯಿಂದ 2019 ಸೆಪ್ಟೆಂಬರ್–8 ರಂದು ದೇವರಾಜ ಅರಸು ಸಮುದಾಯ ಭವನದಲ್ಲಿ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿತ್ತು. "ಎಸ್.ಎಸ್.ಹಿರೇಮಠ ವೇದಿಕೆ"ಯಲ್ಲಿ ನಡೆದ ವಿಚಾರ ಸಂಕಿರಣವನ್ನು ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪನವರು ಡೊಳ್ಳುಬಾರಿಸುವ ಮೂಲಕ ಚಾಲನೆ ನೀಡಿದರು. ‘ಎಸ್.ಎಸ್.ಹಿರೇಮಠ್‌ರವರು ತಾವು ನಂಬಿದ ಸಿದ್ಧಾಂತದ ವಿಶ್ವಾಸಾರ್ಹತೆಯನ್ನು ಉಳಿಸಿಕೊಂಡು ಕೊನೆಯ ಉಸಿರು ಇರುವ ತನಕ ಬದುಕಿದವರು. ಬಳ್ಳಾರಿ ಜಿಲ್ಲೆಯಲ್ಲಿ ಎಡಚಳುವಳಿಯನ್ನು ಕಟ್ಟಿ ಬೆಳೆಸುವಲ್ಲಿನ ಅವರ ಕೊಡುಗೆ ಮಹತ್ವಪೂರ್ಣವಾದುದು. ಅಂದು ರಾಜ್ಯಾದ್ಯಂತ ನಡೆದ ‘ಪುಸ್ತಕ ಜಾಥಾ’ದ ಯಶಸ್ಸಿನ ರೂವಾರಿಗಳಾಗಿದ್ದರು ಎಂದು ಬರಗೂರು ಶ್ಲಾಘಿಸಿದರು. ಪ್ರೊ.ಎಸ್.ಎಸ್.ಹಿರೇಮಠ್‌ರವರ ನೆನಪು ಕಿಕ್ಕಿರಿದು ನೆರೆದಿದ್ದ ಸಭಿಕರನ್ನು ಭಾವಪರವಶಗೊಳಿಸಿತು.

ಇದೇ ಸಂದರ್ಭದಲ್ಲಿ ದೇವರಾಜ ಅರಸುರವರ ಸಾಮಾಜಿಕ ಕೊಡುಗೆಯನ್ನು ಸ್ಮರಿಸಿದ ಬರಗೂರುರವರು ವಿಧಾನಸಭೆಯ ಬಣ್ಣವನ್ನು ಬದಲಿಸಿದವರು ಅರಸು ಎಂದರು. ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಮೊಟ್ಟಮೊದಲ ಬಾರಿಗೆ 133 ಜನ ಹಿಂದುಳಿದ ವರ್ಗದವರು ವಿಧಾನಸೌಧದ ಮೆಟ್ಟಿಲು ಹತ್ತುವಂತೆ ಮಾಡಿದ ಹೆಗ್ಗಳಿಕೆ ಅರಸುರವರದು. ಅವರನ್ನು ಭ್ರಷ್ಟ ಎಂದು ಹೇಳಲಾಗುತ್ತಿದೆ. ಆದರೆ ಇಂದಿಗೂ ಬೆಂಗಳೂರಿನಲ್ಲಿ ಅವರ ಹೆಸರಿನಲ್ಲಿ ಒಂದೇ ಒಂದು ಮನೆಯೂ ಸಹ ಇಲ್ಲ ಎಂದರು. ಬಂಡಾಯ ಸಾಹಿತ್ಯ ಸಂಘಟನೆ ಬಗ್ಗೆ ಅರಸುರವರಿಗೆ ಅಪಾರ ಒಲವಿತ್ತು. ಬೆಂಗಳೂರಿನಲ್ಲಿ ನಡೆದ ಇ.ಎಂ.ಎಸ್ ನಂಬೂದರಿಪಾದ್ ಭಾಷಣ ಕಾರ್ಯಕ್ರಮದ ಸಂದರ್ಭದಲ್ಲಿ ಸದ್ದಿಲ್ಲದೆ ಆಗಮಿಸಿದ ಅರಸುರವರು ಪ್ರೇಕ್ಷಕರ ಸಾಲಿನಲ್ಲಿ ಕುಳಿತು ಭಾಷಣ ಆಲಿಸಿದ ಪ್ರಸಂಗವನ್ನು ಸ್ಮರಿಸಿದರು.

‘ಇಂದು ಮರುಚಿಂತನೆಯ ಕಾಲಘಟ್ಟದಲ್ಲಿ ನಾವಿದ್ದೇವೆ. ಇಂದಿನ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಬಿಕ್ಕಟ್ಟುಗಳಿಗೆ ನಾವು ಹೇಗೆ ಮುಖಾಮುಖಿಯಾಗಬೇಕು? ರಾಮನ ಹೆಸರಿನಲ್ಲಿ, ಗೋವಿನ ಹೆಸರಿನಲ್ಲಿ ದೇಶಭಕ್ತಿಯ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಚೀರಾಟ ನಡೆದಿದೆ. ಮತೀಯತೆಯನ್ನು ಧರ್ಮಾಂಧತೆ ಆವರಿಸಿಕೊಂಡಿದೆ. ವಿವೇಕವನ್ನು ಅವಿವೇಕ ಆವರಿಸಿಕೊಂಡಿದೆ. ಒಗ್ಗಟ್ಟನ್ನು ವಿಘಟನೆ,





ವಿಜ್ಞಾನವನ್ನು ಅಜ್ಞಾನ ಆವರಿಸಿಕೊಂಡಿದೆ’ ಎಂದು ವಿಷಾದ ವ್ಯಕ್ತಪಡಿಸಿದ ಬರಗೂರರು ಧರ್ಮ, ರಾಷ್ಟ್ರ ಮತ್ತು ಸಂಸ್ಕೃತಿಯ ಅಪವ್ಯಾಖ್ಯಾನ ವಿಜೃಂಭಿಸುತ್ತಿದೆ ಎಂದರು. ‘ಜಾತಿ ಜೈಲುಗಳು, ಧರ್ಮದ ದ್ವೀಪಗಳು ಸೃಷ್ಟಿಯಾಗಿವೆ. ಸಂಘಟನೆಯ ಒಳಗೂ ವಿಘಟನೆ ನಡೆದಿದೆ’. ಧಾರ್ಮಿಕತೆಯೇ ಬೇರೆ–ಧರ್ಮವೇ ಬೇರೆ ಎಂದು ವಿಶ್ಲೇಷಿಸಿದ ಅವರು ಭಕ್ತಿಗೂ ಬೈಲಾಬೇಕೆ? ಎಂದು ಪ್ರಶ್ನಿಸಿದರು.

‘ಇಂದು ಧರ್ಮಗುರುಗಳು ಜಾತಿಗುರುಗಳಾಗಿ ಬದಲಾಗಿದ್ದಾರೆ. ಶಬರಿ, ಬೇಡರ ಕಣ್ಣಪ್ಪ ಇವರದು ನಿಜವಾದ ಭಕ್ತಿಯಾಗಿತ್ತು. ಇಂದಿನ ರಾಮಭಕ್ತರು, ದೇಶಭಕ್ತರದು ಹುಸಿ ಭಕ್ತಿಯಾಗಿದೆ. ಧರ್ಮವನ್ನು ಸಾಂಸ್ಥೀಕರಿಸಲಾಗುತ್ತಿದೆ. ರಾಷ್ಟ್ರೀಯತೆಗೆ ಹತ್ತಾರು ಧಾರೆಗಳಿವೆ. ಭಗತ್‌ಸಿಂಗ್ ಗಾಂಧೀಜಿ, ಸುಭಾಷ್‌ಚಂದ್ರಬೋಸ್, ಸ್ವಾಮಿ ವಿವೇಕಾನಂದ, ಬಿ.ಆರ್.ಅಂಬೇಡ್ಕರ್, ಕಮ್ಯುನಿಷ್ಟರು, ಲೋಹಿಯಾವಾದಿಗಳು ರಾಷ್ಟ್ರೀಯತೆಯ ಬೇರೆಬೇರೆ ಧಾರೆಗಳಾಗಿದ್ದರು. ಆದರೆ ಅವರೆಲ್ಲರ ಗುರಿ ಒಂದೇ ಆಗಿತ್ತು. ಹಿಂದುತ್ವವು ಈ ಎಲ್ಲಾ ಧಾರೆಗಳನ್ನು ನಾಶಮಾಡಿ ಒಂದೇ ದೇಶ, ಒಂದೇ ಧರ್ಮ, ಒಬ್ಬನೇ ನಾಯಕ ಎಂದು ಹೇಳುತ್ತಿರುವುದು ಅಪಾಯಕಾರಿಯಾಗಿದೆ. ರಾಷ್ಟ್ರೀಯತೆಯಲ್ಲಿ ಧರ್ಮ ಒಂದು ಭಾಗ ಮಾತ್ರ, ಧರ್ಮವೇ ದೇಶವಲ್ಲ’ ಎಂದರು. ಜನರ ಜೀವನ ವಿಧಾನವೇ ಸಂಸ್ಕೃತಿಯಾಗಿದೆ. ಬುದ್ಧ, ಬಸವ, ವಾಲ್ಮೀಕಿ, ಕನಕ ಮುಂತಾದವರೆಲ್ಲಾ ಸಂಸ್ಕೃತಿಯ ಭಾಗವೇ ಆಗಿದ್ದಾರೆ. ಯಾವುದನ್ನು ನಿರಾಕರಿಸಬೇಕು ಎಂದು ನಾವು ಯೋಚಿಸಬೇಕು. ಭಾವನಾತ್ಮಕತೆಯಲ್ಲಿ ಸೈದ್ಧಾಂತಿಕತೆ ಅರಳಬೇಕಿದೆ. ಭಿನ್ನಾಭಿಪ್ರಾಯವೇ ಬೇರೆ, ಬೈಯ್ಯುವುದೇ ಬೇರೆ. ನೆಹರೂರವರನ್ನು ಬೈಯ್ಯುವವರ ಪಡೆಯೇ ಹುಟ್ಟಿಕೊಂಡಿದೆ. ನಿತ್ಯ ನೆಹರೂರವರನ್ನು ಬೈಯ್ಯುವುದೇ ಅವರ ಕೆಲಸವಾಗಿದೆ. ಭಿನ್ನಮತೀಯರನ್ನು, ಪ್ರಶ್ನೆ ಕೇಳುವವರನ್ನು ದೇಶದ್ರೋಹಿಗಳೆಂದು ಬಿಂಬಿಸಲಾಗುತ್ತಿದೆ. ಇಂದು ಸಂವಾದ ಸತ್ತು ಹೋಗಿದೆ. ಗಾಂಧಿ, ನೆಹರೂ ಭಿನ್ನಮತದ ಬಗ್ಗೆ ಸಹನೆ ಉಳ್ಳವರಾಗಿದ್ದರು.

ಪುಟ 14 ಕ್ಕೆ

ಕಕ್ಷೆಯಲ್ಲಿ ದೇವರಥ ಮತ್ತು ಭಕ್ತಿರಸ

ಕೇಳಿಸಿದ್ದು

ಮನುಷ್ಯ ಮೊದಲ ಬಾರಿ ಭೂಮಿಯನ್ನು ಬಿಟ್ಟು ಆಚೆ ಹೊರಟಾಗ ವಿಜ್ಞಾನದ ಹೆಗಲೇರಿ ಧರ್ಮವೂ ಸವಾರಿ ಹೊರಟಿತ್ತು ಗೊತ್ತೆ? ಐವತ್ತು ವರ್ಷಗಳ ಹಿಂದೆ, 1969ರಲ್ಲಿ ಅಪೋಲೊ–11ರ ಮೂಲಕ ಮೊದಲ ಬಾರಿಗೆ ನೀಲ್ ಆರ್ಮ್‌ಸ್ಟ್ರಾಂಗ್ ಮತ್ತು ಬಝ್ ಆಲ್‌ಡ್ರಿನ್ ಇಬ್ಬರೂ ಲ್ಯಾಂಡರ್ ನೌಕೆಯನ್ನು ಚಂದ್ರನ ಮೇಲೆ ಇಳಿಸಿದರು. ತನ್ನದು ದೇವರಥವೆಂದೇ ನಂಬಿದಂತಿದ್ದ ಆಲ್‌ಡ್ರಿನ್ ಮಹಾಶಯ ನೌಕೆಯಿಂದ ಹೊರಬರುವ ಮೊದಲು ಚರ್ಚ್‌ನಿಂದ ತಂದಿದ್ದ ಪವಿತ್ರ ತೀರ್ಥ (ವೈನ್) ಮತ್ತು ಪ್ರಸಾದದ (ಬ್ರೆಡ್) ಸೇವನೆ ಮಾಡಿದ. ಕೊಲಂಬಸ್ ಅಮೆರಿಕಕ್ಕೆ ಕಾಲಿಟ್ಟಾಗ ಕ್ರಿಶ್ಚಿಯನ್ ಧರ್ಮವನ್ನೂ ಒಯ್ದು ಬಿತ್ತರಿಸಿದ ಮಾದರಿಯಲ್ಲೇ ಈತ ಚಂದ್ರನ ಮೇಲೆ ನಿಂತು ದೇವರ ಮಹಿಮೆಯನ್ನು ಸಾರಲು ಬಯಸಿದ್ದ. ಆದರೆ ನಾಸಾ ಅನುಮತಿ ನೀಡಿರಲಿಲ್ಲ.

ಏಕೆ ನೀಡಲಿಲ್ಲ ಎಂಬುದಕ್ಕೂ ಒಂದು ಹಿನ್ನೆಲೆ ಇದೆ: ಮೆಡೆಲಿನ್ ಓ’ಹೇರ್ ಎಂಬಾಕೆ ನಾಸಾದ ವಿರುದ್ಧ ಈ ಮೊದಲೇ ಖಟ್ಲೆ ಹೂಡಿದ್ದಳು. ಕಾರಣವೇನೆಂದರೆ, ಒಂದು ವರ್ಷ ಮುಂಚೆ, 1968ರಲ್ಲಿ ಗಗನನೌಕೆ ಅಪೊಲೊ–8 ಚಂದ್ರನನ್ನು ಸುತ್ತುತ್ತಿದ್ದಾಗ ಅದರಲ್ಲಿದ್ದ ಮೂವರೂ ಗಗನಯಾತ್ರಿಗಳು ಸರದಿಯ ಮೇಲೆ ‘ಬುಕ್ ಆಫ್ ಜೆನೆಸಿಸ್’ನ (ಕ್ರಿಶ್ಚಿಯನ್ನರ ಆದಿ ಧರ್ಮಗ್ರಂಥದ) ಆಯ್ದ ಭಾಗಗಳನ್ನು ಓದಿದ್ದರು. ಕಕ್ಷೆಯಿಂದ ನೇರ ಪ್ರಸಾರಗೊಂಡ ಆ ಮೊದಲ ಟಿ.ವಿ ಕಾರ್ಯಕ್ರಮವೇ ಕೆಲವರನ್ನು ಕೆರಳಿಸಿತ್ತು. ಸರ್ಕಾರ ಮತ್ತು ಚರ್ಚ್ ನಡುವೆ ಯಾವ ಸಂಬಂಧವೂ ಇರಕೂಡದೆಂದು ಅಮೆರಿಕದ ಸಂವಿಧಾನವೇ ಹೇಳಿರುವಾಗ, ಸರ್ಕಾರಿ ಸ್ವಾಮ್ಯದ ನಾಸಾ ಸಂಸ್ಥೆ ಹಾಗೆಲ್ಲ ಧರ್ಮಪ್ರಸಾರ ಮಾಡುವಂತಿಲ್ಲ ಎಂದು ಇದೇ ಮಹಿಳೆ ನಾಸಾ ವಿರುದ್ಧ ಖಟ್ಲೆ ಹೂಡಿದ್ದಳು. ಅದಕ್ಕೂ ಮುಂಚೆ, ಆಕೆ ಇನ್ನೊಂದು ಸಾಹಸ ಮಾಡಿದ್ದಳು: ಸರ್ಕಾರಿ ಅನುದಾನ ಪಡೆಯುವ ಶಾಲೆಗಳಲ್ಲಿ ಬೈಬಲ್ಲನ್ನು ಪ್ರಾರ್ಥನೆಯಂತೆ ಓದುವುದರ ವಿರುದ್ಧವೂ ದಾವೆ ಹೂಡಿ ಸರ್ವೋಚ್ಚ ನ್ಯಾಯಾಲಯದಲ್ಲಿ ಗೆದ್ದಿದ್ದಳು. ನಾಸಾ ಸಹಜವಾಗಿಯೇ ಬೆದರಿತ್ತು. ಗಗನಯಾತ್ರಿ ಬಝ್ ಆಲ್‌ಡ್ರಿನ್ ಗೆ ನಾಸಾ, ‘ನೀನು ಅಲ್ಲಿ ಏನಾದರೂ ಮಾಡ್ಕೊ, ಆದರೆ ರೇಡಿಯೊ ಮೂಲಕ ಜಗತ್ತಿಗೆಲ್ಲ ತಿಳಿಸಕೂಡದು’ ಎಂದು ಹೇಳಿತ್ತು.

ಅಮೆರಿಕದ ಕೆಲವು ಚರ್ಚ್‌ಗಳಲ್ಲಿ ಈಗಲೂ ಆತನ ಚಂದ್ರನ ಮೇಲಿನ ದೇವಪೂಜೆಯನ್ನು ನೆನೆಸಿಕೊಂಡು ಪ್ರತಿ ಸೋಮವಾರ ಪ್ರಾರ್ಥನಾಸೇವೆ ನಡೆಯುತ್ತಿದೆ. ಇತ್ತ ಸರ್ಕಾರಿ ಸಂಸ್ಥೆಗಳ ಮೇಲಿದ್ದ ಧರ್ಮದ ಬಿಗಿಮುಷ್ಟಿ ಸಡಿಲವಾಗುವಂತೆ ಮಾಡಿದ ಮೆಡೆಲಿನ್ ಕತೆ ಮಾತ್ರ ದಾರುಣವಾಗಿದೆ. ಕಟ್ಟಾ ಸ್ತ್ರೀವಾದಿಯಾಗಿದ್ದ ಆಕೆ ಅಮೆರಿಕದ ನಿರೀಶ್ವರವಾದಿ ಸಂಘದ ಮೊದಲ ಅಧ್ಯಕ್ಷೆಯೂ ಆಗಿದ್ದಳು. 1995ರಲ್ಲಿ ಆಕೆಯನ್ನೂ ಆಕೆಯ ಮಗ ಮತ್ತು ಮೊಮ್ಮಗಳನ್ನೂ ಬರ್ಬರವಾಗಿ ಕೊಲೆ ಮಾಡಲಾಯಿತು. ಅವರೆಲ್ಲರ ಶವ ಪತ್ತೆಯಾದಾಗ, ಎಲ್ಲರ ಕಾಲುಗಳನ್ನು ಗರಗಸದಿಂದ ಕತ್ತರಿಸಿದ್ದು, ದೇಹವನ್ನು ಅಲ್ಲಲ್ಲಿ ಸುಟ್ಟಿದ್ದು ಕಂಡುಬಂತು (ಬದುಕಿದ್ದಿದ್ದರೆ ಮೆಡೆಲಿನ್ ಓ’ಹೇರ್‌ಗೂ ಇದು ನೂರನೆಯ ವರ್ಷ).

ದೇವರಿಗೆ, ಧರ್ಮಕ್ಕೆ ಶರಣಾಗದೆ ಕಕ್ಷೆಗೆ ಹೋದವರಲ್ಲಿ ನಾಸ್ತಿಕರೂ ಇದ್ದರು. ‘ನನಗೆ ದೇವರ ಮೇಲಲ್ಲ, ಮನುಷ್ಯನ ಮೇಲೆ ಗಾಢ ನಂಬಿಕೆ ಇದೆ. ಮಾನವನ ತಾಕತ್ತು, ತಾರ್ಕಿಕ ಶಕ್ತಿ ಮತ್ತು ಅವನಲ್ಲಿನ ಅಸೀಮ ಸಾಧ್ಯತೆಗಳ ಮೇಲೆ ಅಚಲ ವಿಶ್ವಾಸವಿದೆ’ ಎಂದು ಸೋವಿಯತ್ ರಷ್ಯಾದ (ಪೃಥ್ವಿಯ) ಎರಡನೆಯ ಗಗನಯಾತ್ರಿ ಘರ್ಮನ್ ಟಿಟೊವ್ ಹೇಳಿದ್ದ. ಯೂರಿ ಗಗಾರಿನ್ ನಂತರ ಭೂಮಿಯನ್ನು ಸುತ್ತಿದ ಈತ 17 ಬಾರಿ ಕಕ್ಷೆಗೆ ಹೋಗಿ ಬಂದವ.

‘ವಿಜ್ಞಾನದೊಂದಿಗೆ ಧರ್ಮವನ್ನು ಬೆರೆಸಬಾರದು; ಅವೆರಡರ ಮಾರ್ಗಗಳೂ ಬೇರೆಬೇರೆ’ ಎಂದು ವಿಕಾಸ ‘ವಿಜ್ಞಾನಿ ಸ್ಟೀಫನ್ ಜೇಗೋಲ್ಡ್ ಮೊದಲಾಗಿ ಅನೇಕ ವಿಜ್ಞಾನ ಚಿಂತಕರು ವಾದಿಸುತ್ತಾರೆ. ಅಮೆರಿಕದ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ ಕೂಡ ಅದೇ ನಿಲುವನ್ನು ತಳೆದಿದೆ. ನಮ್ಮಲ್ಲೂ ಇಸ್ರೊ ಮತ್ತು ಡಿಆರ್‌ಡಿಓದಂಥ ಸರ್ಕಾರಿ ಸಂಘಟನೆಗಳ ಮುಖ್ಯಸ್ಥರು ರಾಕೆಟ್ ಹಾರಿಸುವ ಮುನ್ನ ದೈವಾನುಗ್ರಹವನ್ನು ಕೋರುವುದಕ್ಕೆ ಹಿಂದೆಯೂ ಅನೇಕ ಬಾರಿ ಪ್ರಶ್ನೆಗಳೆದ್ದಿದ್ದವು. ಧರ್ಮಶ್ರದ್ಧೆ, ದೈವೀಭಕ್ತಿ ವಿಜ್ಞಾನಿಗಳಿಗೆ ಇದ್ದರೆ ಅದು ಖಾಸಗಿಯಾಗಿರಬೇಕೆ ವಿನಾ ಸಾಂಸ್ಥಿಕ ಪ್ರದರ್ಶನವಾದರೆ ಅಲ್ಲಿ ಶ್ರಮಿಸುವ ಇತರ ವಿಜ್ಞಾನಿಗಳ ಆತ್ಮವಿಶ್ವಾಸಕ್ಕೆ ಬೆಲೆಯಿಲ್ಲದಂತಾಗುತ್ತದೆ; ವಿಜ್ಞಾನವನ್ನು ದುರ್ಬಲಗೊಳಿಸಿದಂತಾಗುತ್ತದೆ. ಇದೀಗ ಓಡುತ್ತಿರುವ ಚಂದದ ‘ಮಿಶನ್ ಮಂಗಲ್’ ಸಿನಿಮಾದಲ್ಲಿ ಈ ಸಂದೇಶವನ್ನು ಸೂಕ್ಷ್ಮವಾಗಿ ತೋರಿಸಲಾಗಿದೆ. ಸಂಕಷ್ಟದಲ್ಲಿ ದೇವರನ್ನು ಪ್ರಾರ್ಥಿಸಲು ಹೊರಟ ಸಹೋದ್ಯೋಗಿಗಳಿಗೆ ಕಥಾನಾಯಕ, ‘ವಿಜ್ಞಾನವೇ ನನ್ನ ಧರ್ಮ; ಬೇರೆಯದು ನನಗೆ ಗೊತ್ತಿಲ್ಲ’ ಎನ್ನುತ್ತ ಮಂಗಳಯಾನವನ್ನು ಬಚಾವು ಮಾಡಲು ಧಾವಿಸುತ್ತಾನೆ. ಮಿಶನ್ ಯಶಸ್ವಿಯಾಗುತ್ತದೆ. ಇಸ್ರೊದಲ್ಲಿ ವಾಸ್ತವದಲ್ಲೂ ಅಂಥವರ ಸಂಖ್ಯೆ ಹೆಚ್ಚಾಗಲೆಂದು ಯಾವ ದೇವರಿಗೆ ಹರಕೆ ಹೊರೋಣ?

– ನಾಗೇಶ ಹೆಗಡೆ, ಪ್ರಜಾವಾಣಿ ಸೆ.12

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**